

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 15 ಬುಧವಾರ 2022

ಸಂಪುಟ: 43 | ಸಂಚಿಕೆ: 60 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ನೂತನ ಲೋಕಾಯುಕ್ತರಾಗಿ ನ್ಯಾ. ಬಿ.ಎಸ್.ಪಾಟೀಲ್

ಇಂದು ಪ್ರಮಾಣ ವಚನ

ಬೆಂಗಳೂರು: ರಾಜ್ಯ ಸರ್ಕಾರ ಕೊನೆಗೂ ಲೋಕಾಯುಕ್ತರನ್ನು ನೇಮಕ ಮಾಡಿದ್ದು, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ, ಹಾಲಿ ಉಪ ಲೋಕಾಯುಕ್ತ ಭೀಮನ ಗೌಡ ಸಂಗನಗೌಡ ಪಾಟೀಲ್ ಅವರು ನೂತನ ಲೋಕಾಯುಕ್ತರಾಗಿ ನೇಮಕಗೊಂಡಿದ್ದಾರೆ.



ಬಿ.ಎಸ್.ಪಾಟೀಲ್

ಬಿ.ಎಸ್.ಪಾಟೀಲ್ ಅವರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಡಿದ್ದ ಶಿಫಾರಸಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಬಿ.ಎಸ್.ಪಾಟೀಲ್ ನಾಳೆ(ಜೂ.15) ಬೆಳಗ್ಗೆ ರಾಜಭವನದಲ್ಲಿ ನೂತನ ಲೋಕಾಯುಕ್ತರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಹಿಂದೆ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರು 2022ರ ಜನವರಿ 27ರಂದು ನಿವೃತ್ತರಾಗಿದ್ದರು. ಅಂದಿನಿಂದ ಈ ಹುದ್ದೆ ಖಾಲಿ ಇತ್ತು ಈ ಹುದ್ದೆಗೆ ಈಗ ಬಿ.ಎಸ್.ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ. 2019ರ ನವೆಂಬರ್‌ನಿಂದ ಉಪಲೋಕಾಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ವಿಧಾನಸಭೆ ಮತ್ತು ವಿಧಾನಪರಿಷತ್ ವಿರೋಧ ಪಕ್ಷದ ನಾಯಕರ ಜತೆ ಸಮಾಲೋಚಿಸಿದ ಬಳಿಕ ಬಿ.ಎಸ್.ಪಾಟೀಲ್ ಅವರ ಹೆಸರನ್ನು ಲೋಕಾಯುಕ್ತ ಹುದ್ದೆಗೆ ಶಿಫಾರಸು ಮಾಡಿದ್ದರು. ಅದರಂತೆ ರಾಜ್ಯಪಾಲರು ನೇಮಕಾತಿ ಆದೇಶ ಹೊರಡಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಇಂದು ಮತ ಎಣಿಕೆ

● ಮೈಸೂರಿನ ಮಹಾರಾಣಿ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಅಗತ್ಯ ಸಿದ್ಧತೆ; ವ್ಯಾಪಕ ಪೊಲೀಸ್ ಬಂದೋಬಸ್ತ್ ● ಯಾರೊಬ್ಬರೂ ಮೊದಲ ಪ್ರಾಶಸ್ತ್ಯದ ನಿಗದಿತ ಖೋಟಾ ತಲುಪದಿದ್ದರೆ ಫಲಿತಾಂಶ ವಿಳಂಬ ಸಾಧ್ಯತೆ

ಮೈಸೂರು,ಜೂ. 14(ಆರ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಸೋಮವಾರ ನಡೆದ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ (ಜೂ.15) ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ನಡೆಯಲಿದೆ.

ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಮಾಧ್ಯಮ ಪ್ರತಿನಿಧಿಗಳಿಗೆ ಮತ ಎಣಿಕೆ ಸಿದ್ಧತೆ ಕುರಿತು ಮಾಹಿತಿ ನೀಡಿದರು. ಕ್ಷೇತ್ರ ವ್ಯಾಪ್ತಿಯ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 99,304 ಮಂದಿ ಮತ ಚಲಾಯಿಸಿದ್ದು, ಶೇ.69.95ರಷ್ಟು ಮತದಾನವಾಗಿದೆ ಎಂದರು.

ಜೂನ್ 15ರಂದು ಬುಧವಾರ ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ಬೆಳಗ್ಗೆ 7.45 ಗಂಟೆಗೆ ಸ್ಟ್ರಾಂಗ್ ರೂಂನಿಂದ ಮತ ಪೆಟ್ಟಿಗೆಗಳನ್ನು ತೆಗೆದು, ನಂತರ ತಿರಸ್ಕೃತ ಮತಗಳನ್ನು ಬೇರ್ಪಡಿಸಿ ಊರ್ಜಿತ ಮತಗಳಿರುವ ಮತ ಪತ್ರಗಳನ್ನು ತಲಾ 25ರಂತೆ ಬಂಡಲ್ ಮಾಡಲಾಗುವುದು. ಈ ಪ್ರಕ್ರಿಯೆ ಪೂರ್ಣಗೊಳ್ಳುವಷ್ಟರಲ್ಲಿ ಮಧ್ಯಾಹ್ನವಾಗಲಿದ್ದು, ಮಧ್ಯಾಹ್ನ ಭೋಜನದ ನಂತರ ಮತಗಳ ಎಣಿಕೆ ಕಾರ್ಯ ಆರಂಭಿಸಲಾಗುವುದು. ಮೊದಲ ಪ್ರಾಶಸ್ತ್ಯದ ಮತಗಳನ್ನು ಯಾವ ಅಭ್ಯರ್ಥಿ ಒಟ್ಟು ಊರ್ಜಿತ ಮತಗಳ ಶೇ.50 ಮತ್ತು 1 ಅನ್ನು ಪಡೆಯುತ್ತಾರೋ ಅವರು ನಿಗದಿತ ಖೋಟಾ ತಲುಪಿ ಜಯಶೀಲರಾದರೆಂದು ಫಲಿತಾಂಶ ಪ್ರಕಟಿಸಲಾಗುವುದು. ಒಂದು ವೇಳೆ ಯಾವ ಅಭ್ಯರ್ಥಿಯೂ ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ನಿಗದಿತ ಖೋಟಾ ▶ 8ನೇ ಪುಟಕ್ಕೆ



ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿ ನಗರ ಪೊಲೀಸರ ಕಾವಲು. ಮತ ಎಣಿಕೆಗೆ ಸಜ್ಜುಗೊಳಿಸಿರುವುದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು ನಗರದಲ್ಲಿ ನಿಷೇಧಾಜ್ಞೆ

ಮೈಸೂರು,ಜೂ.14(ಆರ್‌ಕೆ)–ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಮತ ಎಣಿಕೆ ನಡೆಯುವ ಹಿನ್ನೆಲೆಯಲ್ಲಿ ನಾಳೆ(ಜೂ.15) ಬೆಳಗ್ಗೆ 6ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಮೈಸೂರು ನಗರ ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಮತ ಎಣಿಕೆ ನಡೆಯುವ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬಳಿ ವಿಜಯೋತ್ಸವ, ಮೆರವಣಿಗೆ, ಪಟಾಕಿ ಸಿಡಿಸುವುದು, ಸ್ಫೋಟಕ ವಸ್ತು, ಮಾರಕಾಸ್ತ್ರ ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ. ಎಣಿಕಾ ಕೇಂದ್ರದ ಸುತ್ತ 200 ಮೀ. ವ್ಯಾಪ್ತಿ ಪ್ರದೇಶದಲ್ಲಿ 5ಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವುದು, ಪ್ರಚೋದನಾಕಾರಿ ಭಾಷಣ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ನಗರ ಪೊಲೀಸ್ ಕಮೀಷ್ನರ್ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಇಂದು ಮದ್ಯ ನಿರ್ಬಂಧ

ಮೈಸೂರು: ಮತ ಎಣಿಕೆ ಹಿನ್ನೆಲೆಯಲ್ಲಿ ಮೈಸೂರು ನಗರ ಸೇರಿದಂತೆ ನಗರ ವ್ಯಾಪ್ತಿಯಿಂದ 5 ಕಿ.ಮೀ. ಸುತ್ತಲಿನ ಪ್ರದೇಶದಲ್ಲಿ ಬುಧವಾರ ಮದ್ಯ ಮಾರಾಟಕ್ಕೆ ನಿರ್ಬಂಧ ವಿಧಿಸಲಾಗಿದೆ.



ಮಂಗಳವಾರ ಮಧ್ಯರಾತ್ರಿ 12ರಿಂದ ಬುಧವಾರ ಮಧ್ಯರಾತ್ರಿ 12ರವರೆಗೆ ಎಲ್ಲಾ ರೀತಿ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಬಂದ್ ಮಾಡುವಂತೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಆದೇಶ ಹೊರಡಿಸಿದ್ದಾರೆ.

ವಿಧಾನಸಭೆ ಚುನಾವಣೆಗೆ ಈಗಲೇ ಬಿಜೆಪಿ ನಾಯಕರಿಂದ ರಾಜ್ಯದಲ್ಲಿ

ಪರೋಕ್ಷ ಪ್ರಚಾರ!

ಬೆಂಗಳೂರು, ಜೂ. 14(ಕೆಎಂಶಿ)– ಮರಳಿ ಕರ್ನಾಟಕದಲ್ಲಿ ಅಧಿಕಾರ ಹಿಡಿಯಲು ಪಶ್ಚಿಮಬಂಗಾಳದ ಸೂತ್ರವನ್ನು ಪಾಲಿಸಲು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ರಾಜ್ಯ ವಿಧಾನಸಭೆಗೆ ಬರುವ ಏಪ್ರಿಲ್ ಮೇ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಈಗಿನಿಂದಲೇ ಪಕ್ಷದ ನಾಯಕರು ಕಣದಲ್ಲಿ ಸಕ್ರಿಯರಾಗುತ್ತಿದ್ದಾರೆ.

- ಸಮುದಾಯದ ಮುಖಂಡರು, ಸ್ವಾಮೀಜಿಗಳ ಭೇಟಿ
- ಪ್ರಧಾನಿಯಾದಿಯಾಗಿ ಕೇಂದ್ರ ಸಚಿವರಿಂದ ನಿರಂತರ ಪ್ರವಾಸ
- ಕರ್ನಾಟಕದ ಆಡಳಿತವನ್ನು ಉಳಿಸಿಕೊಳ್ಳಲು ತಂತ್ರಗಾರಿಕೆ

ಪಶ್ಚಿಮಬಂಗಾಳ ಹಾಗೂ ಹೈದರಾಬಾದ್ ನಗರಪಾಲಿಕೆಯಲ್ಲಿ ಪಕ್ಷ ಹಿಡಿತ ಸಾಧಿಸಲು ನಡೆಸಿದ ಹೋರಾಟದ ಸೂತ್ರವನ್ನೇ ಕರ್ನಾಟಕದಲ್ಲೂ ಅಳವಡಿಸಲು ಸಜ್ಜಾಗಿದೆ. ಇದಕ್ಕೆ ಮೊದಲ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು, ಚುನಾವಣೆಗೂ ಮುನ್ನವೇ 6ರಿಂದ 8 ಬಾರಿ ರಾಜ್ಯದ ವಿವಿಧೆಡೆ ಸರ್ಕಾರಿ ಮತ್ತು ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ.

ಇದೇ ಸಮಯಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಸೇರಿದಂತೆ ಪ್ರಮುಖ ನಾಯಕರು ರಾಜ್ಯದಲ್ಲಿ ಪ್ರವಾಸ ಕೈಗೊಂಡು ಪಕ್ಷ ಸಂಘಟನೆ ಜೊತೆ ಮತದಾರರ ಓಲೈಕೆಗೆ ಮುಂದಾಗಲಿದ್ದಾರೆ. ಕೆಲ ದಿನಗಳ ಹಿಂದೆ ರಾಜ್ಯಕ್ಕೆ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತುಮಕೂರಿನ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದ್ದರೆ, ಮುಂದಿನ ವಾರ ಮೈಸೂರಿಗೆ ಆಗಮಿಸಲಿರುವ ಪ್ರಧಾನಿ ನರೇಂದ್ರಮೋದಿಯವರು ಜೆಎಸ್‌ಎಸ್ ಮಠಕ್ಕೆ ಭೇಟಿ ನೀಡಲಿದ್ದು, ಅದೇ ಕಾಲಕ್ಕೆ ಮೈಸೂರು ರಾಜವಂಶಸ್ಥರನ್ನು ಭೇಟಿ ಮಾಡಲಿದ್ದಾರೆ.

ಕರ್ನಾಟಕದ ಪ್ರಮುಖ ಮಠ–ಮಾನ್ಯಗಳಿಗೆ ಭೇಟಿ ನೀಡುವ ಮೂಲಕ ಮತಬ್ಯಾಂಕ್ ಅನ್ನು ಕ್ರೋಢೀಕರಿಸಿಕೊಳ್ಳಲು ಕಮಲ ಪಾಳೆಯದ ವರಿಷ್ಠರು ಲೆಕ್ಕ ಹಾಕಿದ್ದು, ಈ ಹಿನ್ನೆಲೆಯಲ್ಲಿ ನರೇಂದ್ರಮೋದಿ ಅವರ ಸಂಪುಟದ ಬಹುತೇಕ ಸಚಿವರು ಸದ್ಯದಲ್ಲೇ ಕರ್ನಾಟಕ ಪ್ರವಾಸ ಆರಂಭಿಸಲಿದ್ದಾರೆ. ಯಡಿಯೂರಪ್ಪ ಅವರನ್ನು ಕೆಳಗಿಳಿಸಿದ ನಂತರ ಕರ್ನಾಟಕದಲ್ಲಿ ಪಕ್ಷ ನಡೆಸುತ್ತಿದ್ದ ಜಾತಿ ಆಧಾರಿತ ರಾಜಕಾರಣದ ಸ್ವರೂಪ ಬದಲಾಗಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಬಲಿಷ್ಠ ಮತ ಬ್ಯಾಂಕ್‌ನ್ನು ಕ್ರೋಢೀಕರಿಸುವುದು ಬಿಜೆಪಿ ವರಿಷ್ಠರಿಗೆ ಸವಾಲಾಗಿದೆ.

ಈ ಸವಾಲನ್ನು ಸ್ವೀಕರಿಸಿರುವ ಬಿಜೆಪಿ ವರಿಷ್ಠರು ಪಶ್ಚಿಮಬಂಗಾಳ ಹಾಗೂ ಹೈದರಾಬಾದ್‌ನಲ್ಲಿ ಅನುಸರಿಸಿದ ಮಾದರಿಯನ್ನೇ ಕರ್ನಾಟಕದಲ್ಲಿ ಮುಂದುವರಿಸಲು ತೀರ್ಮಾನಿಸಿದ್ದಾರೆ ಎಂದು ಉನ್ನತ ಮೂಲಗಳು ಸ್ಪಷ್ಟಪಡಿಸಿವೆ.

ಪಶ್ಚಿಮಬಂಗಾಳದಲ್ಲಿ ಬಲಿಷ್ಠ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಎದುರಿಸಲು ಪ್ರಧಾನಿ ಮೋದಿ ಅವರ ಸಂಪುಟದ ಬಹುತೇಕ ಸಚಿವರು ಪಶ್ಚಿಮಬಂಗಾಳದಲ್ಲಿ ಬೀಡು ಬಿಟ್ಟಿದ್ದರು. ಪಶ್ಚಿಮಬಂಗಾಳದ ರಾಜಕೀಯ ಸ್ವರೂಪ ತೃಣಮೂಲ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಮೇಲೆ ಅವಲಂಬಿತವಾಗಿದ್ದು ▶ 8ನೇ ಪುಟಕ್ಕೆ

ಡೀಸೆಲ್ ಬೆಲೆ ಏರಿಕೆ: ಸಾರಿಗೆ ಬಸ್ ದರ ಏರಿಕೆಗೆ ಚಿಂತನೆ

ಬೆಂಗಳೂರು: ಕಳೆದ ಕೆಲವು ತಿಂಗಳುಗಳಿಂದ ಸತತವಾಗಿ ಡೀಸೆಲ್ ದರ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರವನ್ನು ಹೆಚ್ಚಳ ಮಾಡಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಚಿಂತನೆ ನಡೆಸುತ್ತಿದೆ ಎಂದು ತಿಳಿದು ಬಂದಿದೆ.




ನಿಗಮದ ಆದಾಯದ ಶೇ.60ರಷ್ಟು ಹಣವನ್ನು ಇಂಧನ ಖರೀದಿಗೆ ವಿನಿಯೋಗಿಸಲಾಗುತ್ತಿದ್ದು, ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಅನುಮತಿ ನೀಡಲು ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮತ್ತು ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬಾರಾವ್ ಮಾತನಾಡಿ, ಶೇ.25ರಷ್ಟು ಪ್ರಯಾಣ ದರ ಹೆಚ್ಚಳಕ್ಕೆ ಅನುಮತಿ ನೀಡುವಂತೆ ಕೆಎಸ್‌ಆರ್‌ಟಿಸಿ ವಾರದ ಹಿಂದೆ ▶ 8ನೇ ಪುಟಕ್ಕೆ

ತಮಿಳುನಾಡು ತಿಪ್ಪರಲಾಗ ಹಾಕಿದರೂ


ಮೇಕೆದಾಟು ಯೋಜನೆ ಅನುಷ್ಠಾನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಿಟ್ಟ ನುಡಿ

ಬೆಂಗಳೂರು, ಜೂ. 14(ಕೆಎಂಶಿ)–ತಮಿಳುನಾಡು ಸರ್ಕಾರ ಎಷ್ಟೇ ವಿರೋಧ ಮಾಡಿದರೂ, ಮೇಕೆದಾಟು ಯೋಜನೆಯನ್ನು ಕಾನೂನಾತ್ಮಕವಾಗಿ ಅನುಷ್ಠಾನಗೊಳಿಸಿಯೇ ತೀರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಯೋಜನೆ ಕುರಿತಂತೆ ಚರ್ಚೆಗೆ ಕೈಗೆತ್ತಿಕೊಳ್ಳಬಾರದೆಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪ್ರಧಾನಿಯವರಿಗೆ ಪತ್ರ ಬರೆದಿರುವುದು ಅಲ್ಲಿನ ಅವರ ರಾಜಕೀಯ ತಂತ್ರಗಾರಿಕೆಯಾಗಿದೆ. ಕಾವೇರಿ ನದಿ ವಿಚಾರವನ್ನಿಟ್ಟುಕೊಂಡೇ ತಮಿಳುನಾಡಿನಲ್ಲಿ ಪಕ್ಷಗಳು ರಾಜಕೀಯ ಮಾಡುತ್ತವೆ. ಇದು ನಿನ್ನೆಯದಲ್ಲ. ಶತಮಾನದಿಂದಲೇ ನಡೆದುಕೊಂಡು ಬಂದಿರುವುದಿದೆ. ಕಾವೇರಿ ಸಭೆಯಲ್ಲಿ ಈ ಹಿಂದೆ 15 ಬಾರಿ ಚರ್ಚೆ ನಡೆದಿದೆ. ಆ ಸಂದರ್ಭದಲ್ಲಿ ತಮಿಳುನಾಡು ಅಪಸ್ವರವೆತ್ತದೆ, ಈಗ ಏಕಾಏಕಿ ಪ್ರಧಾನಿಯವರಿಗೆ ಪತ್ರ ಬರೆದು, ರಾಜಕೀಯ ಮಾಡಲು ಮುಂದಾಗಿದೆ ಎಂದರು.



ತಮಿಳುನಾಡು ಸರ್ಕಾರ ಬರೆದಿರುವ ಪತ್ರವೇ ಕಾನೂನು ವಿರೋಧವಾಗಿದೆ. 4.5 ಟಿಎಂಸಿ ನೀರನ್ನು ಬೆಂಗಳೂರಿಗೆ ಕುಡಿಯಲು ಬಳಸಿಕೊಳ್ಳುವ ಯೋಜನೆ ಇದಾಗಿದೆ. ಅದಕ್ಕೆ ವಿರೋಧ ಮಾಡೋದು ಸರಿಯಲ್ಲ. ಕಾವೇರಿ ನ್ಯಾಯಾಧೀಕರಣದ ತೀರ್ಪಿನಂತೆ ತಮಿಳುನಾಡಿಗೆ ಪ್ರತಿ ವರ್ಷವೂ ▶ 8ನೇ ಪುಟಕ್ಕೆ

ಚಾಮರಾಜನಗರ ಜಿಲ್ಲಾಧಿಕಾರಿ ಆದೇಶ ಎತ್ತಿಹಿಡಿದ ಹೈಕೋರ್ಟ್

ಕೊಳ್ಳೇಗಾಲ ನಗರಸಭೆ ಅನರ್ಹ ಏಳು ಬಿಎಸ್‌ಪಿ ಸದಸ್ಯರಿಗೆ ಹಿನ್ನಡೆ



ನಾಗಮಣಿ | ಗಂಗಮ್ಮ | ನಾಸಿರ್ ಷರೀಫ್ | ಪವಿತ್ರ | ಪ್ರಕಾಶ್ | ರಾಮಕೃಷ್ಣ | ನಾಗಸುಂದ್ರಮ್ಮ

ಕೊಳ್ಳೇಗಾಲ, ಜೂ.14(ನಾಗೇಂದ್ರಸ್ವಾಮಿ)–ಬಿಎಸ್‌ಪಿ ಚಿನ್ಹೆಯಿಂದ ನಗರಸಭೆ ಚುನಾವಣೆಯಲ್ಲಿ ಗೆದ್ದು, ಪಕ್ಷ ಸೂಚಿಸಿದ್ದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಗೆ ಮತ ನೀಡದೆ ವ್ಹಿಪ್ ಉಲ್ಲಂಘಿಸಿ ಅನರ್ಹಗೊಂಡಿದ್ದ 7 ಮಂದಿ ನಗರಸಭಾ ಸದಸ್ಯರ ಅರ್ಜಿಯನ್ನು ವಜಾಗೊಳಿಸುವ ಮೂಲಕ ಜಿಲ್ಲಾಧಿಕಾರಿ ಆದೇಶವನ್ನು ಹೈಕೋರ್ಟ್ ದ್ವಿಸದಸ್ಯ ಪೀಠವೂ ಎತ್ತಿ ಹಿಡಿದಿದೆ. 2018ರ ಕೊಳ್ಳೇಗಾಲ ನಗರಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಗೆಲುವು ಸಾಧಿಸಿದ್ದ ವಾರ್ಡ್–26ರ ನಾಗಸುಂದ್ರಮ್ಮ, ▶ 8ನೇ ಪುಟಕ್ಕೆ



ಅನರ್ಹತೆ ಪ್ರಶ್ನಿಸಿ, ಹೈಕೋರ್ಟ್‌ನ ದ್ವಿ ಸದಸ್ಯ ಪೀಠದಲ್ಲಿ ನಾವೆಲ್ಲರೂ ಮೇಲ್ಮನವಿ ಸಲ್ಲಿಸಿದ್ದೆವು. ದ್ವಿಸದಸ್ಯ ಪೀಠ ಸಹ ಜಿಲ್ಲಾಧಿಕಾರಿಗಳ ಆದೇಶವನ್ನೇ ಎತ್ತಿ ಹಿಡಿದಿದೆ. ಈ ಕುರಿತ ಆದೇಶ ಪ್ರತಿ ನಮಗೆ ದೊರೆತಿಲ್ಲ. ಪ್ರತಿ ಸಿಕ್ಕ ನಂತರ ಮುಂದಿನ ಹೋರಾಟಕ್ಕೆ ಅಣಿಯಾಗುತ್ತೇವೆ. ಎಲ್ಲರೂ (7 ಮಂದಿ) ಕುಳಿತು ಚರ್ಚಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ. ಸುಪ್ರೀಂಕೋರ್ಟ್‌ನಲ್ಲಿ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ.

– ರಾಮಕೃಷ್ಣ, ಪವಿತ್ರ ರಮೇಶ್, ಅನರ್ಹ ನಗರಸಭಾ ಸದಸ್ಯರು.

ಅರಮನೆ ಆವರಣದಲ್ಲಿ ಪ್ರಧಾನಿ ಮೋದಿಯೊಂದಿಗೆ ಯೋಗ ಪ್ರದರ್ಶನಕ್ಕೆ

12 ಸಾವಿರ ಮಂದಿ ನೋಂದಣಿ

● ಒಟ್ಟು 15 ಸಾವಿರ ಮಂದಿಗೆ ಅವಕಾಶ ● ಯೋಗಪಟುಗಳು 2 ಡೋಸ್ ಲಸಿಕೆ ಪಡೆದಿರಬೇಕು, ಇಲ್ಲವೆ 72 ಗಂಟೆ ಮುಂಚಿನ ನೆಗೆಟಿವ್ ರಿಪೋರ್ಟ್ ಹೊಂದಿರಬೇಕು ● ಎಲ್ಲರಿಗೂ ಉಪಾಹಾರ, ಮ್ಯಾಟ್, ಮೊಬೈಲ್ ಪೌಚ್, ಶೂ ಬ್ಯಾಗ್ ವ್ಯವಸ್ಥೆ ● ಸುಸೂತ್ರವಾಗಿ ಕಾರ್ಯಕ್ರಮ ನಡೆಸಲು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ

ಮೈಸೂರು, ಜೂ.14(ಎಂಕೆ)– ಮೈಸೂರಿನ ವಿಶ್ವ ವಿಖ್ಯಾತ ಅರಮನೆ ಆವರಣದಲ್ಲಿ 'ಮಾನವೀಯತೆಗಾಗಿ ಯೋಗ'(YOGA FOR HUMANITY) ಶೀರ್ಷಿಕೆಯಡಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಜೂ.21ರಂದು ವಿಶ್ವ ಯೋಗ ದಿನಾಚರಣೆ ನಡೆಯಲಿದೆ. 15 ಸಾವಿರ ಮಂದಿ ಪಾಲ್ಗೊಳ್ಳಲಿದ್ದು, ಈಗಾಗಲೇ 12 ಸಾವಿರ ಜನರ ನೋಂದಣಿಯಾಗಿದೆ ಎಂದು ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಜೂ.21ರ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರ ರಚಿಸಿದ್ದು, ಉಪಾಧ್ಯಕ್ಷರಾಗಿ ಆರೋಗ್ಯ ಸಚಿವರು ಹಾಗೂ 21 ಮಂದಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಿತಿಯಲ್ಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುಮಾರು 10 ಲಕ್ಷ ಚದರ ಅಡಿ ವಿಸ್ತೀರ್ಣದ ಅರಮನೆ ಆವರಣದಲ್ಲಿ 15 ಸಾವಿರ ಮಂದಿ ಯೋಗ ದಿನಾಚರಣೆಯಲ್ಲಿ ಭಾಗವಹಿಸಲಿದ್ದು, ಎಲ್ಲಾ ಬಗೆಯ ಜನರಿಗೂ ಅವಕಾಶ ನೀಡಲಾಗಿದೆ. 17 ಬ್ಲಾಕ್‌ಗಳನ್ನು ಮಾಡಲಿದ್ದು, 15 ಬ್ಲಾಕ್‌ಗಳಲ್ಲಿ ಜನರ ಪ್ರವೇಶಕ್ಕೆ ಅವಕಾಶವಿದ್ದು, 2 ಬ್ಲಾಕ್‌ಗಳನ್ನು ಮೀಸಲಿಡಲಾಗುವುದು. 170 ಮೊಬೈಲ್ ಶೌಚಾಲಯಗಳ ವ್ಯವಸ್ಥೆ ಮಾಡಲಿದ್ದು, ಕೇಂದ್ರ ಸರ್ಕಾರದ ಸೂಚನೆಯಂತೆ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು. ▶ 6ನೇ ಪುಟಕ್ಕೆ



ಮೈಸೂರು ಡಿಸಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ 'ವಿಶ್ವ ಯೋಗ ದಿನಾಚರಣೆ' ಸಂಬಂಧ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಲಾಯಿತು. ಆರೋಗ್ಯ ಸಚಿವ ಡಾ.ಸುಧಾಕರ್, ಶಾಸಕ ಎಸ್.ಎ. ರಾಮದಾಸ್, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮತ್ತಿತರರಿದ್ದರು.

> "ವಿಶ್ವ ಯೋಗ ದಿನಾಚರಣೆ ಅಂಗವಾಗಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ, ಸ್ವಚ್ಛತಾ ಕಾಮಗಾರಿಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುತ್ತಿದೆ. ಕಾಮಗಾರಿಗಳ ಪ್ರಗತಿ, ಭದ್ರತೆ, ಸಂಚಾರ ಮಾರ್ಗ ಬದಲಾವಣೆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಒಂದೆರಡು ದಿನಗಳಲ್ಲಿ ಮಾಹಿತಿ ನೀಡಲಿದ್ದಾರೆ.
> **–ಎಸ್.ಟಿ.ಸೋಮಶೇಖರ್, ಉಸ್ತುವಾರಿ ಸಚಿವ**

> "ಯೋಗ ದಿನದಂದು ಎಲ್ಲಾ ಆರೋಗ್ಯ ಸಿಬ್ಬಂದಿ ಇರಲಿದ್ದು, ಆಂಬುಲೆನ್ಸ್ ವ್ಯವಸ್ಥೆ ಇರಲಿದೆ. ಭಾಗವಹಿಸುವ ಪ್ರತಿಯೊಬ್ಬರಿಗೂ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುವುದು. ಯಾರಿಗಾದರೂ ಜ್ವರ, ನೆಗಡಿ, ಕೆಮ್ಮು ಸೇರಿದಂತೆ ಕೊರೊನಾ ಲಕ್ಷಣಗಳು ಕಂಡುಬಂದಲ್ಲಿ ಅಂತಹವರಿಗೆ ಅವಕಾಶ ಮಾಡಿಕೊಡುವುದಿಲ್ಲ.
> **–ಡಾ.ಸುಧಾಕರ್, ಆರೋಗ್ಯ ಸಚಿವ**

ಯೋಗ ದಿನಾಚರಣೆಯ ವೇದಿಕೆಯಲ್ಲಿ ಗಣ್ಯರ ಉಪಸ್ಥಿತಿ ಬಗ್ಗೆ ಇನ್ನು ನಿರ್ಧರಿಸಿಲ್ಲ

● ಸಂಸದ ಪ್ರತಾಪ್ ಸಿಂಹ ಸ್ಪಷ್ಟನೆ ● ಯದುವೀರ್‌ಗೆ ಅವಕಾಶ ಕಲ್ಪಿಸದ ವಿಚಾರವಾಗಿ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಕಮೆಂಟ್

ಮೈಸೂರು, ಜೂ.14(ಎಸ್‌ಬಿಡಿ)– ಮೈಸೂರು ಅರಮನೆ ಅಂಗಳದಲ್ಲಿ ನಡೆಯಲಿರುವ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ವೇದಿಕೆಯಲ್ಲಿ ಯಾವ ಜನಪ್ರತಿನಿಧಿಗಳಿಗೆ ಅವಕಾಶವಿದೆ ಎನ್ನುವುದಷ್ಟನ್ನು ಮಾತ್ರ ನಿರ್ಧರಿಸಲಾಗಿದ್ದು, ಇತರ ಗಣ್ಯರ ವಿಚಾರವಾಗಿ ಇನ್ನೆರಡು ದಿನಗಳಲ್ಲಿ ನಿರ್ಧರಿಸಲಾಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಜೂ.21ರಂದು ಅರಮನೆ ಆವರಣದಲ್ಲಿ ನಡೆಯುವ ಯೋಗ ದಿನಾಚರಣೆಗೆ ರಾಜವಂಶಸ್ಥರನ್ನು ಆಹ್ವಾನಿಸಿಲ್ಲ ಎಂದು ಚರ್ಚೆಯಾಗುತ್ತಿರುವ ಬಗ್ಗೆ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟರ್ ಹರಿದಾಡುತ್ತಿರುವುದನ್ನು ನಾನೂ ಗಮನಿಸಿದ್ದೇನೆ. ಈ ಹಿಂದಿನ ವರ್ಷಗಳಲ್ಲಿದ್ದಂತೆ ಸೀಮಿತ ಜನಪ್ರತಿನಿಧಿಗಳಿಗೆ ಮಾತ್ರ ವೇದಿಕೆಯಲ್ಲಿ ಅವಕಾಶವಿರುವ ಬಗ್ಗೆ ಕಳೆದ ಭಾನುವಾರ ಯೋಗ ತಾಲೀಮು ನಡೆಸಿದ ಸಂದರ್ಭದಲ್ಲೇ ಸ್ಪಷ್ಟಪಡಿಸಲಾಗಿದೆ. ಆದರೆ ಇತರ ಗಣ್ಯರ ವಿಚಾರವಾಗಿ ಇನ್ನೂ ನಿರ್ಧಾರವಾಗಿಲ್ಲ ಎಂದು ಹೇಳಿದರು.

ಮೈಸೂರು ಭಾಗದಲ್ಲಿ 2 ಲೋಕಸಭಾ ಕ್ಷೇತ್ರ ಹಾಗೂ 11 ವಿಧಾನಸಭಾ ಕ್ಷೇತ್ರಗಳಿವೆ. ಹಾಗಾಗಿ ಯೋಗ ದಿನಾಚರಣೆ ವೇದಿಕೆಯಲ್ಲಿ ಯಾರೆಲ್ಲಾ ಜನಪ್ರತಿನಿಧಿಗಳಿಗೆ ಅವಕಾಶವಿದೆ ಎನ್ನುವ ಗೊಂದಲವಿತ್ತು. ▶ 6ನೇ ಪುಟಕ್ಕೆ

ಇಂದಿನಿಂದ ಅನಧಿಕೃತ ಫಲಕ ತೆರವು

ಮೈಸೂರು: ಮೈಸೂರಿನಿಂದ ಕಡಕೊಳದವರೆಗೆ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಅಳವಡಿಸಿರುವ ಅನಧಿಕೃತ ಹೋರ್ಡಿಂಗ್, ಬೋರ್ಡ್ ಸೇರಿದಂತೆ ಎಲ್ಲಾ ರೀತಿಯ ಜಾಹೀರಾತು ಫಲಕಗಳನ್ನು ಬುಧವಾರದಿಂದ ಗ್ಯಾಸ್ ಕಟ್ಟರ್‌ನಿಂದ ಕತ್ತರಿಸಿ ತೆರವುಗೊಳಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಪುನರ್ ಎಚ್ಚರಿಕೆ ನೀಡಿದರು.

ಈ ಕಾರ್ಯಾಚರಣೆಯನ್ನು ಪ್ರಧಾನಿ ಮೋದಿ ಅವರು ಬರುತ್ತಿದ್ದಾರೆ ಎಂಬ ಕಾರಣಕ್ಕೆ ಮಾಡುತ್ತಿಲ್ಲ. ಮೈಸೂರಿನ ಸೌಂದರ್ಯ ಹಾಗೂ ಸ್ವಚ್ಛತೆ ದೃಷ್ಟಿಯಿಂದ ವೈಯಕ್ತಿಕ ಆಸಕ್ತಿಯಿಂದ ಈ ಕೆಲಸ ಮಾಡುತ್ತಿದ್ದೇನೆ. ಈ ಹಿಂದೆ ರಿಂಗ್‌ರಸ್ತೆಯ ಇಕ್ಕೆಲಗಳಲ್ಲಿದ್ದ ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಲಾಗಿತ್ತು. ಇದೀಗ ಮೋದಿ ಅವರ ಆಗಮನದ ನೆಪದಲ್ಲಿ ಮತ್ತೆ ಸ್ವಚ್ಛಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಕಳೆದ 2 ವರ್ಷ ಕೊರೊನಾದಿಂದ ಜೀವ ಉಳಿಸಿಕೊಳ್ಳಲು ಹೆಣಗಾಡುವ ಸ್ಥಿತಿ ಇತ್ತು. ಬೇರೆ ಕೆಲಸಗಳತ್ತ ಗಮನಹರಿಸಲು ಸಾಧ್ಯವಾಗದ ಕಾರಣ ರಸ್ತೆಗಳೆಲ್ಲಾ ಹಾಳಾಗಿವೆ. ಇದೀಗ ಮೋದಿ ಆಗಮನದ ವೇಳೆ ರಸ್ತೆ ದುರಸ್ತಿ ಹಾಗೂ ಅಭಿವೃದ್ಧಿಯಾಗುತ್ತಿರುವುದು ಸತ್ಯ. ಆದರೂ ಪೂರಕ ಪ್ರಯತ್ನವಾಗಿ ನಮ್ಮ ಇಬ್ಬರು ಶಾಸಕರ ಕ್ಷೇತ್ರಗಳಿಗೆ ತಲಾ 100 ಕೋಟಿ ರೂ. ಅನುದಾನ ಲಭಿಸಿದ್ದು, ಇದೀಗ ಕಾಕತಾಳೀಯವಾಗಿ ಅಭಿವೃದ್ಧಿ ಕಾರ್ಯಗಳಾಗುತ್ತಿವೆ. ಇದಕ್ಕೆ ಖುಷಿ ಪಡೋಣ ಎಂದು ಪ್ರತಾಪ್ ಸಿಂಹ ಹೇಳಿದರು.

ಮೈಸೂರು ಮಿತ್ರ ಬುಧವಾರ 15 ಜೂನ್ 2022

ಮೈಸೂರು, ಕೊಡಗು, ಚಾ.ನಗರ, ಮಂಡ್ಯ ಜಿಲ್ಲೆಗಳಲ್ಲಿ ಇಂದಿನಿಂದ ಐದು ದಿನ ತುಂತುರು ಮಳೆ ಸಾಧ್ಯತೆ

ಮೈಸೂರು, ಜೂ.14(ಆರ್‌ಕೆಬಿ)- ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಜೂ.15ರಿಂದ 19ರವರೆಗೆ ಮೈಸೂರು, ಕೊಡಗು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಾಧ್ಯತೆ ಇದೆ. ಈ ಐದು ದಿನಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು 24 ಮಿ.ಮೀ, ಕೊಡಗಿನಲ್ಲಿ 37 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ 27 ಮಿ.ಮೀ ಹಾಗೂ ಮಂಡ್ಯ ಜಿಲ್ಲೆಯಲ್ಲಿ 32 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ.



ಈ ಐದು ದಿನಗಳ ಅವಧಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 30ರಿಂದ 32 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ. ಕೊಡಗಿನಲ್ಲಿ ಗರಿಷ್ಠ 27–28, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 31 ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ಮೈಸೂರಿನ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಸಿಇಟಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಮೈಸೂರು, ಜೂ. 14(ಆರ್‌ಕೆ)- ಜೂನ್ 16 ಮತ್ತು 17ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2022ನೇ ಸಾಲಿನ ಇಂಜಿನಿಯರಿಂಗ್, ಕೃಷಿ ವಿಜ್ಞಾನ ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದು, ಪರೀಕ್ಷೆ ನಡೆಯುವ ದಿನಗಳಂದು ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ಪ್ರದೇಶದಲ್ಲಿ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಸಿಆರ್‌ಪಿಸಿ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಮಹಾರಾಜ, ಮಹಾರಾಣಿ, ಜೆಎಸ್‌ಎಸ್, ಡಿ. ಬನುಮಯ್ಯ, ಸದ್ವಿದ್ಯಾ, ಗೋಪಾಲಸ್ವಾಮಿ, ಮರಿಮಲ್ಲಪ್ಪ, ಶಾರದಾ ವಿಲಾಸ, ವಿಜಯ ವಿಠಲ, ಮಾತೃಮಂಡಳಿ, ಸೆಂಟ್ ಫಿಲೋಮಿನಾ ಸೇರಿದಂತೆ ಮೈಸೂರು ನಗರದ 26 ಪದವಿಪೂರ್ವ ಕಾಲೇಜುಗಳಲ್ಲಿ ನಡೆಯುವ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಯನ್ನು ಹೊರತು ಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಲಿನ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ.



ಮೈಸೂರಿನ ಸುಯೋಗ್ ಆಸ್ಪತ್ರೆ ನಿರ್ದೇಶಕ ಡಾ.ಎಸ್.ಪಿ.ಯೋಗಣ್ಣ ಬರೆದಿರುವ 'ಆಧ್ಯಾತ್ಮಿಕ ಆರೋಗ್ಯ ದರ್ಶನ'ಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, ಇತ್ತೀಚೆಗೆ ರಾಯಚೂರಿನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಧಾನಪರಿಷತ್ ಸದಸ್ಯ ರವಿಕುಮಾರ್, ರಾಯಚೂರು ಶಾಸಕ ಡಾ.ಶಿವರಾಜ್ ಪಾಟೀಲ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಸಂತಕುಮಾರ್ ಇತರರಿದ್ದಾರೆ.

ಕ್ರೀಡಾ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.14– ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಇಲಾಖೆ ವತಿಯಿಂದ ಪ್ರತಿಭಾವಂತ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಲ್ಲಿ ವಾರ್ಷಿಕ 10,000 ರೂ.ಗಳ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಜಿದಾರರು (6ರಿಂದ 10ನೇ ತರಗತಿ) 2021–22ನೇ ಸಾಲಿನಲ್ಲಿ ವಿದ್ಯಾರ್ಥಿಯಾಗಿದ್ದು, ಮಾಧ್ಯಮಿಕ ಅಥವಾ ಪ್ರೌಢಶಾಲೆಯಲ್ಲಿ ಓದುತ್ತಿರಬೇಕು ಹಾಗೂ ಅರ್ಜಿದಾರರು ರಾಜ್ಯ ಕ್ರೀಡಾ ಪ್ರಾಧಿಕಾರದಲ್ಲಿ ನೋಂದಾಯಿತ ಕ್ರೀಡಾ ಸಂಸ್ಥೆಗಳು 01.04.2021 ರಿಂದ 31.03.2022ರವರೆಗೆ ನಡೆಸಿದ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರಬೇಕು ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಸಾಧನೆಯನ್ನು ಮಾತ್ರ ಪರಿಗಣಿಸಲಾಗುವುದು. ರಾಷ್ಟ್ರೀಯ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿ ಹಾಗೂ ರಾಷ್ಟ್ರೀಯ ಶಾಲಾ ಕ್ರೀಡಾಕೂಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿದ್ದಲ್ಲಿ ಅಂತಹ ಕ್ರೀಡಾಪಟುಗಳು ಜೂ.30ರೊಳಗಾಗಿ http://sence online.gov.in/karnataka ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಇಬ್ಬರು ಮಕ್ಕಳೊಂದಿಗೆ ತಾಯಿ ಕಣ್ಮರೆ

ಮೈಸೂರು, ಜೂ.14(ಆರ್‌ಕೆ)–ತಾಯಿಯೊಬ್ಬಳು ಇಬ್ಬರು ಹೆಣ್ಣು ಮಕ್ಕಳೊಂದಿಗೆ ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ)ದಿಂದ ನಾಪತ್ತೆಯಾಗಿದ್ದು, ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿದೆ. ಪಡುವಾರಹಳ್ಳಿ ಬಾವಿ ರಸ್ತೆ ನಿವಾಸಿ ಎಸ್.ಮಹದೇವಸ್ವಾಮಿ ಅವರ



ಪ್ರಿಯಾಂಕ



ಮಹಾಲಕ್ಷ್ಮಿ



ವಿದ್ಯಾಶ್ರೀ

ಪತ್ನಿ ಪ್ರಿಯಾಂಕ ಅವರು ಪುತ್ರಿಯರಾದ ಮಹಾಲಕ್ಷ್ಮಿ(10) ಹಾಗೂ ವಿದ್ಯಾಶ್ರೀ(8) ಅವರೊಂದಿಗೆ ಭಾನುವಾರ ರಾತ್ರಿ 7 ಗಂಟೆ ವೇಳೆ ಮನೆಗೆ ಬೀಗ ಹಾಕಿ ಕೀಲಿಯನ್ನು ಪಕ್ಕದ ಮನೆಯವರಿಗೆ ಕೊಟ್ಟು ಹೋದ ಪ್ರಿಯಾಂಕ ಹಿಂದಿರುಗಿಲ್ಲ ಎಂದು ಜಯಲಕ್ಷ್ಮೀಪುರಂ ಠಾಣೆಗೆ ದೂರು ನೀಡಲಾಗಿದೆ. ಪತ್ನಿ ಬಳಸುತ್ತಿದ್ದ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದ್ದು, ಎಲ್ಲೆಡೆ ಹುಡುಕಿದರೂ ಮಕ್ಕಳು–ಹೆಂಡತಿ ಪತ್ತೆಯಾಗಿಲ್ಲ. ಹುಡುಕಿಕೊಡಿ ಎಂದು ಪತಿ ಮಹದೇವಸ್ವಾಮಿ ನೀಡಿರುವ ದೂರಿನಲ್ಲಿ ಕೋರಿಕೊಂಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದವರು ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ದೂ: 0821–2418316 ಅಥವಾ ಪೊಲೀಸ್ ಕಂಟ್ರೋಲ್ ರೂಂ ದೂ: 0821–2418339 ಮೂಲಕ ತಿಳಿಸಲು ಕೋರಲಾಗಿದೆ.

ಮಹಿಳಾ ಪಾಲಿಟೆಕ್ನಿಕ್ ಪ್ರವೇಶಕ್ಕೆ ಆಹ್ವಾನ

ಮೈಸೂರು, ಜೂ.14–ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2022–23ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಡಿಪ್ಲೊಮಾ ಪ್ರವೇಶಕ್ಕೆ ನೇರ ಪ್ರವೇಶ ಪ್ರಕ್ರಿಯೆಯನ್ನು ಜೂ.20ರವರೆಗೆ ವಿಸ್ತರಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ಅರ್ಹ ವಿದ್ಯಾರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಸಂಸ್ಥೆಗೆ ಹಾಜರಾಗಿ ಪ್ರವೇಶ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಪಿ.ಎಸ್.ಶಿವಕುಮಾರ್ (ಪ್ರಾಂಶುಪಾಲರು, ಮೊ:9449045391), ಸುಬ್ರಹ್ಮಣ್ಯಂ ಎಸ್.ಬಿ. (ಮೊ:9845809877) ಮೂಲಕ ಸಂಪರ್ಕಿಸಬಹುದು.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜೂ.14–ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2022–23 ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡದ ಉಪಯೋಜನೆಯಡಿಯಲ್ಲಿ 2021ನೇ ಕ್ಯಾಲೆಂಡರ್ ವರ್ಷದಲ್ಲಿ (ದಿನಾಂಕ 01–01–2021 ರಿಂದ 31–12–2021)ರ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಜೂ.25ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ.

ಕ್ರೀಡಾಪಟುಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಪಡೆದು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್ ಇವರಿಗೆ ಸಲ್ಲಿಸಲು ಕೋರಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ.ಸಂ: 0821–2564179 ಅನ್ನು ಸಂಪರ್ಕಿಸಬಹುದು.

ಅಪರಿಚಿತ ಮಹಿಳೆ ಶವ ಪತ್ತೆ

ಮೈಸೂರು, ಜೂ.14–ಮದ್ದೂರು ರೈಲ್ವೆ ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ಸುಮಾರು 75 ವರ್ಷದ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಮಹಿಳೆ 5 ಅಡಿ ಎತ್ತರವಿದ್ದು, ಕೋಲು ಮುಖ ಹೊಂದಿರುತ್ತಾರೆ. ಕಪ್ಪು ಮೈಬಣ್ಣ ಹೊಂದಿದ್ದು, ಕೃಶವಾದ ಶರೀರವನ್ನು ಹೊಂದಿದ್ದಾರೆ. ಹಸಿರು ಬಣ್ಣದ ಸೀರೆ, ನೀಲಿ ಬಣ್ಣದ ರವಿಕೆ ಧರಿಸಿರುತ್ತಾರೆ. ಮೃತರ ವಾರಸುದಾರರು ರೈಲ್ವೆ ಪೊಲೀಸ್ ಠಾಣೆಗೆ ಭೇಟಿ ನೀಡಬಹುದು ಅಥವಾ ದೂ.ಸಂಖ್ಯೆ: 0821–2516579 ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಮೈಸೂರು ಭೇಟಿಗೆ ಇನ್ನು ಐದೇ ದಿನ ಬಾಕಿ

ಜಿಲ್ಲಾ ಉಸ್ತುವಾರಿ ಸಚಿವರಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ಭಾಗಿಯಾಗುವ ಕಾರ್ಯಕ್ರಮದ ಪೂರ್ವ ತಯಾರಿ ಪರಿಶೀಲನೆ

ಮೈಸೂರು, ಜೂ. 14 (ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೈಸೂರು ಭೇಟಿಗೆ ಇನ್ನು ಕೇವಲ ಐದು ದಿನಗಳಿವೆ. ಈ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತಾ ಕಾರ್ಯ ಭರದಿಂದ ಸಾಗಿದೆ.



ಜೂನ್ 20ರಂದು ಸಂಜೆ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಲಿರುವ ಪ್ರಧಾನಿಗಳು, ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲಿದ್ದು,



ನಂತರ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸುವರು.

ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಗಳ ಫಲಾನುಭವಿಗಳು ಭಾಗವಹಿಸುವ ಈ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗವಹಿಸುತ್ತಿರುವುದರಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ವೇದಿಕೆ ಹಾಗೂ ಫಲಾನುಭವಿಗಳಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಗಣ್ಯರು, ಅತೀ ಗಣ್ಯರಿಗೆ ಆಸನ ಸೌಲಭ್ಯ, ಭದ್ರತೆ, ವಾಹನ ನಿಲುಗಡೆ, ಪ್ರವೇಶ ಮತ್ತು ನಿರ್ಗಮನ, ಅಗ್ನಿಶಾಮಕ ಠಾಣೆ ವಾಹನ, ಆಂಬುಲೆನ್ಸ್ ವಾಹನ ನಿಲುಗಡೆ ಸ್ಥಳವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪರಿಶೀಲಿಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು.

ಈ ವೇಳೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಎಸಿಪಿ ಗೀತಾ ಪ್ರಸನ್ನ ಇನ್ನಿತರರು ಉಪಸ್ಥಿತರಿದ್ದರು. ಜೂನ್ 20ರಂದು ರಾತ್ರಿ ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿರುವ ನರೇಂದ್ರ ಮೋದಿ ಅವರು, ಮರುದಿನ ಬೆಳಗ್ಗೆ 6.30ರಿಂದ 7.45 ಗಂಟೆಯವರೆಗೆ ಅರಮನೆ ಆವರಣದಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯೋಗ ಪ್ರದರ್ಶನ ವೀಕ್ಷಿಸುವರು. ಬೆಳಗ್ಗೆ 8.30ರಿಂದ 9 ರವರೆಗೆ ಅರಮನೆಯಲ್ಲಿ ರಾಜಮನೆತನದ ಕುಟುಂಬದವರನ್ನು ಭೇಟಿ ನೀಡಿ ಕುಶಲೋಪರಿ ವಿಚಾರಿಸಿದ ನಂತರ ವಿಶೇಷ ವಿಮಾನದಲ್ಲಿ ಪ್ರಧಾನಿಗಳು ಕೇರಳದ ತಿರುವನಂತಪುರಕ್ಕೆ ತೆರಳುವರು. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಕೇಂದ್ರ ಆಯುಷ್ ಸಚಿವಾಲಯ, ಪ್ರಧಾನಿ ಕಚೇರಿ ಹಾಗೂ ಎಸ್‌ಪಿಜಿ ಹಿರಿಯ ಅಧಿಕಾರಿಗಳ ನಿರ್ದೇಶನ ಮತ್ತು ಸೂಚನೆಗಳಂತೆಯೇ ವೇದಿಕೆ, ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿರುವ ಮಾರ್ಗದ ರಸ್ತೆ, ಅರಮನೆ ಸುತ್ತಲಿನ ರಸ್ತೆ ಹಾಗೂ ಫುಟ್‌ಪಾತ್ ಸ್ವಚ್ಛತೆ ಮತ್ತು ಅಭಿವೃದ್ಧಿ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ಮೋದಿ ಸ್ವಾಗತಿಸಲು ಜಿಲ್ಲಾಡಳಿತ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದ್ದು, ಯಾವುದೇ ಹಂತದಲ್ಲೂ ಲೋಪವಾಗದಂತೆ ಎಚ್ಚರ ವಹಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಪೆರಿಫೆರಲ್ ರಿಂಗ್ ರೋಡ್ ಡಿಪಿಆರ್ ಸಲ್ಲಿಸಲು ಸಚಿವ ನಿತಿನ್ ಗಡ್ಕರಿ ಸೂಚನೆ

ಮೈಸೂರು, ಜೂ. 14(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ನಿರ್ಮಿಸಲುದ್ದೇಶಿಸಿರುವ ಪೆರಿಫೆರಲ್ ರಿಂಗ್ ರೋಡ್ ಯೋಜನೆಯನ್ನು ಭಾರತ ಮಾಲಾ ಫೇಸ್–2ರಲ್ಲಿ ಸೇರಿಸಲು ಡಿಪಿಆರ್ ಸಲ್ಲಿಸುವಂತೆ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೂಚಿಸಿದ್ದಾರೆ.



ಸೋಮವಾರ ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿದ್ದ ವೇಳೆ ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಮತ್ತು ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಸಚಿವರಿಗೆ ಉದ್ದೇಶಿತ ಯೋಜನೆ ಬಗ್ಗೆ ಮಾಹಿತಿ ನೀಡಿದರು.

ಮೈಸೂರು ನಗರದ ಮಹಾಯೋಜನೆ–2031ರಲ್ಲಿ ಪ್ರಸ್ತಾಪಿಸಿರುವ 73.25 ಕಿ.ಮೀ. ಪೆರಿಫೆರಲ್ ರಿಂಗ್ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗೆ ಅನುದಾನ ನೀಡುವಂತೆ ಕೋರಿದರು. ಮೈಸೂರು ನಗರ ಅತೀ ವೇಗವಾಗಿ ಬೆಳೆಯುತ್ತಿರುವುದರಿಂದ ಮುಂದಿನ 20 ವರ್ಷಗಳ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಸಂಚಾರಕ್ಕೆ ಅನುಕೂಲವಾಗುವಂತೆ ಯೋಜನೆ ಅಭಿವೃದ್ಧಿಗೊಳಿಸಲು ಅಗತ್ಯವಿರುವ ಕಾರ್ಯ ಸಾಧ್ಯತಾ ಹಾಗೂ ವಿಸ್ತೃತ ಯೋಜನಾ ವರದಿಯನ್ನು ಗಡ್ಕರಿ ಅವರಿಗೆ ಸಲ್ಲಿಸಲಾಯಿತು.

ಪ್ರಾಧಿಕಾರದ ನಿರ್ಣಯದೊಂದಿಗೆ ರಾಜ್ಯ ಸರ್ಕಾರದ ಮೂಲಕ ಕೇಂದ್ರಕ್ಕೆ ಡಿಪಿಆರ್ ಸಲ್ಲಿಸಿದಲ್ಲಿ ಭಾರತ ಮಾಲಾ ಫೇಸ್–2 ಯೋಜನೆಯಡಿ ಸೇರಿಸಿ ಅನುಮೋದನೆ ನೀಡುವುದಾಗಿ ಸಚಿವರು ತಿಳಿಸಿದರು ಎಂದು ಮುಡಾ ಆಯುಕ್ತ ದಿನೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಸಂಬಂಧ ಪ್ರಾಧಿಕಾರವು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದು, ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಸಮಗ್ರ ಯೋಜನಾ ವರದಿ ತಯಾರಿಸಿ ಸಚಿವರ ನಿರ್ದೇಶನದಂತೆ ನಗರಾಭಿವೃದ್ಧಿ ಇಲಾಖೆ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮೃತ ಪೌರಕಾರ್ಮಿಕರ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರ, ವಾರಸುದಾರರಿಗೆ ಅನುಕಂಪದಡಿ ಉದ್ಯೋಗ ನೀಡಿ

ಮೈಸೂರು, ಜೂ.14(ಆರ್‌ಕೆಬಿ)– ನೇರ ಪಾವತಿ ಮತ್ತು ಹೆಚ್ಚುವರಿ ನೇಮಕವಾಗಿರುವ ಪೌರಕಾರ್ಮಿಕರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ಈವರೆಗೆ 40 ರಿಂದ 50 ಮಂದಿ ಮೃತಪಟ್ಟಿದ್ದಾರೆ. ಆದರೆ ಇವರ ಕುಟುಂಬದವರಿಗೆ ಮೈಸೂರು ಮಹಾನಗರ ಪಾಲಿಕೆ ಯಾವುದೇ ಪರಿಹಾರವನ್ನಾಗಲೀ, ಅನುಕಂಪದ ಉದ್ಯೋಗವನ್ನಾಗಲೀ ನೀಡಿಲ್ಲ ಎಂದು ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಒಕ್ಕೂಟ ಆರೋಪಿಸಿದೆ.

ಮೈಸೂರು ಪಾಲಿಕೆ ಪೌರ ಕಾರ್ಮಿಕರ ಒಕ್ಕೂಟ ಆಗ್ರಹ

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎನ್.ರಾಜ, ಮೃತರ ಕುಟುಂಬದವರಿಗೆ ತಲಾ ಹತ್ತು ಲಕ್ಷ ಪರಿಹಾರ ಹಾಗೂ ಅವರ ಕುಟುಂಬದ ವಾರಸುದಾರರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವಂತೆ ಆಗ್ರಹಿಸಿದರು. ನೇರ ಪಾವತಿ ಮತ್ತು ಹೆಚ್ಚುವರಿಯಾಗಿ ನೇಮಕವಾದ ಪೌರಕಾರ್ಮಿಕರಿಗೆ ಜ್ಞಾಪನಾ ಪತ್ರ ನೀಡಬೇಕು. ಬೆಳಗ್ಗಿನ ಉಪಾಹಾರ ಭತ್ಯೆಯನ್ನು ಸರ್ಕಾರದ ಆದೇಶದಂತೆ 20 ರೂ.ಗಳಿಂದ 35 ರೂ.ಗಳಿಗೆ ಹೆಚ್ಚಿಸಬೇಕು. ಮಹಾನಗರಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವ ನೇರ ಪಾವತಿ ಹಾಗೂ ಹೆಚ್ಚುವರಿ ಪೌರಕಾರ್ಮಿಕರ ಪ್ರತಿ ತಿಂಗಳ ವೇತನ ಪಟ್ಟಿ ನೀಡಬೇಕು. ಬೃಹತ್ ಬೆಂಗಳೂರು ಮಹಾನಗರಪಾಲಿಕೆ ರೀತಿಯಲ್ಲಿ ಅಂಬೇಡ್ಕರ್ ಜಯಂತಿಯಂದು ಎಲ್ಲ ಪೌರಕಾರ್ಮಿಕರಿಗೆ ಹತ್ತು ಸಾವಿರ ರೂ., ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ವಾರದೊಳಗೆ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಂ.ವಿ.ವೆಂಕಟೇಶ್, ಸಿ.ಎಂ.ರಾಮಯ್ಯ, ಮಂಚಯ್ಯ, ರಾಮಾಂಜನೇಯ ಇನ್ನಿತರರು ಉಪಸ್ಥಿತರಿದ್ದರು.

ಅತ್ಯುತ್ತಮ ಮೇಕಪ್ ಕಲಾವಿದೆ ಪ್ರಶಸ್ತಿ



ದಕ್ಷಿಣ ಭಾರತದ ಮೇಕಪ್ ಆರ್ಟಿಸ್ಟ್‌ಗಳಿಗೆ ಬೆಂಗಳೂರಿನ 'ಆಲ್ ಇಂಡಿಯಾ ಹೇರ್ ಅಂಡ್ ಬ್ಯೂಟಿ ಅಸೋಸಿಯೇಷನ್' ಆಯೋಜಿಸಿದ್ದ 'ಬೆಸ್ಟ್ ಮೇಕಪ್ ಅವಾರ್ಡ್–2022' ಅನ್ನು ಮೈಸೂರಿನ ಶ್ರೀಮತಿ ಉಮಾ ಜಾದವ್ ಅವರಿಗೆ ನೀಡಲಾಯಿತು.

ಅರ್ಜಿ ಆಹ್ವಾನ

ಮೈಸೂರು, ಜೂ.14– ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ವತಿಯಿಂದ ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಕಲಂ 75 ಹಾಗೂ ಗ್ರಾಹಕ ಸಂರಕ್ಷಣಾ ಮಧ್ಯಸ್ಥಿಕೆ ನಿಯಮಗಳು 2020ರ ನಿಯಮದ ಅನ್ವಯ ಮೈಸೂರು ಜಿಲ್ಲಾ ಗ್ರಾಹಕರ ಆಯೋಗದ ಮಧ್ಯಸ್ಥಿಕೆ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಇಚ್ಛೆಯುಳ್ಳ ಮಧ್ಯಸ್ಥಿಕೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜುಲೈ 10ರ ಸಂಜೆ 5 ಗಂಟೆಯೊಳಗೆ ಖುದ್ದಾಗಿ ಅಥವಾ ನೋಂದಣಿ ಅಂಚೆ ಮೂಲಕ ಕುವೆಂಪು ನಗರದಲ್ಲಿರುವ ಸಿ ಅಂಡ್ ಡಿ ಬ್ಲಾಕ್ ಅನಿಕೇತನ ರಸ್ತೆ ನಂ.1542 ಎಫ್‌ನಲ್ಲಿರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಬಹುದು. ಅವಧಿ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಮಕ



ಮೈಸೂರು,ಜೂ.14 –ನರಸಿಂಹರಾಜ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಾಧ್ಯಕ್ಷರನ್ನಾಗಿ ಎನ್.ಆರ್. ಮೊಹಲ್ಲಾದ ನಿವಾಸಿ ಸುಮಿತ್ರ ಗೌಡ ಅವರನ್ನು ನೇಮಕ ಮಾಡಲಾಗಿದೆ.

ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರ ಸಂಖ್ಯೆಗನುಗುಣವಾಗಿ ಪ್ರವೇಶ ಕಲ್ಪಿಸಿ

ಸಿಎಂಗೆ ಪತ್ರ ಮುಖೇನ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಮನವಿ

ಮೈಸೂರು, ಜೂ.14(ಪಿಎಂ)–ರಾಜ್ಯದ ಎಲ್ಲಾ ಪದವಿಪೂರ್ವ ಕಾಲೇಜುಗಳಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರ ಸಂಖ್ಯೆಗೆ ಅನುಗುಣವಾಗಿ ಪ್ರವೇಶಾತಿ ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪತ್ರ ಮುಖೇನ ಮನವಿ ಮಾಡಿದ್ದಾರೆ.



ಸಿ.ಎನ್.ಮಂಜೇಗೌಡ

ಕೋವಿಡ್‌ನಿಂದ ರಾಜ್ಯದ ಶಾಲಾ–ಕಾಲೇಜುಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಸಂಪೂರ್ಣ ನಿಷ್ಕ್ರೀಯಗೊಂಡಿದ್ದು ತಮಗೆ ತಿಳಿದಿರುವ ವಿಷಯ. 2020–21ರ ಸಾಲಿನಲ್ಲಿ ಕೋವಿಡ್ ಸಂಪೂರ್ಣವಾಗಿ ಅಲ್ಲವಾದರೂ ತಕ್ಕ ಮಟ್ಟಿಗೆ ನಿಯಂತ್ರಣದಲ್ಲಿದ್ದ ಹಿನ್ನೆಲೆಯಲ್ಲಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಚೇತರಿಕೆ ಕಂಡಿತ್ತು. ಇದರ ಫಲವಾಗಿ ರಾಜ್ಯದಲ್ಲಿ ಎಲ್ಲಾ ಶಾಲಾ ಕಾಲೇಜುಗಳು ಪ್ರಾರಂಭವಾಗಿ ಪ್ರಾಥಮಿಕ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೆ ಪರೀಕ್ಷೆಗಳು ನಡೆದಿದ್ದವು. ಅಂತೆಯೇ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯದ ಸರ್ಕಾರಿ, ಖಾಸಗಿ ಶಾಲೆಗಳು ಸೇರಿದಂತೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಲ್ಲಿ ಸರಿ ಸುಮಾರು ಶೇ.100ಕ್ಕೆ 100ರಷ್ಟು ಫಲಿತಾಂಶ ಬಂದಿರುವುದು ಹೆಮ್ಮೆಯ ವಿಚಾರ. ಅದರಲ್ಲೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪಿಯುಸಿ ವ್ಯಾಸಂಗಕ್ಕೆ ರಾಜ್ಯದ ಎಲ್ಲಾ ಪಿಯು ಕಾಲೇಜುಗಳಲ್ಲಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರೆಯದೇ ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರದ ಈಗಿರುವ ಪಿಯು ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಿ, ಪಾಳಿಯ ಪದ್ಧತಿಯಲ್ಲಿ ತರಗತಿಗಳನ್ನು ನಡೆಸುವುದು ಅಥವಾ ಬೇರೆ ಯಾವುದಾದರೂ ಮಾರ್ಗವನ್ನು ಅನುಸರಿಸಿ ಸದರಿ ಸಮಸ್ಯೆ ಬಗೆಹರಿಸಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುವು ಮಾಡಿಕೊಡಬೇಕಿದೆ. ಸರ್ಕಾರ ಈ ವೇಳೆಗಾಗಲೇ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಿತ್ತು. ಈಗಲಾದರೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಶೀಘ್ರವೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪತ್ರದಲ್ಲಿ ವಿನಂತಿಸಿದ್ದಾರೆ.


ತಿ.ನರಸೀಪುರ ಆಡಳಿತದ ವಿರುದ್ಧ ಇಂದು ಪ್ರತಿಭಟನೆ

ಮೈಸೂರು, ಜೂ.14–ತಿ.ನರಸೀಪುರ ತಾಲೂಕು ಆಡಳಿತದಲ್ಲಿ ಭ್ರಷ್ಟಾಚಾರವು ಎಲ್ಲೇ ಮೀರಿದೆ ಎಂದು ಆರೋಪಿಸಿ ಮೈಸೂರಿನ ಕರ್ನಾಟಕ ವೀರ ಕೇಸರಿ ಪಡೆ ನಾಳೆ (ಜೂ.15) ಬುಧವಾರ ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನಾ ಧರಣಿ ಹಮ್ಮಿಕೊಂಡಿದೆ ಎಂದು ಅಧ್ಯಕ್ಷ ಮಧುವನ ಚಂದ್ರು ತಿಳಿಸಿದ್ದಾರೆ.



ಯೋಗದಲ್ಲಿ ವಿಶ್ವ ದಾಖಲೆ ಮಾಡಿರುವ ಕನಕಪುರದ ನಿಖಿತಾ, ಸುತ್ತೂರು ಜೆಎಸ್‌ಎಸ್ ಶಾಲೆಯಲ್ಲಿ ಮೈನವಿರೇಳಿಸುವ ಯೋಗ ಪ್ರದರ್ಶನ ನೀಡುತ್ತಿರುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.06.2022 ಬುಧವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಪೂರ್ಣಿಮಾ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು** : ಸೃಜನ–2021–22 ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಅಧ್ಯಕ್ಷ ಎಸ್.ಪರಮಶಿವಯ್ಯ, ಮುಖ್ಯ ಅತಿಥಿಗಳು : ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್.ಪಂಚಾಕ್ಷರಸ್ವಾಮಿ, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.

■ **ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ:** ಮೈಸೂರು ಜಿಲ್ಲೆಯ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ಶಿಬಿರ, ಉದ್ಘಾಟನೆ: ಜಿಪಂ ಸಿಇಓ ಪೂರ್ಣಿಮಾ, ಅಧ್ಯಕ್ಷತೆ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ, ಮುಖ್ಯ ಅತಿಥಿಗಳು: ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ಸೇಪಿಯೆಂಟ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು** : ಚಾಮುಂಡಿ ವಲಯ ಅಂತರ ಕಾಲೇಜು ಫುಟ್‌ಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಪಿ. ಕೃಷ್ಣಯ್ಯ, ಉಪಸ್ಥಿತರು : ಸೇಪಿಯೆಂಟ್ ಶಿಕ್ಷಣ ಸಂಸ್ಥೆ ಖಜಾಂಚಿ ದಲ್ಜಿತ್ ರಾಮ್ ಚೌಧರಿ, ಚಾಮುಂಡಿ ವಲಯ ಸಂಚಾಲಕ ಡಾ. ಹೆಚ್.ಎಸ್. ಕೃಷ್ಣಕುಮಾರ್, ಸ್ಥಳ : ಮೈಸೂರು ವಿವಿ ಫುಟ್‌ಬಾಲ್ ಮೈದಾನ, ಬೆಳಗ್ಗೆ 8ಕ್ಕೆ.

■ **ಮೈಸೂರು ವಿವಿ ಯುವರಾಜ ಕಾಲೇಜು** : ಪ್ರಾಣಿಶಾಸ್ತ್ರ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ. ಎಸ್.ಎನ್. ಹೆಗ್ಡೆ, ಸ್ಥಳ: ರೆಫರೆನ್ಸ್ ಹಾಲ್, ಮಹಾರಾಜ ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜು:** ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದದೊಂದಿಗೆ, ಉದ್ಘಾಟನೆ: ಜಿಪಂ ಸಿಇಓ ಪೂರ್ಣಿಮಾ, ಬೆಳಗ್ಗೆ 11.30ಕ್ಕೆ ಸ್ಥಳ: ಸುವರ್ಣ ಮಹೋತ್ಸವ ಭವನ, ಕಾಲೇಜು ಆವರಣ, ಊಟಿ ರಸ್ತೆ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ** : ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ–ಡಾ.ಚಂದ್ರಶೇಖರ್, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ದೀಪಿಕಾ ಪಾಡುರಂಗಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ –ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ಅಮ್ಜದ್ ಆಲಿಖಾನ್–ಸರೋದ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಅರ್ಚನಾ ಉಡುಪ, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, "ಸಿದ್ದಪ್ಪಗಳು ಬೇಕಾಗಿದ್ದಾರೆ". ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ: ಯೋಗ ಸುಯೋಗ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ–ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು ಕೃಪಾ ಪಡ್ಕೆ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ–ಅರಣ್ಯ ಕೃಷಿ ಹಾಗೂ ಹೂವಿನ ಕೃಷಿಯಲ್ಲಿನ ಅನುಭವ ಕುರಿತು ಈರನಾಯಕ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ–Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳೀಹಾಡು– ಭಾಗವಹಿಸುವವರು ಬನ್ನೂರು ಚಿಕ್ಕತಾಯಮ್ಮ ಮತ್ತು ತಂಡ

ಮೈಸೂರು ಫೋಟೋಗ್ರಫಿ ಅಸೋಸಿಯೇಷನ್ ನೂತನ ಪದಾಧಿಕಾರಿಗಳ ಆಯ್ಕೆ

ಅಧ್ಯಕ್ಷರಾಗಿ ಎ.ಶಾಂತಪ್ಪ, ಉಪಾಧ್ಯಕ್ಷರಾಗಿ ವಿ.ಶೇಷಾದ್ರಿ, ಮಹಾ ಕಾರ್ಯದರ್ಶಿಯಾಗಿ ಎನ್.ಮುರಳೀಧರ್ ಆಯ್ಕೆ



ಮೈಸೂರು,ಜೂ.14(ಎಂಟಿವೈ)– ಮೈಸೂರು ಫೋಟೋಗ್ರಫಿ ಅಸೋಸಿಯೇಷನ್‌ಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ಎ.ಶಾಂತಪ್ಪ, ಉಪಾಧ್ಯಕ್ಷರಾಗಿ ವಿ.ಶೇಷಾದ್ರಿ, ಮಹಾ ಕಾರ್ಯದರ್ಶಿಯಾಗಿ ಎನ್.ಮುರಳಿಧರ್ ಸೇರಿದಂತೆ ವಿವಿಧ ಹುದ್ದೆಗಳಿಗೆ 11 ಮಂದಿ ಛಾಯಾಗ್ರಾಹಕರು ಆಯ್ಕೆಯಾಗಿದ್ದಾರೆ.

ಕಳೆದ 39 ವರ್ಷಗಳಿಂದ ಮೈಸೂರು ಫೋಟೋಗ್ರಫಿ ಅಸೋಸಿಯೇಷನ್‌ಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಎಸ್.ರಾಮಪ್ರಸಾದ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಚುನಾವಣೆ ನಡೆಸಿ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು.

ಸಂಘದ ನೂತನ ಅಧ್ಯಕ್ಷರಾಗಿ ಎ.ಶಾಂತಪ್ಪ (ಶಾಂತೂ, ಮೈಸೂರು), ಉಪಾಧ್ಯಕ್ಷರಾಗಿ ವಿ.ಶೇಷಾದ್ರಿ, ಮಹಾ ಕಾರ್ಯದರ್ಶಿಯಾಗಿ ಎನ್.ಮುರಳಿಧರ್, ಸಹ ಕಾರ್ಯದರ್ಶಿಯಾಗಿ ಎಂ.ಆರ್.ರೂಪೇಶ್, ಖಜಾಂಚಿಯಾಗಿ ಜೆ.ರವಿಂದ್ರಲಾಲ್, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎಸ್. ರಾಮಪ್ರಸಾದ್, ಸಿ. ಅಭಿನಂದನ್, ಎಂ.ಬಿ. ಜಗದೀಶ್, ಕೋ.ಸು. ನರಸಿಂಹಮೂರ್ತಿ, ಯೋಗಿಶ್, ಎ.ಆಲ್ಬರ್ಟ್ ವಿನ್ಸಂಟ್ ಅವರು ಆಯ್ಕೆಯಾದರು.

ಈ ವೇಳೆ ಸಂಘದ ಅಧ್ಯಕ್ಷ ಎ.ಶಾಂತಪ್ಪ ಮಾತನಾಡಿ, ಈ ನೂತನ ಕಾರ್ಯಕಾರಿ ಸಮಿತಿ ಆಯ್ಕೆಯಾದ ನಂತರ 39 ವರ್ಷಗಳ ನಂತರ ಸಂಘದ ಅಭಿವೃದ್ಧಿ ಹಾಗೂ ಬಲವರ್ಧನೆಗಾಗಿ ಸಂಘವನ್ನು ಟ್ರಸ್ಟ್ ಆಗಿ ಮಾರ್ಪಡಿಸಿ ನೋಂದಣಿ ಮಾಡಿಸಲಾಯಿತು. ಈ ಸಂಘದ ಕೆಲವು ಸದಸ್ಯರುಗಳು ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ನಿರ್ವಹಿಸುತ್ತಿದ್ದರೂ ಪ್ರವೃತ್ತಿಯಾಗಿ ನಿಸರ್ಗ ಹಾಗೂ ವನ್ಯಜೀವಿ ಛಾಯಾಗ್ರಹಣವನ್ನು ಆಯ್ಕೆ ಮಾಡಿಕೊಂಡು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಅಲ್ಲದೆ, ಅಂತರರಾಷ್ಟ್ರೀಯ ಮಟ್ಟದ ಛಾಯಾಗ್ರಾಹಕರಾಗಿ ಖ್ಯಾತಿಗಳಿಸಿ ಮೈಸೂರಿನ ಹೆಸರನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಗನಕ್ಕೇರಿಸಿದ್ದಾರೆ. ಹೀಗೆ ಮೈಸೂರು ಫೋಟೋಗ್ರಫಿ ಸಂಸ್ಥೆ ಕೀರ್ತಿ ಪತಾಕೆಯನ್ನು ಹಾರಿಸಿದೆ ಎಂದರು.

ಈ ಸಂಸ್ಥೆಯಲ್ಲಿ ಮೈಸೂರು ಫೋಟೋಗ್ರಫಿ ಅಸೋಸಿಯೇಷನ್ ಕಾರ್ಪೋರೇಟ್ ಸದಸ್ಯತ್ವವನ್ನು ಪಡೆದಿರುತ್ತದೆ. ಪ್ರಸ್ತುತ ಮೈಸೂರು ಫೋಟೋಗ್ರಫಿ ಅಸೋಸಿಯೇಷನ್ ಟ್ರಸ್ಟ್ ಸದಸ್ಯತ್ವವನ್ನು ಪಡೆಯಲಿಚ್ಛಿಸುವ ವನ್ಯಜೀವಿ ಛಾಯಾಗ್ರಾಹಕರು ದೂರವಾಣಿ ಸಂಖ್ಯೆ 9448023146, 8310419503, 9845660686 ಸಂಪರ್ಕಿಸುವಂತೆ ಕೋರಿದ್ದಾರೆ.

ಮುಕ್ತ ವಿವಿಯಲ್ಲಿ ಪದವಿ ಪಡೆದವರಿಗೆ ಉದ್ಯೋಗ ಕಲ್ಪಿಸುವ ಸಂಬಂಧ ಖಾಸಗಿ ಉದ್ದಿಮೆಗಳೊಂದಿಗೆ ಒಪ್ಪಂದ



ಮೈಸೂರು, ಜೂ.14(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ನೇರವಾಗಿ ಉದ್ಯೋಗ ಕಲ್ಪಿಸುವ ಸಲುವಾಗಿ ವಿವಿಧ ಖಾಸಗಿ ಉದ್ದಿಮೆಗಳೊಂದಿಗೆ ಮಂಗಳವಾರ ಒಪ್ಪಂದ ಮಾಡಿಕೊಳ್ಳಲಾಯಿತು.

ಮುಕ್ತ ವಿವಿ ಅತಿಥಿ ಗೃಹದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 'ಸುಪ್ರಿಂ ಫಾರ್ಮಾಸ್ಯೂಟಿಕಲ್ಸ್', 'ವಿಎಸ್‌ಟಿ ಟಿಲ್ಲರ್ಸ್', 'ಜಿ.ಆರ್.ಎಸ್ ಇಂಜಿನಿಯರಿಂಗ್', 'ತ್ರಿವೇಣಿ ಇಂಜಿನಿಯರಿಂಗ್', 'ಬ್ರೇಕ್ಸ್ ಇಂಡಿಯಾ ಲಿಮಿಟೆಡ್', 'ಸೈಡರ್‌ಫೋರ್ಜ್' ಹಾಗೂ 'ಕೇನ್ಸ್ ಟೆಕ್ನಾಲಜೀಸ್' ಕಂಪನಿಗಳ ಪ್ರತಿನಿಧಿಗಳೊಂದಿಗೆ ಒಪ್ಪಂದ ನೆರವೇರಿತು.

ಈ ವೇಳೆ ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಮಾತನಾಡಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈಗ ಇಂಟರ್ನ್‌ಶಿಪ್ ಕಡ್ಡಾಯವಾಗಿದ್ದು, ಆದರೆ ಉದ್ದಿಮೆಗಳಿಗೆ ಇಂಟರ್ನ್‌ಶಿಪ್‌ಗೆ ಅವಕಾಶ ನೀಡುವುದು ಕಷ್ಟ, ಇಂಟರ್ನ್‌ಶಿಪ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆಯಾಗಲಿದೆ ಎಂದು ತಿಳಿಸಿದರು.

ಕರಾಮುವಿಯು ಪ್ರಸ್ತುತ ಕರ್ನಾಟಕದಲ್ಲಿ ದೂರಶಿಕ್ಷಣ ನೀಡುವ ಏಕೈಕ ಸಂಸ್ಥೆಯಾಗಿದ್ದು ಹೆಚ್ಚಿನ ವಿದ್ಯಾರ್ಥಿಗಳು ಗ್ರಾಮೀಣ ಹಾಗೂ ಬಡತನದಿಂದ ಬಂದವರಾಗಿರುತ್ತಾರೆ. ಇವರು ಕೆಲಸ ಕೊಡಿಸುವಂತಹ ಪದವಿಗಳಿಗಾಗಿ ಎದುರು ನೋಡುತ್ತಿದ್ದು ಇಂತಹ ಒಪ್ಪಂದಗಳು ಸಹಕಾರಿಯಾಗಲಿವೆ ಎಂದು ತಿಳಿಸಿದರು.

ಸಮಾಜದ ಉನ್ನತೀಕರಣಕ್ಕಾಗಿ ಹಾಗೂ ಉದ್ಯೋಗಾರ್ಹ ಪದವೀಧರರನ್ನು ಸೃಷ್ಟಿಸುವಲ್ಲಿ ಕರಾಮುವಿಯೊಂದಿಗೆ ಕೈ ಜೋಡಿಸುವಂತೆ ಉದ್ಯಮಿಗಳನ್ನು ವಿನಂತಿಸಿದ ಅವರು, ಈ ಒಪ್ಪಂದಗಳಿಂದ ಕರಾಮುವಿಯ ಜೊತೆ ವಿವಿಧ ಕಂಪನಿಗಳ ಪರಿಣಿತಿ ವಿನಿಮಯ, ಕನ್ಸಲ್ಟೆನ್ಸಿ ಪ್ರಾಜೆಕ್ಟ್‌ಗಳು, ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ನೀಡಿಕೆ, ಜಂಟಿ ಸಂಶೋಧನೆಗಳು ಸೇರಿದಂತೆ ಇತ್ಯಾದಿಗಳಿಗೆ ಅನುಕೂಲವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಕರಾಮುವಿಯು ಜೆಕೆ ಗ್ಲೋಬಲ್ ಅಕಾಡೆಮಿಯವರೊಂದಿಗೆ ಪರಿಣಿತರ ವಿನಿಮಯಕ್ಕಾಗಿ ಒಪ್ಪಂದ ಮಾಡಿಕೊಂಡಿತು. ಹಾಗೂ ಅಂಥ ವಿದ್ಯಾರ್ಥಿಗಳಿಗಾಗಿ ಕರಾಮುವಿಯ ಸಿದ್ಧಪಾಠಗಳನ್ನು ಶ್ರವ್ಯಪಾಠಗಳನ್ನಾಗಿ ಪರಿವರ್ತಿಸಲು ಮೈಕಾ ಕಾಲೇಜಿನ ಜೊತೆಯೂ ಸಹಾ ಒಪ್ಪಂದ ಮಾಡಿಕೊಂಡಿತು. ಕುಲಸಚಿವ ಪ್ರೊ.ಆರ್. ರಾಜಣ್ಣ, ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ನಿರ್ದೇಶಕ ಡಾ.ಹೆಚ್.ರಾಜೇಶ್ವರಿ, ಆಂತರಿಕ ಗುಣಮಟ್ಟ ಭರವಸೆ ಕೇಂದ್ರದ ನಿರ್ದೇಶಕ ಡಾ.ನಿರಂಜನ್ ರಾಜ್, ವಿವಿಯ ಉದ್ದಿಮೆ ಸಂಪರ್ಕ ಅಧಿಕಾರಿ ಡಾ.ಅನಂತೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕೊರೊನಾ ಆತಂಕ ಬೇಡ: ಮಾರ್ಗಸೂಚಿ ಪಾಲನೆ ಒಳಿತು

ಆರೋಗ್ಯ ಸಚಿವ ಡಾ.ಸುಧಾಕರ್ ಸಲಹೆ

ಮೈಸೂರು, ಜೂ.14(ಎಂಕೆ)– ಕೊರೊನಾ ಸೋಂಕು ಹರಡುವಿಕೆ ಪ್ರಮಾಣ ಕಡಿಮೆಯಿದ್ದು, ಜನರು ಆತಂಕ ಪಡುವ ಅಗತ್ಯವಿಲ್ಲ. ಆದರೆ ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸಿದರೆ ಒಳಿತು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಡಾ.ಸುಧಾಕರ್ ಹೇಳಿದರು.

ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರೋಗ ಲಕ್ಷಣಗಳು ಸಾಮಾನ್ಯಕ್ಕಿಂತಲೂ ಸೌಮ್ಯವಾಗಿ ಕಂಡುಬರುತ್ತಿದೆ ಮಕ್ಕಳಲ್ಲಿ ಸೌಮ್ಯಕ್ಕಿಂತಲೂ ಕಡಿಮೆ ಇದೆ. 12 ವರ್ಷ ಮೇಲ್ಪಟ್ಟ ಮಕ್ಕಳು ಲಸಿಕೆ ಪಡೆದುಕೊಳ್ಳಬೇಕು. ಮೈಸೂರಿನಲ್ಲಿಯೂ ಕೊರೊನಾ ಸೋಂಕಿತರ ಸಂಖ್ಯೆ ಕಡಿಮೆಯಿದ್ದು, ಸಾವು–ನೋವು ಗಳಿಲ್ಲ ಎಂದರು. ಯಾವುದಾದರೂ ಒಂದು ಶಾಲೆಯಲ್ಲಿ 10ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡರೆ ಅಂತಹ ಶಾಲೆಗಳಿಗೆ ರಜೆ ನೀಡಲಾಗುವುದು. ಕೊರೊನಾ ಸಂಬಂಧ ಕೇಂದ್ರ ಸರ್ಕಾರದಿಂದಲೂ ಯಾವುದೇ ಮಾರ್ಗಸೂಚಿಗಳು ಬಂದಿಲ್ಲ ಎಂದು ತಿಳಿಸಿದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹೆಡಗೆವಾರ್ ಪಾತ್ರ: ಸಿದ್ದರಾಮಯ್ಯ ಪೇಚಿಗೆ!?

ಬೆಂಗಳೂರು, ಜೂ.14– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಜಾರಿ ನಿರ್ದೇಶನಾಲಯ ನೊಟೀಸ್ ಜಾರಿಗೊಳಿಸಿರುವುದನ್ನು ವಿರೋಧಿಸಿ ನಡೆಸಿದ ಪ್ರತಿಭಟನೆಯ ಭಾಗವಾಗಿ ಟ್ವಿಟರ್‌ನಲ್ಲಿ ಹ್ಯಾಷ್ ಟ್ಯಾಗ್ ಮೂಲಕ ರಾಹುಲ್ ಗಾಂಧಿಗೆ ಬೆಂಬಲ ವ್ಯಕ್ತಪಡಿಸುವಾಗ ವಿಪಕ್ಷ ನಾಯಕ ಸಿದ್ದರಾಮಯ್ಯ ಎಡವಟ್ಟು ಮಾಡಿಕೊಂಡಿದ್ದಾರೆ.



ಆಡಳಿತಾರೂಢ ಬಿಜೆಪಿ ಹಾಗೂ ಅದರ ಸೈದ್ಧಾಂತಿಕ ಮಾರ್ಗದರ್ಶಕ ಸಂಸ್ಥೆ ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸುವ ಭರದಲ್ಲಿ ಸಿದ್ದರಾಮಯ್ಯ 1942ರ ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ಹೆಡಗೆವಾರ್, ಗೋಲ್ವಾಲ್ಕರ್ ಅವರು ಬ್ರಿಟೀಷರ ಜೊತೆ ಸೇರಿ ಸಂಚು ರೂಪಿಸಿ ಚಳುವಳಿಯನ್ನು ಹತ್ತಿಕ್ಕಲು ಯತ್ನಿಸಿದ್ದನ್ನು ಈ ದೇಶದ ಜನ ಮರೆತಿಲ್ಲ ಎಂದು ಹೇಳಿದ್ದರು. ಆದರೆ 1940ರ ಜೂ.21ರಂದೇ ಮೃತಪಟ್ಟಿದ್ದ ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೆವಾರ್ 1942ರಲ್ಲಿ ಬ್ರಿಟಿಷರ ಜೊತೆ ಸೇರಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಹತ್ತಿಕ್ಕಲು ಸಂಚು ರೂಪಿಸಲು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಸಿದ್ದರಾಮಯ್ಯಗೆ ಸಾಮಾಜಿಕ ಜಾಲತಾಣಗಳಲ್ಲಿ ಕೇಳಲಾಗುತ್ತಿದೆ.

ಸಿದ್ದರಾಮಯ್ಯ ಅವರ ಟ್ವಿಟರ್ ಹ್ಯಾಂಡಲ್ ಅನ್ನು ನಿರ್ವಹಿಸುತ್ತಿರುವ ವ್ಯಕ್ತಿಯ ವಿರುದ್ಧ ಟ್ವೀಟಿಗರು ಟೀಕಾ ಪ್ರಹಾರ ನಡೆಸುತ್ತಿದ್ದು, ಇತಿಹಾಸ ಗೊತ್ತಿಲ್ಲದವರು ಟ್ವೀಟ್ ಮಾಡಿದರೆ ಇದೇ ರೀತಿಯ ಎಡವಟ್ಟಾಗುತ್ತದೆ ಎಂದು ವ್ಯಂಗ್ಯವಾಡಿದ್ದಾರೆ. ಸಿದ್ದರಾಮಯ್ಯ ಅವರ ಟ್ವೀಟ್‌ನ ಈ screen shot ಈಗ ಎಲ್ಲೆಡೆ ವೈರಲ್ ಆಗತೊಡಗಿವೆ.

ಯೋಗ ಆಧ್ಯಾತ್ಮಿಕ ಆಯಾಮ ಒಳಗೊಂಡಿರುವ ವೈದ್ಯಕೀಯ ವಿಜ್ಞಾನ

'ಯೋಗದ ಇತಿಹಾಸ, ಅದರ ಬಹುವಿಧದ ಉಪಯುಕ್ತತೆ' ವೆಬಿನಾರ್ ಉದ್ಘಾಟಿಸಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಮತ



ಮೈಸೂರು, ಜೂ.14(ಆರ್‌ಕೆಬಿ)– ಯೋಗವು ಆಧ್ಯಾತ್ಮಿಕ ಆಯಾಮಗಳನ್ನು ಒಳಗೊಂಡಿರುವ ವೈದ್ಯಕೀಯ ವಿಜ್ಞಾನವಾಗಿದೆ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದ ಬೋರ್ಡ್ ರೂಂನಲ್ಲಿ ಮಂಗಳವಾರ ಎಜುಕೇಶನಲ್ ಮಲ್ಟಿ ಮೀಡಿಯಾ ರಿಸರ್ಚ್ ಸೆಂಟರ್ ಮತ್ತು ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆ ಜಂಟಿಯಾಗಿ ಆಯೋಜಿಸಿದ್ದ 'ಯೋಗದ ಇತಿಹಾಸ ಮತ್ತು ಅದರ ಬಹುವಿಧದ ಪ್ರಯೋಜನಗಳು' ಕುರಿತ ವೆಬಿನಾರ್ ಉದ್ಘಾಟಿಸಿ ಅವರು ಮಾತನಾಡಿದರು.


ಎಸ್–ವ್ಯಾಸ ವಿಶ್ವ ವಿದ್ಯಾನಿಲಯವು ಯೋಗದ ಪ್ರಚಾರ ನಡೆಸುತ್ತಿರುವ ವಿಶ್ವದ ಮೊದಲ ವಿವಿಯಾಗಿದೆ. ಕಳೆದ ಕೆಲವು ದಶಕಗಳಲ್ಲಿ ಡಾ.ಹೆಚ್.ಆರ್.ನಾಗೇಂದ್ರ ಗುರೂಜಿ ಅವರು ಯೋಗದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಯೋಗವು ಇಂದು ವಿಶ್ವಾದ್ಯಂತ ಪ್ರಾಮುಖ್ಯತೆ ಪಡೆಯುತ್ತಿದೆ. ಮಾರಣಾಂತಿಕ ಕಾಯಿಲೆಗಳನ್ನು ಎದುರಿಸಲು ಮತ್ತು ಗುಣಪಡಿಸಲು ಮತ್ತು ಮಾನವನ ಆರೋಗ್ಯ ರಕ್ಷಣೆ ಮತ್ತು ಕಲ್ಯಾಣವನ್ನು ಉತ್ತೇಜಿಸುವಲ್ಲಿ ಯೋಗ ಹಾಗೂ ಪ್ರಾಚೀನ ಆಯುರ್ವೇದ ಪದ್ಧತಿ ಸಹಕಾರಿಯಾಗಿದೆ ಎಂದರು.

ಕೋವಿಡ್ ಸಾಂಕ್ರಾಮಿಕ ರೋಗದಿಂದ ನಮ್ಮ ಪ್ರಾಚೀನ ಆರೋಗ್ಯ ಪದ್ಧತಿ ಮತ್ತೆ ಮುನ್ನಲೆಗೆ ಬಂತು. ಆಯುರ್ವೇದಕ್ಕೆ ಜಾಗತಿಕ ಮನ್ನಣೆ ಸಿಕ್ಕಿತು. ಆಧುನಿಕ ಜೀವನಶೈಲಿ ಮತ್ತು ಅದರ ಸ್ವಭಾವದಿಂದ ಉಂಟಾಗುವ ರೋಗದ ವಿರುದ್ಧ ನಾವಿಂದು ಹೋರಾಡಬೇಕಿದೆ. ಔಷಧ–ಅಲೋಪತಿ, ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ ಇತರ ಸಂಗತಿಗಳನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಆಯುಷ್ ಅವರ ವಿಶಿಷ್ಟ ವಿಧಾನಗಳನ್ನು ಅನುಸರಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಇಎಂಆರ್‌ಸಿ ನಿರ್ದೇಶಕ ಪ್ರೊ.ಎಚ್. ರಾಜಶೇಖರ, ಎಸ್– ವ್ಯಾಸ ಡೀಮ್ಡ್ ವಿವಿ ಕುಲಪತಿ ಡಾ.ಬಿ.ಆರ್.ರಾಮಕೃಷ್ಣ ಕುಲಸಚಿವ ಪ್ರೊ.ಎಂ.ಕೆ.ಶ್ರೀಧರ್, ಡಾ.ಕೆ.ಎನ್. ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಜೆಡಿಎಸ್‌ನಿಂದ ಶಾಸಕ ಗುಬ್ಬಿ ಶ್ರೀನಿವಾಸ್, ಶ್ರೀನಿವಾಸ್‌ಗೌಡ ಉಚ್ಚಾಟನೆ ನಿರ್ಧಾರ

ಬೆಂಗಳೂರು, ಜೂ.14– ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಹಿನ್ನೆಲೆಯಲ್ಲಿ ಜೆಡಿಎಸ್ ಶಾಸಕರಾದ ಗುಬ್ಬಿ ಶ್ರೀನಿವಾಸ್ ಮತ್ತು ಶ್ರೀನಿವಾಸ್‌ಗೌಡರನ್ನು ಉಚ್ಚಾಟನೆ ಮಾಡಲು ತೀರ್ಮಾನ ಮಾಡಲಾಗಿದೆ. ಈ ಸಂಬಂಧ ನಾಳೆಯೇ ಆದೇಶ ಹೊರಡಿ ಸುವುದಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಸ್ಪಷ್ಟಪಡಿಸಿದರು. ಬೆಂಗಳೂರಿನಲ್ಲಿ ಮಾತನಾಡಿದ ಸಿಎಂ ಇಬ್ರಾಹಿಂ, ಈ ಇಬ್ಬರನ್ನು ಅಮಾನತು ಮಾಡಲಾಗಿದೆ. ಕುಮಾರಸ್ವಾಮಿ ಅವರು ಬೆಂಗಳೂರಿನ ಹೊರಗೆ ಇದ್ದಾರೆ. ನಾಳೆ ಅವರ ಬಳಿ ಸಹಿ ಪಡೆದ ಬಳಿಕ ಅಧಿಕೃತ ಆದೇಶ ಹೊರಡಿಸುತ್ತೇವೆ ಎಂದರು.



ಇಬ್ಬರ ಸದಸ್ಯತ್ವ ರದ್ದು ಮಾಡಲು ಬುಧವಾರ ಸ್ಪೀಕರ್‌ಗೆ ದೂರು ಕೊಡುತ್ತೇವೆ. ಇಬ್ಬರು ಪಕ್ಷದ ವ್ಹಿಪ್ ಉಲ್ಲಂಘನೆ ಮಾಡಿದ್ದಾರೆ. ಕಾಂಗ್ರೆಸ್–ಬಿಜೆಪಿ ಒಟ್ಟಾಗಿ ಅಡ್ಡ ಮತದಾನ ಮಾಡಿಸಿ ದ್ದಾರೆ. ಹೀಗಾಗಿ ಅನರ್ಹ ಮಾಡಿ ಎಂದು ಮನವಿ ಮಾಡುತ್ತೇವೆ. ಈಗ ಇರುವ ಸ್ಪೀಕರ್ ಸಂವಿಧಾನ ಬದ್ಧವಾಗಿ ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆ ಇದೆ. ಒಂದು ವೇಳೆ ಸ್ಪೀಕರ್ ಸರಿಯಾಗಿ ನಿರ್ಣಯ ಮಾಡದೇ ಹೋದರೆ ಕೋರ್ಟ್ ಮೊರೆ ಹೋಗುತ್ತೇವೆ ಎಂದು ತಿಳಿಸಿದರು. ಗುಬ್ಬಿ ಶ್ರೀನಿವಾಸ್ ತಪ್ಪು ಮಾಡಿಲ್ಲ ಅಂದರೆ ಅವತ್ತೆ ಹೇಳಬೇಕಿತ್ತು. ಮತ ಪತ್ರ ಮುಚ್ಚಿಕೊಂಡು ಯಾಕೆ ಮತ ಹಾಕಿದರು? ಆಮೇಲೆ ಯಾಕೆ ಕುಮಾರಸ್ವಾಮಿ ಬಗ್ಗೆ ಮಾತಾಡಿದರು. ಈಗ ಯಾಕೆ ಆಣೆ ಪ್ರಮಾಣ ಮಾಡುತ್ತಾರೆ ಎಂದು ಗುಬ್ಬಿ ಶ್ರೀನಿವಾಸ್ ವಿರುದ್ಧ ಸಿಎಂ ಇಬ್ರಾಹಿಂ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಅಧ್ಯಕ್ಷರೇ ಬಿಜೆಪಿಗೆ ಮತ ಹಾಕಿಸಿದ್ದಾರೆ. ಇತಿಹಾಸದಲ್ಲಿ ಮೊದಲ ಬಾರಿಗೆ ಹೀಗೆ ಆಗಿದೆ. ಸೋನಿಯಾ ಗಾಂಧಿ, ಸುರ್ಜೇವಾಲಾ ಯಾಕೆ ಮೌನವಾಗಿ ಇದ್ದಾರೆ. ಇವರು ಮೌನವಾಗಿ ಇರೋದು ನೋಡಿದರೆ ಇವರು ಕೂಡಾ ಶಾಮೀಲಾಗಿದ್ದಾರೆ ಅನ್ನಿಸುತ್ತದೆ ಎಂದು ಆರೋಪ ಮಾಡಿದರು. ಅಡ್ಡ ಮತದಾನದ ಬಗ್ಗೆ ಮಾತಾಡೋದು ಬಿಟ್ಟು, ಇಡಿ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ ಯಾಕೆ. ಕಾಂಗ್ರೆಸ್‌ನವರು ಯಾಕೆ ಇಡಿ ದಾಳಿ ಬಗ್ಗೆ ಪ್ರತಿಭಟನೆ ಮಾಡುತ್ತಾ ಇದ್ದಾರೆ. ಇಲ್ಲಿ ನಮ್ಮ ಶಾಸಕರಿಂದ ಅಡ್ಡ ಮತದಾನ ಮಾಡಿಸಿಕೊಂಡಿದ್ದಾರೆ. ಇದು ಸರಿನಾ, ಇಲ್ಲಿ ಅಡ್ಡ ಮತದಾನ ಮಾಡಿಸಿ, ಅಲ್ಲಿ ಇಡಿ ದಾಳಿ ಬಗ್ಗೆ ಪ್ರತಿಭಟನೆ ಮಾಡೋಕೆ ಅವರಿಗೆ ಯಾವ ನೈತಿಕತೆ ಇದೆ ಅಂತ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಕಾರ್ಪೊರೇಟರ್ ನೇತೃತ್ವದಲ್ಲಿ ಪ್ರತಿಭಟನೆ


ಪ್ರಧಾನಿ ಕಾರ್ಯಕ್ರಮದಲ್ಲಿ ಯದುವೀರ್‌ಗೆ ಆಸನದ ವ್ಯವಸ್ಥೆ ಕಲ್ಪಿಸದ ಆರೋಪ



ಮೈಸೂರು,ಜೂ 14(ಜಿಎ)– ವಿಶ್ವ ಯೋಗ ದಿನಾಚರಣೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಅರಮನೆ ಆವರಣದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ರಾಜವಂಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಆಸನದ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಆರೋಪಿಸಿ ಮೈಸೂರು ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ವಿಶ್ವ ಯೋಗ ದಿನಾಚರಣೆ ಅಂಗವಾಗಿ ಅರಮನೆ ಆವರಣದಲ್ಲಿ ಯೋಗ ಮತ್ತು ವೇದಿಕೆ ಕಾರ್ಯಕ್ರಮ ನಡೆಯುತ್ತಿದ್ದರೂ ರಾಜ ವಂಶಸ್ಥರನ್ನು ವೇದಿಕೆ ಕಾರ್ಯಕ್ರಮಕ್ಕೆ ಆಹ್ವಾನಿಸಿಲ್ಲ. ಇದು ರಾಜಮನೆತನಕ್ಕೆ ಮಾಡಿರುವ ಅವಮಾನ ಇದನ್ನು ಮೈಸೂರಿನ ಜನತೆ ಖಂಡಿಸುತ್ತಾರೆ. ಮಹಾರಾಜರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಪ್ರಧಾನ ಮಂತ್ರಿ ಮೋದಿಯವರು ಪಕ್ಕದಲ್ಲಿ ಆಸೀನರಾಗಲು ಅವಕಾಶ ಮಾಡಿಕೊಡಬೇಕು. ಇಲ್ಲವಾದಲ್ಲಿ ಮೈಸೂರಿನ ಜನತೆಯೊಂದಿಗೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಪ್ರಶಾಂತ್ ಆರ್ಯ, ಸತೀಶ್, ಉಮೇಶ್, ರವಿ ಕುಮಾರ್, ರಾಜು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿಗಳ ಬಗ್ಗೆ ಜಾಗೃತಿ



ಮೈಸೂರು,ಜೂ.14(ಎಂಟಿವೈ)– ಮಕ್ಕಳ ಹಕ್ಕುಗಳ ಸಂರಕ್ಷಣೆ ಕುರಿತಂತೆ ಆರ್‌ಎಲ್‌ಹೆಚ್‌ಪಿ ಹಾಗೂ ಚೈಲ್ಡ್ ಲೈನ್–1098 ವತಿಯಿಂದ ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಿ ಬಾಲ್ಯವಿವಾಹ ಹಾಗೂ ಬಾಲಕಾರ್ಮಿಕ ವಿರೋಧ ಕಾಯ್ದೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಚೈಲ್ಡ್‌ಲೈನ್ ಸಂಯೋಜಕ ಶಶಿಕುಮಾರ್ ಮಾತನಾಡಿ, 1992ರ ಡಿ.11ರಂದು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸಹಿ ಮಾಡಿದ್ದು, 54 ಪರಿಚ್ಛೇದಗಳಲ್ಲಿ 4 ಪ್ರಮುಖ ಹಕ್ಕುಗಳನ್ನು ಮಕ್ಕಳಿಗೆ ಸಂವಿಧಾನ ಬದ್ಧವಾಗಿ ನೀಡಲಾಗಿದೆ. ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು ಹಾಗೂ ಭಾಗವಹಿಸುವ ಹಕ್ಕನ್ನು ನೀಡಲಾಗಿದೆ ಎಂದರು.

ಮಕ್ಕಳು ಹಕ್ಕುಗಳ ಜೊತೆಯಲ್ಲಿ ಕರ್ತವ್ಯಗಳನ್ನು ಪಾಲಿಸಬೇಕು. ಸರ್ಕಾರದ ವತಿಯಿಂದ ಹಲವು ಜಾಗೃತಿ ಕಾರ್ಯಕ್ರಮ ಜರುಗಿದರೂ ಇನ್ನು ಬಾಲಕಾರ್ಮಿಕ ಪದ್ಧತಿ ಹಾಗೂ ಬಾಲ್ಯವಿವಾಹ ಪದ್ಧತಿ ಜೀವಂತವಾಗಿದೆ. ಈ ನಿಟ್ಟಿನಲ್ಲಿ ಬಾಲ್ಯ ವಿವಾಹ ಮತ್ತು ಬಾಲಕಾರ್ಮಿಕರು ಕಂಡುಬಂದರೆ ಚೈಲ್ಡ್‌ಲೈನ್ 1098 ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿಡಲಾಗುತ್ತದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಚೈಲ್ಡ್‌ಲೈನ್ ಸದಸ್ಯ ಪ್ರೇಮಕುಮಾರ್, ಶಾಲೆಯ ಮುಖ್ಯ ಶಿಕ್ಷಕ ಎಂ.ದೇವಲಿಂಗಸ್ವಾಮಿ ಹಾಗೂ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

ಇಸ್ಕಾನ್‌ನ ರಾಜಾಧಿರಾಜ ಗೋವಿಂದ ದೇಗುಲ ಉದ್ಘಾಟಿಸಿದ ರಾಷ್ಟ್ರಪತಿ ಕೋವಿಂದ್

ಬೆಂಗಳೂರು, ಜೂ.14– ಇಸ್ಕಾನ್ ಸಂಸ್ಥೆ ನಿರ್ಮಿಸಿರುವ ನೂತನ ರಾಜಾಧಿರಾಜ ಗೋವಿಂದ ದೇವಾಲಯ ಹಾಗೂ ಸಾಂಸ್ಕೃತಿಕ ಸಂಕೀರ್ಣ ಕಟ್ಟಡವನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಮಂಗಳವಾರ ಉದ್ಘಾಟಿಸಿದರು.




ಕನಕಪುರ ರಸ್ತೆಯ ವಸಂತಪುರದ ವಿಶಾಲ ಜಾಗದಲ್ಲಿ ಈ ನೂತನ ದೇವಾಲಯ ನಿರ್ಮಿಸಲಾಗಿದ್ದು, ದೇವಾಲಯಕ್ಕೆ ಮಂಗಳವಾರ ಬೆಳಿಗ್ಗೆ ಆಗಮಿಸಿದ ರಾಷ್ಟ್ರಪತಿ ಕೋವಿಂದ್ ಅವರು ಪತ್ನಿ ಸವಿತಾ ಸಮೇತ ದೇವರ ದರ್ಶನ ಪಡೆದರು. ಈ ವೇಳೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆಗಿದ್ದರು. ದೇವರ ದರ್ಶನ ನಂತರ, ದೇವಾಲಯ ಆವರಣದ ವೇದಿಕೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ತಿರುಮಲ ಮಾದರಿಯಲ್ಲಿ ಈ ದೇವಾಲಯ ನಿರ್ಮಿಸಲಾಗಿದ್ದು, ಮುಂದಿನ 48 ದಿನಗಳಲ್ಲಿ ವಿಗ್ರಹ ಪ್ರತಿಷ್ಠಾಪನೆ ನಡೆಯಲಿದೆ. ಆಗಸ್ಟ್ 1ರ ನಂತರ ಸಾರ್ವಜನಿಕರ ಪ್ರವೇಶಕ್ಕೆ ದೇವಾಲಯ ಮುಕ್ತವಾಗಲಿದೆ' ಎಂದು ಇಸ್ಕಾನ್ ಬೆಂಗಳೂರು ಅಧ್ಯಕ್ಷ ಮಧು ಪಂಡಿತ್ ದಾಸ್ ಮಾಹಿತಿ ನೀಡಿದ್ದಾರೆ. ದೇಶದ ವಿವಿಧ ಭಾಗಗಳ ಭಕ್ತರ ಭಕ್ತಿಯ ಕ್ಷೇತ್ರ ಇದಾಗಲಿದೆ. ನಿತ್ಯವೂ ಉಚಿತ ಊಟದ ವ್ಯವಸ್ಥೆ ಇರಲಿದೆ ಎಂದೂ ಹೇಳಿದರು.

ಬೀದಿನಾಯಿಗಳ ರಕ್ಷಣೆಗೆ ಯೋಜನೆ: ಸಿಎಂ

ಆಧುನಿಕ ತಂತ್ರಜ್ಞಾನ ಬಳಸಿ ಮೈಸೂರಿನಲ್ಲಿ ಫಿಲ್ಮ್ ಸಿಟಿ ನಿರ್ಮಾಣ

ಬೆಂಗಳೂರು, ಜೂ.14–ವಿಶೇಷವಾಗಿ ನಾಯಿ ಮನುಷ್ಯನನ್ನು ಅತ್ಯಂತ ಪ್ರೀತಿ ಮಾಡುವ ಪ್ರಾಣಿ. ಮನುಷ್ಯ–ಪ್ರಾಣಿಗಳ ನಡುವಿನ ಸಂಬಂಧವನ್ನು ಅತ್ಯಂತ ಮಾರ್ಮಿಕವಾಗಿ, ಸೂಕ್ಷ್ಮವಾಗಿ, ಭಾವನಾತ್ಮಕವಾಗಿ 777 ಚಾರ್ಲಿ ಸಿನಿಮಾದ ನಿರ್ದೇಶಕರು ತೋರಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಅವರು ಬೆಂಗಳೂರಿನ ಒರಾಯನ್ ಮಾಲ್‌ನಲ್ಲಿ ಕಿರಣ್ ರಾಜ್ ನಿರ್ದೇಶನದ ನಟ ರಕ್ಷಿತ್ ಶೆಟ್ಟಿ ಅಭಿನಯದ 777 ಚಾರ್ಲಿ ಸಿನಿಮಾ ವೀಕ್ಷಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಪ್ರಾಣಿಗಳನ್ನು ಹಿಂಸಿಸಬಾರದು, ಪ್ರಾಣಿಗಳನ್ನು ರಕ್ಷಣೆ ಮಾಡಬೇಕು, ಸಾಧ್ಯವಿದ್ದರೆ ದತ್ತು ತೆಗೆದುಕೊಂಡು ಸಾಕಿದರೆ ಬಹಳ ಉಪಕಾರವಾಗುತ್ತದೆ. ಅವುಗಳಿಂದ ಹೆಚ್ಚು ಪ್ರೀತಿ, ಸಂತೋಷ, ನೆಮ್ಮದಿ ಸಿಗುತ್ತದೆ ಎಂದು ಮನೋಜ್ಞವಾದ ಕಥೆಯನ್ನು ತೋರಿಸಿದ್ದಾರೆ. ರಕ್ಷಿತ್ ಶೆಟ್ಟಿ ಪಾತ್ರ ಬಹಳ ಸೊಗಸಾಗಿದೆ ಎಂದರು.



ಈ ಚಿತ್ರವನ್ನು ಎಲ್ಲರೂ ಕೂಡ ನೋಡಬೇಕು ಎಂದರು. ನಾಯಿಗಳನ್ನು ದತ್ತು ತೆಗೆದುಕೊಂಡು ನೋಡಿಕೊಳ್ಳುವ, ಸಾಕಿ ಸಲಹುವ ಕೇಂದ್ರಗಳಿಗೆ ವಿಶೇಷ ಮನ್ನಣೆಯನ್ನು ಸರ್ಕಾರ ನೀಡಲಿದೆ. ಬೀದಿನಾಯಿಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು ಸರಿಯಾಗಿ ಸಾಕಿ ಸಲಹುವ ಕೇಂದ್ರಗಳನ್ನು ನಿರ್ಮಿಸುವ ಯೋಜನೆಯನ್ನು ತಜ್ಞರ ಜೊತೆ ಚರ್ಚಿಸಿ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

ಕೋವಿಡ್ ಸಂದರ್ಭದಲ್ಲಿ ಹಿನ್ನಡೆಯಾಗಿದ್ದ ಕನ್ನಡ ಚಿತ್ರರಂಗ ಈಗ ಮತ್ತೆ ಪುಟಿದೆದ್ದಿದೆ. ಕನ್ನಡ ಚಿತ್ರರಂಗ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಬಹಳಷ್ಟು ಸಾಧನೆಗಳನ್ನು ಮಾಡುತ್ತಿದೆ. ಈ ಬಗ್ಗೆ ನಮಗೆ ಹೆಮ್ಮೆಯಿದೆ. ಬರುವ ದಿನಗಳಲ್ಲಿ ಕನ್ನಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಹಳ ದೊಡ್ಡ ಹೆಸರು ಮಾಡುತ್ತದೆ ಎಂದರು.

ಫೋರಂ ಸೆಂಟರ್ ಸಿಟಿ ಈಗ 'ನೆಕ್ಸಸ್ ಸೆಂಟರ್ ಸಿಟಿ'



ನೂತನ ಐಡೆಂಟಿಟಿಯೊಂದಿಗೆ ರೂಪಾಂತರಗೊಂಡ ನೆಕ್ಸಸ್ ಮಾಲ್

ಫೋರಮ್ ಕೋರಮಂಗಲ	:	ನೆಕ್ಸಸ್ ಕೋರಮಂಗಲ
ಫೋರಮ್ ಶಾಂತಿನಿಕೇತನ	:	ನೆಕ್ಸಸ್ ಶಾಂತಿನಿಕೇತನ
ಫೋರಮ್ ನೈಬರ್‌ಹುಡ್	:	ನೆಕ್ಸಸ್ ವೈಟ್‌ಫೀಲ್ಡ್
ಫೋರಮ್ ಸುಜನಾ	:	ನೆಕ್ಸಸ್ ಹೈದರಾಬಾದ್
ಫೋರಮ್ ಸೆಲೆಬ್ರೇಷನ್	:	ನೆಕ್ಸಸ್ ಸೆಲೆಬ್ರೇಷನ್
ಫೋರಮ್ ಸೆಂಟರ್ ಸಿಟಿ	:	ನೆಕ್ಸಸ್ ಸೆಂಟರ್ ಸಿಟಿ
ಫೋರಮ್ ಫಿಝು	:	ನೆಕ್ಸಸ್ ಫಿಝು
ಫೋರಮ್ ವಿಜಯ	:	ನೆಕ್ಸಸ್ ವಿಜಯ
ಮಾಲ್ ಆಫ್ ಅಮೃತಸರ	:	ನೆಕ್ಸಸ್ ಅಮೃತಸರ
ಇಲಾನ್ಟೆ	:	ನೆಕ್ಸಸ್ ಇಲಾನ್ಟೆ
ಸೀವುಡ್ಸ್ ಗ್ರ್ಯಾಂಡ್ ಸೆಂಟ್ರಲ್	:	ನೆಕ್ಸಸ್ ಸೀವುಡ್ಸ್
ಯಸ್ಲ್ವಾಂದೆ ಒನ್	:	ನೆಕ್ಸಸ್ ಯಸ್ಲ್ವಾಂದೆ
ಅಹಮದಾಬಾದ್ ಒನ್	:	ನೆಕ್ಸಸ್ ಅಹಮದಾಬಾದ್ ಒನ್
ವೆಸ್ಟೆಂಡ್	:	ನೆಕ್ಸಸ್ ವೆಸ್ಟೆಂಡ್
ಟ್ರೆಷರ್ ಐಲ್ಯಾಂಡ್‌ನೆಕ್ಸ್ಟ್	:	ನೆಕ್ಸಸ್ ಇಂದೋರ್ ಸೆಂಟ್ರಲ್

ಮೈಸೂರು, ಜೂ.14– ಸುಮಾರು 10 ಮಿಲಿಯನ್ ಚದರ ಅಡಿ ಗ್ರೇಡ್ 'ಎ' ಶಾಪಿಂಗ್ ಸೆಂಟರ್‌ಗಳನ್ನು ಹೊಂದಿರುವ, 13 ಪ್ರಮುಖ ನಗರಗಳಲ್ಲಿ ಭಾರತದ ಅತೀ ದೊಡ್ಡ ಚಿಲ್ಲರೆ (ರಿಟೇಲ್) ವೇದಿಕೆಯಾದ ನೆಕ್ಸಸ್ ಮಾಲ್‌ಗಳು ತನ್ನ 17 ಚಿಲ್ಲರೆ ವಹಿವಾಟುಗಳನ್ನು ಒಂದೇ ಬ್ರ್ಯಾಂಡ್ ಗುರುತಿನ ಅಡಿಯಲ್ಲಿ ಹೊಸದಾಗಿ ಏಕೀಕರಿಸಿದೆ.

ಇದು ಭಾರತದ ಚಿಲ್ಲರೆ ವ್ಯಾಪಾರದ ಇತಿಹಾಸದಲ್ಲಿ ಅತ್ಯಂತ ಮಹತ್ವದ ರೂಪಾಂತರಗಳಲ್ಲಿ ಒಂದಾಗಿದ್ದು, ಗ್ರಾಹಕರಿಗೆ ನೆಕ್ಸಸ್ ಮಾಲ್‌ಗಳ ಬದ್ಧತೆಯನ್ನು ಸೂಚಿಸುತ್ತದೆ.

ನೆಕ್ಸ್ ಮಾಲ್ ಪ್ಲಾಟ್‌ಫಾರ್ಮ್‌ನ ಉದ್ಯೋಗಿಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು ಶಾಪರ್‌ಗಳ ನಡುವಿನ ಸಂಬಂಧಗಳನ್ನು ಬಲಪಡಿಸಲು ನೂತನ ಬ್ರ್ಯಾಂಡ್ ಹೆಚ್ಚು ಪರಿಣಾಮಕಾರಿಯಾಗಿ ಉತ್ತೇಜಿಸುತ್ತದೆ. ಹೊಸ ಲೋಗೋ ಆಕರ್ಷಕವಾಗಿದ್ದು, ಪ್ರಸ್ತುತ ಮತ್ತು ಭವಿಷ್ಯದ ಗ್ರಾಹಕರೊಂದಿಗೆ ಉತ್ತಮವಾಗಿ ತೊಡಗಿಸಿಕೊಳ್ಳುವ ನೆಕ್ಸಸ್ ಮಾಲ್‌ಗಳ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ.

ಈ ಬದಲಾವಣೆ ಸಂದರ್ಭದಲ್ಲಿ ಮಾತನಾಡಿರುವ ನೆಕ್ಸಸ್ ಮಾಲ್‌ಗಳ ಸಿಇಒ ದಲೀಪ್ ಸೆಹಗಲ್, "ಹೊಸ ಗುರುತು ನಮ್ಮ ಭರವಸೆಯ 'ಹರ್ ದಿನ್ ಕುಚ್ ನಯಾ' ಅನ್ನು ಜೀವಂತಗೊಳಿಸುತ್ತದೆ. ನಮ್ಮ 130ಕ್ಕೂ ಅಧಿಕ ಮಿಲಿಯನ್ ಗ್ರಾಹಕರಿಗೆ ನಾವು ಪ್ರತಿ ದಿನ ಹೊಸ, ಅನನ್ಯ ಮತ್ತು ವೈಯಕ್ತಿಕವಾದದ್ದನ್ನು ನೀಡುತ್ತೇವೆ. ಇದಲ್ಲದೆ, ಮರು ಬ್ರಾಂಡಿಂಗ್ ಖಚಿತಪಡಿಸಿಕೊಳ್ಳಲು ಹೆಚ್ಚಿನ ಸಹಾಯ ಮಾಡುತ್ತದೆ. ನಾವು ಮಾಡುವ ಎಲ್ಲವೂ ನಮ್ಮ ಗ್ರಾಹಕ ಕೇಂದ್ರಿತ, ಕಾಳಜಿ, ನಾವೀನ್ಯತೆ ಮತ್ತು ಶ್ರೇಷ್ಠತೆಯ ಮೌಲ್ಯಗಳ ಸುತ್ತ ಸುತ್ತುತ್ತದೆ ಎಂಬುದನ್ನು ಇದು ಖಚಿತಪಡಿಸುತ್ತದೆ.

ನಮ್ಮ ಪೋಷಕರ ಆತ್ಮವಿಶ್ವಾಸದಿಂದ ನಾವು ರೋಮಾಂಚನಗೊಂಡಿದ್ದೇವೆ. ಮರುಸ್ಥಾಪಿಸಲ್ಪಟ್ಟ ಇದು ನಿರಂತರ ಚೇತರಿಕೆ ಮತ್ತು ಬೆಳವಣಿಗೆಗೆ ಕಾರಣವಾಗುತ್ತದೆ. ಪ್ರಸ್ತುತ, ನಾವು 130% ಕ್ಕಿಂತ ಹೆಚ್ಚು ಮಾರಾಟದಲ್ಲಿ ಚೇತರಿಸಿಕೊಂಡಿದ್ದೇವೆ ಮತ್ತು ಪೋರ್ಟ್‌ಫೋಲಿಯೊ ಮಟ್ಟದಲ್ಲಿ 100%ಕ್ಕಿಂತ ಹೆಚ್ಚು ಹೆಜ್ಜೆ ಇಟ್ಟಿದ್ದೇವೆ ಎಂದು ಸೆಹಗಲ್ ಈ ಸಂದರ್ಭದಲ್ಲಿ ತಿಳಿಸಿದರು.

ಪ್ರೆಸ್ಟೀಜ್ ಗ್ರೂಪ್‌ನ 2021 ರಿಂದ ಎಂಟು ಶಾಪಿಂಗ್ ಸೆಂಟರ್‌ಗಳನ್ನು ಒಳಗೊಂಡಂತೆ ಬಲವಾದ ಸ್ವಾಧೀನದ ಆ ವೇಗದ ನಂತರ ನೆಕ್ಸಸ್ ಮಾಲ್‌ಗಳು ಎಂಬ ಒಂದೇ ಹೆಸರಿನ ಏಕೀಕರಣವು ಬರುತ್ತದೆ. ನೆಕ್ಸಸ್ ಮಾಲ್‌ಗಳು ಅಂದಿನಿಂದ ಭಾರತದ ಅತೀ ದೊಡ್ಡ ಮತ್ತು ವೈವಿಧ್ಯಮಯ ಚಿಲ್ಲರೆ ವೇದಿಕೆಯಾಗಿ ಬೆಳೆದಿದೆ.

ಶಾಪರ್‌ಗಳೊಂದಿಗೆ ಉತ್ತಮ ಸಂಪರ್ಕ ಸಾಧಿಸಲು, ನೆಕ್ಸಸ್ ಮಾಲ್‌ಗಳು ದಕ್ಷಿಣ ಭಾರತದಲ್ಲಿ ಮೇ 2022ರಲ್ಲಿ ಪ್ರಾರಂಭವಾಗುವ ಹಂತಗಳಲ್ಲಿ ತನ್ನ ಚಿಲ್ಲರೆ ಗುಣಲಕ್ಷಣಗಳನ್ನು ಮರುಬ್ರಾಂಡ್ ಮಾಡಲು ಪ್ರಾರಂಭಿಸಿದೆ. ಮುಂದಿನ ಕೆಲವು ತಿಂಗಳುಗಳಲ್ಲಿ ದೇಶಾದ್ಯಂತ ಮರುಬ್ರಾಂಡಿಂಗ್ ನೆಕ್ಸಸ್ ಮಾಲ್‌ಗಳ ಗ್ರಾಹಕರನ್ನು ಸಂಪರ್ಕಿಸುವ ಹಲವಾರು ಆಕರ್ಷಕ ಕಾರ್ಯಕ್ರಮಗಳ ಮೂಲಕ ಆಚರಿಸಲಾಗುತ್ತದೆ.

ಹೃದಯ ಬಡಿತದಲ್ಲಿ ಏರುಪೇರು: ನಟಿ ದೀಪಿಕಾ ಪಡುಕೋಣೆಗೆ ಚಿಕಿತ್ಸೆ



ಹೈದರಾಬಾದ್: ಶೂಟಿಂಗ್ ಸಮಯದಲ್ಲಿ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಅವರ ಆರೋಗ್ಯದಲ್ಲಿ ವ್ಯತ್ಯಾಸವಾಗಿದ್ದು, ತಕ್ಷಣವೇ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಇದೀಗ ದೀಪಿಕಾ ಪಡುಕೋಣೆ ಶೂಟಿಂಗ್ ಕಾರಣ ಹೈದರಾಬಾದಿನಲ್ಲಿ ಇದ್ದಾರೆ. ಶೂಟಿಂಗ್ ವೇಳೆ ಹೃದಯ ಬಡಿತ ಹೆಚ್ಚಳವಾದ ಕಾರಣ ಹೈದರಾಬಾದ್‌ನ ಕಾಮಿನೇನಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದು ಶೂಟಿಂಗ್ ಸೆಟ್‌ಗೆ ಮರಳಿದ್ದಾರೆ. ಇದೀಗ ಆರೋಗ್ಯದಲ್ಲಿ ಯಾವುದೇ ತೊಂದರೆ ಇಲ್ಲದೇ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ.

ದೀಪಿಕಾ ಪಡುಕೋಣೆ ಅವರು ಮುಂದಿನ ಚಿತ್ರದ ಶೂಟಿಂಗ್ ಹೈದರಾಬಾದಿನಲ್ಲಿ ನಡೆಯುತ್ತಿದ್ದು, ಶೂಟಿಂಗ್‌ನಲ್ಲಿ ನಿರತರಾಗಿದ್ದರು. ಆಗ ಕೊಂಚ ಹೃದಯ ಬಡಿತ ಹೆಚ್ಚಾಗಿ, ಸುಸ್ತಾಗಿದೆ ಎಂದು ಹೇಳಿದ್ದಾರೆ. ತಕ್ಷಣವೇ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಂಡು ಸೆಟ್‌ಗೆ ಮರಳಿದ್ದಾರೆ. ಈ ಸಿನಿಮಾದಲ್ಲಿ ಅಮಿತಾಬ್ ಬಚ್ಚನ್, ಪ್ರಭಾಸ್ ಅಭಿನಯಿಸುತ್ತಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಅಪ್ಪ : "ನೀನು ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದರೆ ನಿನಗೊಂದು ಬೈಸಿಕಲ್ ಕೊಡಿಸುತ್ತೇನೆ"

ಮಗ : "ಕಡಿಮೆ ಅಂಕ ತೆಗೆದುಕೊಂಡರೆ ಏನು ಕೊಡಿಸ್ತೀಯಾ?"

ಅಪ್ಪ : "ಒಂದು ರಿಕ್ಷಾ !"

ಮೈಸೂರು ಮಿತ್ರ

ಬುಧವಾರ, 15 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೀವು ಸದಾಕಾಲ ಆನಂದದಿಂದ ಇರಬೇಕಾದರೆ ನಿಮ್ಮನ್ನು ಸದಾಕಾಲ ದುಡಿಮೆಯಲ್ಲಿ ತೊಡಗಿಸಿಕೊಂಡಿರಿ –ಪರೋಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ವ್ಯಾಪಾರಕ್ಕೆ ನಿಮಿಷ, ಬೇಸಾಯಕ್ಕೆ ವರುಷ

ನಿಮ್ಮ ಪತ್ರಗಳು

ಅರೇನಹಳ್ಳಿಯಲ್ಲೇ ಆಹಾರ ಪಡಿತರ ವ್ಯವಸ್ಥೆ ಮಾಡಿ

ಮಾನ್ಯರೆ,

ಈ ಮೊದಲು ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮಕ್ಕೆ ಕಂಪಲಾಪುರ ವ್ಯವಸಾಯ ಸೇವಾ ಸಹಕಾರ ಸಂಘದ ಮೂಲಕ ಆಹಾರ ಪಡಿತರ ವಿತರಿಸಲಾಗುತ್ತಿತ್ತು. ಆನಂತರ ಎರಡು ಕಡೆ ನಿಭಾಯಿಸುವುದು ದುಸ್ತರವೆನಿಸಿ ಅದನ್ನು ನಮ್ಮ ಹೋಬಳಿ ಕೇಂದ್ರ ರಾವಂದೂರಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ವಹಿಸಿಕೊಡಲಾಯಿತು. ಇಲ್ಲೂ ಸಹ ಈಗ ರಾವಂದೂರು ಜತೆಗೆ ಅರೇನಹಳ್ಳಿ ಗ್ರಾಮದ ಆಹಾರ ಪಡಿತರ ನೀಡಲು ಹೆಚ್ಚಿನ ಕಾರ್ಯಭಾರ ವಹಿಸಲಾಗಿದ್ದು, ಇದು ಅಧಿಕ ಹೊರೆಯಾಗಿದ್ದರೂ ಸ್ಥಳೀಯ ಜನರಿಗೆ ಇದನ್ನು ವಹಿಸಲು ನಾನಾ ರೀತಿಯ ಕಾರಣಗಳನ್ನು ನೀಡಲಾಗುತ್ತಿದೆ. ಇದಕ್ಕೆ ಸ್ಥಳೀಯ ರಾಜಕೀಯದ ಓಲೈಕೆಯು ಕಾರಣವಾಗಿದೆ ಎನ್ನಬಹುದು. ತಮ್ಮ ಕಾರ್ಯಭಾರದ ಒತ್ತಡವನ್ನು ತಗ್ಗಿಸಿ ಸ್ಥಳೀಯ ನಿರುದ್ಯೋಗಿ ವಿದ್ಯಾವಂತ ಯುವಕರಿಗೆ ಪಡಿತರ ವಿತರಣೆ ವ್ಯವಸ್ಥೆಯನ್ನು ವಹಿಸಿಕೊಟ್ಟರೆ ಮಹದುಪಕಾರವಾಗುತ್ತದೆ. ಇದನ್ನು ಪಿರಿಯಾಪಟ್ಟಣದ ಆಹಾರ ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಬದಲಾವಣೆ ತರಬೇಕಾಗಿದೆ.

ಹೆಬ್ಬೆರಳಿನ ಮುದ್ರೆ, ಮೊಬೈಲ್ ಓಟಿಪಿ ಕಾರ್ಯವು ಅವರಿಗೆ ಆ ತಿಂಗಳಲ್ಲಿ ಯಾವಾಗ ಬಿಡುವಿದೆಯೋ ಆಗ ನಡೆಯುತ್ತದೆ. ಹಾಗೆಯೇ ಪಡಿತರ ವಿವರಿಸುವಾಗ ಒಂದೊಂದು ಪಡಿತರ ಚೀಟಿಗಳಿಗೆ 10 ರೂಪಾಯಿಯಂತೆ ಸಂಗ್ರಹಿಸುವುದನ್ನು ಯಾಕೆ ಎಂದು ಕೇಳಿದರೆ ಅದು ಪಡಿತರ ಕೇಂದ್ರದ ನಿರ್ವಹಣೆಗೆ ಅಂತ ಹಾರಿಕೆಯ ಉತ್ತರ ಕೊಟ್ಟು ಅಲ್ಲಿಂದ ಸಾಗಹಾಕುತ್ತಾರೆ.

ಅರೇನಹಳ್ಳಿ ಗ್ರಾಮದಲ್ಲಿ ಹಿಂದೂ ಮತ್ತು ಮುಸ್ಲಿಮ್ ಧರ್ಮದವರು ಹೆಚ್ಚಾಗಿ ವಾಸಿಸುತ್ತಿರುವುದರಿಂದ ಇಲ್ಲಿಗೆ ನಿಯಮಿತವಾಗಿ ಪಡಿತರ ವಿತರಿಸಲು ತುಂಬಾ ಸಮಯಾವಕಾಶ ಬೇಕಾಗಿರುವುದರಿಂದ ಅರೇನಹಳ್ಳಿ ಗ್ರಾಮದಲ್ಲಿ ಒಂದು ಹೊಸ ಪಡಿತರ ವಿತರಣಾ ಕೇಂದ್ರವನ್ನು ತೆರೆದು ಇಲ್ಲಿನ ವಿತರಣೆಗೆ ಸ್ಥಳೀಯರನ್ನು ನೇಮಿಸಿದರೆ ತುಂಬಾ ಅನುಕೂಲವಾಗುತ್ತದೆ.

ಹೀಗಾಗಿ ಆದಷ್ಟು ಬೇಗ ಸರ್ಕಾರದ ಅಹಾರ ನಾಗರಿಕ ಸರಬರಾಜು ಸಚಿವರು ಮತ್ತು ಇದಕ್ಕೆ ಸಂಬಂಧಿಸಿದ ಪಡಿತರ ವ್ಯವಸ್ಥೆ ಅಧಿಕಾರಿಗಳು ಕೂಡಲೇ ಇತ್ತ ಗಮನಹರಿಸಿ ಈ ಅವ್ಯವಸ್ಥೆಯನ್ನು ಸರಿಪಡಿಸಲು ವಿನಮ್ರವಾಗಿ ಕೋರಲಾಗಿದೆ.

–ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಕೆಎಸ್‌ಆರ್‌ಟಿಸಿ ಹಗಲು ದರೋಡೆ

ಮಾನ್ಯರೆ,

ಮೈಸೂರು–ಕೊಳ್ಳೇಗಾಲ ರಸ್ತೆಯ ಟಿ.ನರಸೀಪುರ ಬಳಿ ಟೋಲ್ ಪ್ರಾರಂಭವಾದಾಗ ಒಂದು ಟ್ರಿಪ್‌ಗೆ 20–25 ರೂ. ಶುಲ್ಕ ನಿಗದಿ ಮಾಡಲಾಗಿತ್ತು. ಆಗ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರವನ್ನು 2ರೂ. ಹೆಚ್ಚಿಸಿತು. ಅಂದರೆ ಒಂದು ಟ್ರಿಪ್‌ಗೆ 50 ಜನ ಪ್ರಯಾಣಿಕರು ಎಂದರೆ ರೂ. 100 ಸಂಗ್ರಹವಾಗುತ್ತಿತ್ತು ಒಂದು ವಾರದ ಹಿಂದೆ ಟೋಲ್ ಶುಲ್ಕವನ್ನು 5 ರೂ. ಹೆಚ್ಚಿಸಿದ್ದು, ಕೆಎಸ್‌ಆರ್‌ಟಿಸಿ ಮತ್ತೆ 2 ರೂ. ದರ ಏರಿಸಿದೆ. ಅಂದರೆ ಒಂದು ಟ್ರಿಪ್‌ಗೆ 50 ಪ್ರಯಾಣಿಕರು ಎಂದರೂ 100 ರೂ. ಸಂಗ್ರಹವಾಗುತ್ತಿದೆ. ಟೋಲ್ ಸಂಗ್ರಹಣೆ ಎಂದರೆ ರಸ್ತೆ ಉತ್ತಮವಾಗಿದ್ದು, ಕೆಎಸ್ ಆರ್‌ಟಿಸಿಗೆ ಇಂಧನ ಮತ್ತು ಬೇರೆ ರೀತಿಯಲ್ಲಿ ಉಳಿಕೆಯೇ ಆಗುತ್ತಿದೆ ಇದು ಕೆಎಸ್‌ಆರ್‌ಟಿಸಿ ಹಗಲು ದರೋಡೆ ಎಂದರೆ ತಪ್ಪಾಗಲಾರದು. ಆದ್ದರಿಂದ ಟೋಲ್ ಶುಲ್ಕವನ್ನು 5 ರೂ. ಹೆಚ್ಚಿರುವ ಕಾರಣದಿಂದ ಈಗ ಹೆಚ್ಚಿಸಿರುವ ಬಸ್ ಪ್ರಯಾಣ ದರವನ್ನು ಕೈಬಿಡಬೇಕೆಂದು ಮನವಿ.

–ರಮೇಶ್, ವಿದ್ಯಾನಗರ, ಟಿ.ನರಸೀಪುರ

ನಕಲಿ ಆಧಾರ್ ಕಾರ್ಡ್ ದೇಶಕ್ಕೆ ಅಪಾಯ

ಮಾನ್ಯರೆ,

ಪ್ರಸ್ತುತ ಪ್ರತಿಯೊಂದು ಸೇವೆಗಳಿಗೂ ಆಧಾರ್ ಬೇಕೇ ಬೇಕು. ಬ್ಯಾಂಕಿಂಗ್‌ನಿಂದ ಹಿಡಿದು ಎಲ್‌ಪಿಜಿ ಸಿಲಿಂಡರ್‌ಗೆ ಅರ್ಜಿ ಸಲ್ಲಿಸುವವರೆಗೆ ಎಲ್ಲದರಲ್ಲೂ ಆಧಾರ್ ಕಾರ್ಡ್ ಕೇಳಿಯೇ ಕೇಳುತ್ತಾರೆ. ಅದರಲ್ಲೂ ಆದಾಯ ತೆರಿಗೆ ದಾಖಲೆಗಳು, ಬ್ಯಾಂಕ್ ಖಾತೆಗಳು, ವಿಮಾ ಪಾಲಿಸಿಗಳು ಮತ್ತು ಮ್ಯೂಚುವಲ್ ಫಂಡ್‌ಗಳು, ಭವಿಷ್ಯ ನಿಧಿಗಳು ಹಾಗೂ ಪಿಂಚಣಿ ಖಾತೆಗಳಂತಹ ಹೂಡಿಕೆ ದಾಖಲೆಗಳಿಗೆ ಆಧಾರ್ ಸಂಖ್ಯೆ ಲಿಂಕ್ ಆಗಿರಲೇಬೇಕು.

ಆಧಾರ್ ಕಾರ್ಡ್ ಹೊಂದಿದ್ದರೆ ದೇಶದಲ್ಲಿನ ಎಲ್ಲಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ನಕಲಿ ಆಧಾರ್ ಕಾರ್ಡ್ ತಯಾರಿಸುವ ಬಹು ದೊಡ್ಡ ಜಾಲ ನಮ್ಮ ದೇಶದಲ್ಲಿದ್ದು, ಇದು ದೇಶದ ಭದ್ರತೆಗೆ ಸವಾಲಾಗಿ ಪರಿಣಮಿಸಿದೆ. ಅಕ್ರಮವಾಗಿ ನುಸುಳುವ ವಲಸಿಗರಿಗೆ ಆಧಾರ್‌ನಂತಹ ಪ್ರಮುಖ ಗುರುತಿನ ದಾಖಲಾತಿ ಕೇವಲ 500 ರೂ.ಗಳಿಗೆ ದೊರೆತರೆ ಅವರು ಈ ದೇಶದ ನಾಗರಿಕರಾಗಿ ಬಿಡುತ್ತಾರೆ ಮತ್ತು ಇಲ್ಲಿನ ಮೂಲ ನಿವಾಸಿಗಳು ತಮಗೆ ದೊರೆಯುವ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಇಂತಹ ಅಕ್ರಮ ಜಾಲದಿಂದ ಭಯೋತ್ಪಾದಕರು ವಲಸಿಗರ ಸೋಗಿನಲ್ಲಿ ದೇಶದೊಳಗೆ ಸುಲಭವಾಗಿ ಸಂಚರಿಸಬಹುದಾಗಿದ್ದು, ದೇಶದಲ್ಲಿ ವಿಧ್ವಂಸಕ ಕೃತ್ಯ ನಡೆಸಲು ಕಾರಣವಾಗುತ್ತದೆ. ಬೆಂಗಳೂರಿನಲ್ಲಿ ಇಂತಹ ಅಕ್ರಮ ಜಾಲವನ್ನು ಬಂಧಿಸಿರುವ ಪೋಲಿಸರ ಕ್ರಮ ಸ್ವಾಗತಾರ್ಹ.

ಕೇವಲ ನಕಲಿ ಆಧಾರ್ ಕಾರ್ಡ್ ಮಾತ್ರವಲ್ಲದೆ, ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ್, ಪಾನ್ ಕಾರ್ಡ್ ಅನ್ನು ಅಕ್ರಮವಾಗಿ ತಯಾರಿಸಲಾಗುತ್ತಿದೆ. ಇಂತಹ ಅಪರಾಧಗಳ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಮತ್ತು ಆಧಾರ್‌ನಂತಹ ಪ್ರಮುಖ ದಾಖಲಾತಿಗಳನ್ನು ನಕಲು ಮಾಡದ ರೀತಿಯಲ್ಲಿ ವಿಶಿಷ್ಟ ತಂತ್ರಾಂಶಗಳನ್ನು ಬಳಸಿ ಇಂತಹ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

–ರಾಸುಮ ಭಟ್, ಚಿಕ್ಕಮಗಳೂರು.


ಕೆಂಪನಂಜಾಂಬ ಅಗ್ರಹಾರದ ರಸ್ತೆಗೆ ಡಾಂಬರೀಕರಣ ಕಲ್ಪಿಸಿ

ಮಾನ್ಯರೆ,

ಪ್ರಧಾನಿ ಮೋದಿಯವರು ಯೋಗ ದಿನಾಚರಣೆಯ ಅಂಗವಾಗಿ ಪಾರಂಪರಿಕ ನಗರ ಮೈಸೂರಿಗೆ ಆಗಮಿಸುತ್ತಿರುವುದು ಹೆಮ್ಮೆಯ ಸಂಗತಿ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಪ್ರಧಾನಿಯವರು ಹಾದುಹೋಗುವ ಎಲ್ಲಾ ರಸ್ತೆಗಳನ್ನು ಅಲ್ಲಿರುವ ಸಕಲ ಹಳ್ಳಕೊಳ್ಳ, ಗುಂಡಿಗಳನ್ನು ಮುಚ್ಚುತ್ತಿದ್ದಾರೆ ಹಾಗೂ ಡಾಂಬರೀಕರಣ ಮಾಡಿ, ರಸ್ತೆಯ ಇಕ್ಕೆಲಗಳಿಗೆ ಬಣ್ಣದ ಕೆಲಸವನ್ನು ಮಾಡುತ್ತಿದ್ದಾರೆ.

ಆದರೆ, ನಗರದ ಮಹಾ ನಗರಪಾಲಿಕೆ ಹಿಂಭಾಗದಲ್ಲೇ ಇರುವ ಕೆಂಪನಂಜಾಂಬ ಅಗ್ರಹಾರದ ನಿವಾಸಿಗಳು ಇಲ್ಲಿಯ ರಸ್ತೆಯ ಗುಂಡಿಗಳೊಂದಿಗೆ ಪ್ರತೀನಿತ್ಯ ಗಂಡಾಗುಂಡಿ ಮಾಡಬೇಕಾದ ಪರಿಸ್ಥಿತಿ ಇದೆ. ಸದರಿ ಬಡಾವಣೆಯ ನಿವಾಸಿಗಳು ನಗರ ಪಾಲಿಕೆಗೆ ಕಾಲ ಕಾಲಕ್ಕೆ ಸಲ್ಲಬೇಕಾದ ತೆರಿಗೆಗಳನ್ನು ಪಾವತಿಸುತ್ತಿದ್ದಾರೆ. ದಯಮಾಡಿ, ನಗರಪಾಲಿಕೆಯವರು ಪ್ರಧಾನಿಯವರ ಆಗಮನದ ಹುಮ್ಮಸ್ಸಿನಲ್ಲಿಯೇ ಸದರಿ ಕೆಂಪನಂಜಾಂಬ ಅಗ್ರಹಾರದ ರಸ್ತೆಯ ಗುಂಡಿಗಳನ್ನು ಮುಚ್ಚಿ ಡಾಂಬರೀಕರಣ ಮಾಡಿಕೊಡಬೇಕೆಂದು ಬಡಾವಣೆಯ ನಿವಾಸಿಗಳ ಕಳಕಳಿಯ ಮನವಿ.


– ಜೆ.ಎಸ್. ವಿಜಯಕುಮಾರ್, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಯೋಗಿರಾಜ ತಿರುಮಲೆ ಕೃಷ್ಣಮಾಚಾರ್ಯ



ಮೈಸೂರು ಇಂದು ಯೋಗ ರಾಜಧಾನಿಯಾಗಿ ವಿಶ್ವದ ಎಲ್ಲ ರಾಷ್ಟ್ರಗಳ ಯೋಗಾಭ್ಯಾಸಿಗಳನ್ನು ಆಕರ್ಷಿಸುತ್ತಿರುವುದಕ್ಕೆ ಮುಖ್ಯ ಕಾರಣ ಪತಂಜಲಿಯ ಯೋಗ ವಿದ್ಯೆಯನ್ನು ಸ್ವಯಂ ತಾವು ತಿಳಿದುಕೊಂಡು, ಶಿಷ್ಯರಿಗೂ ಅದನ್ನು ಕಲಿಸಿ, ಅದರ ಅಪಾರವಾದ ಮಹಿಮೆಯನ್ನು ಲೋಕದಲ್ಲಿ ಪ್ರಚುರಪಡಿಸಿದ ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯರು. ಇಂದು ಮೈಸೂರಿನಲ್ಲಿ ಮಾತ್ರ ಅಲ್ಲ, ನಾನಾ ದೇಶಗಳಲ್ಲಿ ಯೋಗವನ್ನು ಕಲಿಸುತ್ತಿರುವ ಗುರುಗಳೂ, ಕಲಿಯುತ್ತಿರುವ ಶಿಷ್ಯರೂ ಶ್ರೀ ಕೃಷ್ಣಮಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದವರೇ. ವಿಶ್ವ ಯೋಗ ದಿನದ ಸಂದರ್ಭದಲ್ಲಿ ಆ ಮಹಾನುಭಾವರ ಸ್ಮರಣೆ ಸಕಲ ಪಾಪ ನಿವಾರಕ, ಪುಣ್ಯದಾಯಕ. ಅವರ ಬದುಕನ್ನೂ ಸಾಧನೆಯನ್ನೂ ಅಸಾಧಾರಣ ವ್ಯಕ್ತಿತ್ವವನ್ನು ಕನ್ನಡಿಗರಿಗೆ ಪರಿಚಯಿಸಲು ಶ್ರೀ ಎನ್. ಅನಂತ ಅವರು ರಚಿಸಿರುವ ಗ್ರಂಥವೇ **ಯೋಗಿರಾಜ ತಿರುಮಲೆ ಕೃಷ್ಣಮಾಚಾರ್ಯ**.

ವಿಜಯನಗರ ಸಾಮ್ರಾಜ್ಯದ ಕೀರ್ತಿಯನ್ನು ಜಗದ್ವ್ಯಾಪಿಯನ್ನಾಗಿ ಮಾಡಿದ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಕೃಷ್ಣಮಾಚಾರ್ಯರ ಪೂರ್ವಜರು ತಿರುಮಲೆಯಿಂದ ಮೈಸೂರು ಸಂಸ್ಥಾನದ ಕಡೆಗೆ ಬಂದರಂತೆ. ಚಿತ್ರದುರ್ಗ ಜಿಲ್ಲೆಯ ಮುಚುಕುಂದಪುರ (ಮುಚುಕುಂಟೆ) ಎಂಬ ಗ್ರಾಮದಲ್ಲಿ ಅವರು ನೆಲೆಸಿದರು. ಆ ಮನೆತನದಲ್ಲಿ ಸುಮಾರು ನೂರ ಮೂವತ್ತನಾಲ್ಕು ವರ್ಷಗಳ ಹಿಂದೆ, ಎಂದರೆ 18.11.1888 ರಲ್ಲಿ ಮುಚುಕುಂಟೆ ಗ್ರಾಮದಲ್ಲೇ ಶ್ರೀ ಕೃಷ್ಣಮಾಚಾರ್ಯರು ಜನಿಸಿದರು. ತಿರುಮಲೆ ಶ್ರೀನಿವಾಸ ತಾತಾಚಾರ್ಯರು ಮತ್ತು ರಂಗನಾಯಕಿ ಅಮ್ಮ ಎಂಬ ದಂಪತಿಗಳ ಈ ಸುಪುತ್ರರು ತಂದೆಯಿಂದಲೇ ಸಂಸ್ಕೃತವನ್ನೂ, ಯೋಗ ವಿದ್ಯೆಯನ್ನೂ ಕಲಿಯಲು ಆರಂಭಿಸಿದರು. ಆದರೆ ಅವರ ಚಿಕ್ಕಂದಿನಲ್ಲೇ, ಎಂದರೆ ಅವರಿಗೆ ಹತ್ತು ವರ್ಷ ವಯಸ್ಸಾಗಿದ್ದಾಗಲೇ, ಶ್ರೀನಿವಾಸ ತಾತಾಚಾರ್ಯರು ಹಠಾತ್ತಾಗಿ ವೈಕುಂಠವನ್ನು ಸೇರಿಕೊಂಡರು. ಕುಟುಂಬ ನಿರಾಧಾರವಾಯಿತು. ಆಗ ಮೈಸೂರಿನ ಪರಕಾಲ ಮಠದ ಶ್ರೀ ಶ್ರೀನಿವಾಸ ಬ್ರಹ್ಮತಂತ್ರ ಪರಕಾಲಯತೀಶ್ವರರು ಆ ಕುಟುಂಬವನ್ನು ಮೈಸೂರಿಗೆ ಕರೆಸಿಕೊಂಡು ಆಶ್ರಯವನ್ನು ನೀಡಿದರು.

ಕೃಷ್ಣಮಾಚಾರ್ಯರು ಪರಕಾಲ ಮಠದಲ್ಲೂ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲೂ ವಿದ್ಯಾಭ್ಯಾಸವನ್ನು ಮಾಡಿ ಪೂರ್ವ ಮೀಮಾಂಸಾ ಮತ್ತು ವೇದಾಂತ ಶಾಸ್ತ್ರಗಳಲ್ಲಿ ಪಾಂಡಿತ್ಯ ಗಳಿಸಿದರು. ಅವರ ವಾಕ್ ಪ್ರೌಢಿಮೆ ಮತ್ತು ಯೋಗ ನೈಪುಣ್ಯ ಎಲ್ಲರ ಗಮನವನ್ನು ಸೆಳೆದಿತ್ತು. ಅವರಿಗೆ ಹದಿನಾರು ವರ್ಷವಾಗಿದ್ದಾಗ ಶ್ರೀ ನಾಥಮುನಿಗಳು ಸ್ವಪ್ನದಲ್ಲಿ ದರ್ಶನವನ್ನಿತ್ತು ತಾಮ್ರಪರ್ಣೀ ನದಿಯ ದಡದಲ್ಲಿರುವ ಆಳ್ವಾರ್ ತಿರುನಗರಿಗೆ ಹೋಗಲು ಪ್ರೇರಣೆಯನ್ನಿತ್ತರು.

ನಾಥಮುನಿಗಳು

ಪರಮಯೋಗಿಗಳಾಗಿದ್ದ ನಾಥಮುನಿಗಳು ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿದ್ದ ವಿಷ್ಣು ಭಕ್ತಾಗ್ರೇಸರರು. ನಮ್ಮಾಳ್ವಾರ್ ಅವರಿಂದ ನಾಥಮುನಿಗಳು ಯೋಗ ರಹಸ್ಯಗಳನ್ನು ಅರಿತರೆನ್ನಲಾಗಿದೆ. ಶ್ರೀ ವೈಷ್ಣವಮತ ಮತ್ತು ವಿಶಿಷ್ಟಾದ್ವೈತ ವೇದಾಂತವು ದೃಢವಾಗಿ ನಿಲ್ಲಲು ಮೂಲ ಕಾರಣರಾದವರು ನಾಥಮುನಿಗಳೇ. ಶ್ರೀ ವೇದಾಂತ ದೇಶಿಕರು ತತ್ತ್ವಮುಕ್ತಾ ಕಲಾಪದಲ್ಲಿ ತಮ್ಮ ದರ್ಶನಕ್ಕೆ ಆಧಾರಸ್ತಂಭಗಳೆಂದರೆ ನಾಥಮುನಿ, ಯಾಮುನಾಚಾರ್ಯ ಮತ್ತು ಶ್ರೀಮದ್ ರಾಮಾನುಜಾಚಾರ್ಯ ಎಂಬ ಮೂವರೆಂದು ಹೇಳಿದ್ದಾರೆ.

ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ
ಯಾಮುನೇಯಪ್ರಬಂಧೈಃ
ತ್ರಾತಂಸಮ್ಯಗ್ ಯತೀಂದ್ರೈರಿದಮಖಿಲತಮಃ
ಕರ್ಶನಂ ದರ್ಶನಂ ನಃ॥

ಎಂಬ ತತ್ತ್ವಮುಕ್ತಾಕಲಾಪ ಪದ್ಯವನ್ನು ಗಮನಿಸಬಹುದು. ಮೈಸೂರಿನಿಂದ ಆರು ನೂರು ಮೈಲಿ ಕಾಲುನಡಿಗೆ ಮಾಡಿ ಕೃಷ್ಣಮಾಚಾರ್ಯರು ತಿರುನಗರಿಯನ್ನು ತಲುಪಿದರು. ಅಲ್ಲಿ ಸಾಕ್ಷಾತ್ ನಾಥಮುನಿಗಳಿಂದಲೇ ಯೋಗ ರಹಸ್ಯವೆಂಬ ಗ್ರಂಥ ಅವರಿಗೆ ಬೋಧಿತವಾಯಿತೆಂಬುದು ಐತಿಹ್ಯ.

ಆಮೇಲೆ ಮತ್ತೆ ಮೈಸೂರಿಗೆ ಹಿಂದಿರುಗಿ ನಾನಾ ಶಾಸ್ತ್ರಗಳನ್ನು ಅಭ್ಯಸಿಸಿ ವಿದ್ವತ್ತೆಯನ್ನು ಗಳಿಸಿದ ಕೃಷ್ಣಮಾಚಾರ್ಯರು ಯೋಗಶಾಸ್ತ್ರವನ್ನೇ ತಮ್ಮ ಜೀವನದ ಉಸಿರನ್ನಾಗಿ ಮಾಡಿಕೊಂಡರು. 1906ರಲ್ಲಿ ವಾರಾಣಾಸಿಗೆ ಹೋಗಿ ಕ್ವೀನ್ಸ್ ಕಾಲೇಜಿನಲ್ಲಿ ಅವರು ವ್ಯಾಕರಣ ಮತ್ತು ತರ್ಕಶಾಸ್ತ್ರಗಳನ್ನು ಕಲಿತರು. ಗಂಗಾ ನಾಥ ಝಾ ಅವರಂತಹ ಪಂಡಿತ ಪ್ರಕಾಂಡರ ಅನುಗ್ರಹದಿಂದ ಅವರ ವಿದ್ಯಾಭ್ಯಾಸ ಚೆನ್ನಾಗಿ ಸಾಗಿತು. ಗಂಗಾನಾಥರ ಮಗ ಅಮರನಾಥನಿಗೆ ಕೃಷ್ಣಮಾಚಾರ್ಯರು ಯೋಗವನ್ನು ಕಲಿಸಿದರು.

ಗಂಗಾನಾಥ ಝಾ ಅವರ ಸಲಹೆಯನ್ನು ಅನುಸರಿಸಿ ಕೃಷ್ಣಮಾಚಾರ್ಯರು ನೇಪಾಳವನ್ನು ದಾಟಿ ಟಿಬೆಟ್‌ಗೆ ಹೋಗಿ ರಾಮ ಮೋಹನ ಬ್ರಹ್ಮಚಾರಿ ಎಂಬ ಯೋಗಿಯಿಂದ ಸಾವಿರಾರು ಆಸನಗಳನ್ನು ಕಲಿಯಲು ಆಗ ಅಪೇಕ್ಷಿಸಿದರು. ಅದಕ್ಕೆ ವೈಸ್‌ರಾಯ್ ಅನುಮತಿ ಬೇಕಾಗಿರುತ್ತದೆ. ಮಧುಮೇಹದಿಂದ ಬಳಲಿದ್ದ ವೈಸ್‌ರಾಯ್‌ಗೆ ಕೃಷ್ಣಮಾಚಾರ್ಯರು ಕಲಿಸಿದ ಯೋಗಾಸನಗಳು ಚಿಕಿತ್ಸೆಯನ್ನು ನೀಡಿದವು. ಅವರಿಂದ ಅನುಮತಿ ಪತ್ರವನ್ನು ಪಡೆದು ಕೃಷ್ಣಮಾಚಾರ್ಯರು ಟಿಬೆಟ್‌ಗೆ ಪಯಣಿಸಿ ಅಲ್ಲಿ ರಾಮಮೋಹನರಿಂದ ಯೋಗ ವಿದ್ಯೆಯನ್ನು ಪಡೆದುಕೊಳ್ಳುತ್ತಾರೆ. ಸುಮಾರು ಏಳು ನೂರು ವಿಶಿಷ್ಟ ಕಷ್ಟ ಆಸನಗಳನ್ನು ಕಲಿತುಕೊಳ್ಳುತ್ತಾರೆ. ಅದು ಅಲ್ಲಿ ಅವರು ಮಾಡಿದ ಏಳೂವರೆ ವರ್ಷಗಳ ಸತತಾಭ್ಯಾಸದ ಫಲ. ಅನಂತರ ಗುರುಗಳು ಕೃಷ್ಣಮಾಚಾರ್ಯರಿಗೆ 'ಮನೆಗೆ ಹಿಂದಿರುಗಿ ಗೃಹಸ್ಥನಾಗು' ಎಂದು ಆದೇಶವನ್ನಿತ್ತು ಕಳುಹಿಸುತ್ತಾರೆ. ಗುರುಗಳ ಪಾದುಕೆಗಳನ್ನು ಕೃಷ್ಣಮಾಚಾರ್ಯರು ಊರಿಗೆ ತರುತ್ತಾರೆ.

ಕಲ್ಕತ್ತೆಯಲ್ಲೂ ವಿದ್ಯಾಭ್ಯಾಸವನ್ನು ಮುಂದುವರಿಸಿ ಕೃಷ್ಣಮಾಚಾರ್ಯರು ಮೀಮಾಂಸಾತೀರ್ಥ ಪದವಿಯನ್ನೂ, ಅಲಹಾಬಾದ್‌ನಲ್ಲಿ ನ್ಯಾಯಾಚಾರ್ಯ ಪದವಿಯನ್ನೂ ಪಡೆದರು. ಆಗ ಪರಕಾಲ ಮಠದ ವಾಗೀಶ ಬ್ರಹ್ಮತಂತ್ರ ಸ್ವಾಮಿಗಳು ಪರಮಪದವನ್ನು ಸೇರಿದ್ದರು. ಅವರ ಸ್ಥಾನದಲ್ಲಿ ಶ್ರೀ ಕೃಷ್ಣಮಾಚಾರ್ಯರೇ ಪೀಠವನ್ನು ಅಲಂಕರಿಸಬೇಕೆಂಬ ಆಹ್ವಾನವೂ ಬಂದಿತ್ತು. ಆದರೆ ಯೋಗ ಗುರುಗಳು 'ಗೃಹಸ್ಥನಾಗು' ಎಂಬ ಆದೇಶವನ್ನು ಕೊಟ್ಟಿದ್ದರಿಂದ ಕೃಷ್ಣಮಾಚಾರ್ಯರು ಒಪ್ಪಲಿಲ್ಲ.

1924 ರಲ್ಲಿ ಕೃಷ್ಣಮಾಚಾರ್ಯರು ಬರೋಡಾದಲ್ಲಿ ವೇದಕೇಸರಿ ಪದವಿಯನ್ನೂ ಬಂಗಾಳದ ನವದ್ವೀಪ (ನಾದಿಯಾ)ದಲ್ಲಿ ನ್ಯಾಯರತ್ನ ಪದವಿಯನ್ನೂ ಪಡೆದರು. 1925ರಲ್ಲಿ ನಾಮಗಿರಿಯಮ್ಮನವರೊಡನೆ ಅವರ ವಿವಾಹ ಜರುಗಿತು. ಆಕೆಯ ತಮ್ಮನೇ ಜಗತ್‌ಪ್ರಸಿದ್ಧ ಬಿ.ಕೆ.ಎಸ್. ಅಯ್ಯಂಗಾರ್.

ಶ್ರೀ ಕೃಷ್ಣಮಾಚಾರ್ಯರು ಮೈಸೂರಿನ ಟೌನ್ ಹಾಲಿನಲ್ಲಿ ಯೋಗ, ಉಪನಿಷತ್ತುಗಳ ಬಗೆಗೆ ಮಾಡಿದ ಉಪನ್ಯಾಸಗಳು ಜನರ ಮನಸ್ಸನ್ನು ಗೆದ್ದವು. ಅವರ ಕೀರ್ತಿ ಮೈಸೂರಿನ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸನ್ನಿಧಿಗೆ ತಲುಪಿತು. ಅರಮನೆಯ ಆಹ್ವಾನ ಕೃಷ್ಣಮಾಚಾರ್ಯರಿಗೆ ದೊರಕಿತು. ಅವರು ಅರಮನೆಯ ಯೋಗ ಗುರುಗಳಾದರು. ಮುಂದೆ ಜಗನ್ಮೋಹನ ಅರಮನೆಯಲ್ಲಿ ಯೋಗ ಶಾಲೆಯನ್ನು ನಡೆಸಲು ಅವರಿಗೆ ಅವಕಾಶವನ್ನೂ ನೀಡಲಾಯಿತು.

ಹಠಯೋಗ ಸಾಧನೆಯಲ್ಲಿ ಪರಿಣಿತರಾಗಿದ್ದ ಕೃಷ್ಣಮಾಚಾರ್ಯರು ಶ್ವಾಸದ ಸ್ತಂಭನ ಮುಂತಾದ ಚಮತ್ಕಾರಗಳನ್ನೂ ತೋರಿಸಬಲ್ಲವರಾಗಿದ್ದರು. ಇವರಿಂದ ಪ್ರಭಾವಿತರಾಗಿದ್ದ ಶ್ರೀಮನ್ಮಹಾರಾಜರು ಯೋಗ ದಿನಾಚರಣೆಯನ್ನೂ ಮೈಸೂರಿನಲ್ಲಿ ನಡೆಸುತ್ತಿದ್ದರಂತೆ. 1934 ರಲ್ಲಿ ಕೃಷ್ಣಮಾಚಾರ್ಯರು ಬರೆದ ಯೋಗ ಮಕರಂದ ಎಂಬ ಗ್ರಂಥವೂ ಮಹಾರಾಜರ ಆದೇಶಾನುಸಾರವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಯಿತು. ನೂರಾರು ಜನರ ಆರೋಗ್ಯದ ಸಮಸ್ಯೆಗಳು ಅವರ ಯೋಗ ಚಿಕಿತ್ಸೆ ಯಿಂದ ಪರಿಹಾರವನ್ನು ಕಂಡವು. ಯೋಗಾಸನ ಪ್ರದರ್ಶನ ಮತ್ತು ಯೋಗಯಾತ್ರೆ ಕೃಷ್ಣಮಾಚಾರ್ಯರ ಕೀರ್ತಿಯನ್ನು ಎಲ್ಲ ದಿಗಂತಗಳಿಗೆ ಕೊಂಡೊಯ್ದುವು.

ಎನ್. ಅನಂತ ಅವರು ತಮ್ಮ ಗ್ರಂಥದಲ್ಲಿ ಶ್ರೀ ಕೃಷ್ಣಮಾಚಾರ್ಯರ ಬದುಕಿನ ವಿವಿಧ ಮಜಲುಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಅವರ ಹಲವರು ಮುಖ್ಯ ಶಿಷ್ಯರ ಬಗೆಗೂ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ಕೃಷ್ಣಮಾಚಾರ್ಯರ ಸುಪುತ್ರರಾದ ದೇಶಿಕಾಚಾರ್ ಕೃಷ್ಣಮಾಚಾರ್ಯ ಯೋಗ ಮಂದಿರವನ್ನು 1976ರಲ್ಲಿ ಸ್ಥಾಪಿಸಿ ತಂದೆಯವರಿಗೆ ಅರ್ಪಿಸಿದರೆಂಬುದನ್ನೂ ತಿಳಿಸಿದ್ದಾರೆ.


1988ರಲ್ಲಿ ಕೃಷ್ಣಮಾಚಾರ್ಯರು ಶತಾಯುಷಿಗಳಾದಾಗ ಶತಾಬ್ದಿಯ ಉತ್ಸವವನ್ನು ಆಚರಿಸಲಾಯಿತು. ನೂರೊಂದರ ಹರೆಯದಲ್ಲಿ 28.2.1989 ರಂದು ಯೋಗಿರಾಜ ತಿರುಮಲೆ ಕೃಷ್ಣಮಾಚಾರ್ಯರು ಇಹಲೋಕವನ್ನು ತ್ಯಜಿಸಿದರು, ಪರಮಪದವನ್ನು ಸೇರಿದರು.

ಇಂತಹ ಮಹಾವ್ಯಕ್ತಿಯ ಜೀವನವನ್ನು ತಮ್ಮ ಲೇಖನಿಯಿಂದ ಚಿತ್ರಿಸಿರುವ ಎನ್. ಅನಂತ ಅವರಿಗೆ ಯೋಗಾಭಿಮಾನಿಗಳ ಸಹಸ್ರ ನಮನಗಳು ಸಲ್ಲುತ್ತವೆ. ಪುಸ್ತಕದಲ್ಲಿರುವ ಚಿತ್ರಗಳು ಅದರ ಶೋಭೆಯನ್ನು ಹೆಚ್ಚಿಸಿವೆ. ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಪಾತಂಜಲ ಯೋಗ ಸೂತ್ರಗಳು, ಅವುಗಳ ಸರಳ ಕನ್ನಡಾನುವಾದ ಜಿಜ್ಞಾಸುಗಳಿಗೆ ಉಪಯೋಗಾರ್ಹವಾಗಿವೆ. ಒಟ್ಟಿನಲ್ಲಿ ಇದೊಂದು ಅಮೂಲ್ಯ ಕೃತಿ.



–ಗೌರಿ ಸತ್ಯ, *ಹಿರಿಯ ಪತ್ರಕರ್ತ*

ಸಾಮಾನ್ಯನಿಗೂ ನಮ್ಮ ಸಂಸ್ಕೃತಿಯ ಪರಿಚಯ



ಭಾರತೀಯ ಸಂಸ್ಕೃತಿ ಮತ್ತು ಪರಂಪರೆ
ಒಂದು ಕಿರುಪರಿಚಯ
ವರ್ಷ: 2021
ಲೇಖಕರು: ಡಾ.ಕೆ.ಎಸ್.ನಾಗಪತಿ ಹೆಗಡೆ
ಪುಟಗಳು: 264 + Xii ಬೆಲೆ: ರೂ. 400
ಪ್ರಕಾಶಕರು: ಶಾಂತಲಾ ಪ್ರಕಾಶನ, ಜಯಲಕ್ಷ್ಮಿಪುರಂ, ಮೈಸೂರು.

ಪ್ರಾಯಶಃ ಕನ್ನಡದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಒಂದು ಸಮಗ್ರ ನೋಟ ನೀಡುವ ಪುಸ್ತಕಗಳು ಕಡಿಮೆಯೆಂದೇ ಹೇಳಬೇಕು. ಕಾರಣ ಹಲವು ಶತಮಾನಗಳ ಹಿನ್ನೆಲೆಯ ಭಾರತೀಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಒಂದೇ ಪುಸ್ತಕದಲ್ಲಿ ಪರಿಚಯಿಸುವುದು ಕಷ್ಟ ಸಾಧ್ಯವಾದ ಕೆಲಸ. ಭಾರತೀಯ ಸಂಸ್ಕೃತಿಯ ಒಂದು ವಿಷಯವನ್ನು ಆಯ್ದುಕೊಂಡು ಅಭ್ಯಸಿಸಿ ಅದರ ಬಗ್ಗೆ ಸುದೀರ್ಘವಾಗಿ ಬರೆಯಬಹುದಾದರೂ ಅದರ ಎಲ್ಲಾ ಆಯಾಮಗಳನ್ನು ಒಗ್ಗೂಡಿಸಿ ಲೋಪವಿಲ್ಲದಂತೆ ಪರಿಚಯಿಸುವುದು ಒಂದು ಸಾಹಸದ ಪ್ರಯತ್ನವೇ. ಇದಕ್ಕಾಗಿ ಲೇಖಕ ಸಮಗ್ರ ಭಾರತೀಯ ಸಂಸ್ಕೃತಿಯ ಮತ್ತು ಪರಂಪರೆಯ ಅಧ್ಯಯನ ಮಾಡಿರಬೇಕಾಗುತ್ತದೆ. ಅದರ ಬಗ್ಗೆ ಹೆಚ್ಚಿನ ಅರಿವನ್ನು ಹೊಂದಿರಬೇಕಾಗುತ್ತದೆ. ಹಾಗೆ ಪೂರ್ವ ಸಿದ್ಧತೆ ಇಲ್ಲದೆ ಈ ಕಾರ್ಯ ಸಾಧ್ಯವಾಗುವುದಿಲ್ಲ. ಡಾ.ಕೆ.ಎಸ್.ನಾಗಪತಿ ಹೆಗಡೆ ಅವರು ಅಂತಹ ಸಾಹಸದ ಕಾರ್ಯವನ್ನು ಮಾಡಿ, 'ಭಾರತೀಯ ಸಂಸ್ಕೃತಿ ಮತ್ತು ಪರಂಪರೆ' ಕೃತಿಯನ್ನು ಓದುಗರ ಮುಂದಿಟ್ಟಿದ್ದಾರೆ.

ನಮ್ಮ ದೇಶದ ಸಂಸ್ಕೃತಿಯು ದೀರ್ಘ ಪರಂಪರೆಯನ್ನು ಹೊಂದಿದೆ. ಅದು ವೇದಗಳಲ್ಲಿ ಅಂಕುರಿಸಿ, ಪುರಾಣಗಳಲ್ಲಿ ಪಲ್ಲವಿಸಿ, ಕಾವ್ಯಗಳಲ್ಲಿ ಕುಸುಮಿಸಿ, ದರ್ಶನಗಳಲ್ಲಿ ಫಲಿಸಿದೆ. ಇದನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಪ್ರೊ. ನಾಗಪತಿ ಹೆಗಡೆಯವರು ಈ ಗ್ರಂಥವನ್ನು ರಚಿಸಿದ್ದಾರೆ ಎನ್ನುವ ಮಾತನ್ನೂ ಹೇಳಿದ್ದಾರೆ ಡಾ. ನಾಗರಾಜ ರಾವ್.

ಹಾಗೆಯೇ ಮುನ್ನುಡಿಯಲ್ಲಿ ಮೇಲುಕೋಟೆ ಸಂಸ್ಕೃತ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲರಾದ ವಿದ್ವಾನ್ ಉಮಾಕಾಂತ ಭಟ್ಟ ಅವರು ಈ ಹೊತ್ತಿಗೆ ವಿದೇಶದಲ್ಲಿರುವ ಕನ್ನಡಿಗರನ್ನು ಮನಸ್ಸಿನಲ್ಲಿಟ್ಟುಕೊಂಡು ಸಿದ್ಧಪಡಿಸಿದ ಕೃತಿಯಂತೆ ಕಾಣುತ್ತದೆ ಎನ್ನುತ್ತಾ, 'ಈ ಕೃತಿಯ ವಿಷಯ ಸಂಗ್ರಹ, ನಿರೂಪಣಾ ತಂತ್ರವನ್ನು ಗಮನಿಸಿದರೆ ನಮ್ಮ ನಾಡಿನಲ್ಲಿಯೇ ಇರುವ ನಮ್ಮವರಿಗೂ ಇದು ಸರ್ವಾತ್ಮನಾ ಆದರಣೀಯವಾಗಿದೆ. ಸಾಮಾನ್ಯ ಓದುಗನಿಂದ ಮೊದಲುಗೊಂಡು ವಿಶ್ವವಿದ್ಯಾನಿಲಯದಲ್ಲಿ ಪಾಠ ಮಾಡುವ ಪ್ರಾಧ್ಯಾಪಕರಿಗೂ ಈ ಪುಸ್ತಕ ಉಪಾದೇಯ' ಎನ್ನುತ್ತಾರೆ.

'ಭಾರತೀಯ ಸಂಸ್ಕೃತಿ ಮತ್ತು ಪರಂಪರೆ' ಕೃತಿಯಲ್ಲಿ ಒಟ್ಟು 14 ಅಧ್ಯಾಯಗಳಿವೆ. ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯ ಅರ್ಥ ಮತ್ತು ವ್ಯಾಪ್ತಿಯಿಂದ ಪ್ರಾರಂಭಿಸಿ, ವೇದಗಳು, ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಭಗವದ್ಗೀತೆ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ಅಲ್ಲಿನ ಪ್ರಮುಖ ಪಾತ್ರಗಳ ಪರಿಚಯವನ್ನು ಡಾ.ನಾಗಪತಿ ಅವರು ಮಾಡಿಕೊಡುತ್ತಾರೆ. ಹಲವಾರು ಕಡೆ ಮಂತ್ರಗಳು ಮತ್ತು ಶ್ಲೋಕಗಳನ್ನೂ ಪ್ರಸ್ತಾಪಿಸಿ ವಿವರಣೆ ನೀಡಿದ್ದಾರೆ. ಅಲ್ಲಿಂದ ಮುಂದೆ ಹೋಗಿ ಅವರು ಭಾರತೀಯ ನೃತ್ಯಗಳು, ಕಲೆ ಮತ್ತು ವಾಸ್ತುಶಿಲ್ಪ, ಚಿತ್ರಕಲೆ, ಸಂಗೀತ ಪರಂಪರೆ ಹಾಗೂ ಹಬ್ಬ ಹರಿದಿನಗಳ ಆಚರಣೆಗಳ ಸೂಕ್ಷ್ಮ ಚಿತ್ರಣವನ್ನೂ ನೀಡಿ ತಮ್ಮ 264 ಪುಟಗಳ ಗ್ರಂಥವನ್ನು ಮುಕ್ತಾಯಗೊಳಿಸುತ್ತಾರೆ. ಕೊನೆಯಲ್ಲಿ ತಾವು ಪರಿಶೀಲಿಸಿದ 62 ಆಕರ ಗಂಥಗಳ ಪಟ್ಟಿಯನ್ನೂ ನೀಡುತ್ತಾರೆ.

ಅಲ್ಲಲ್ಲಿ ತಮ್ಮ ಅಭಿಪ್ರಾಯ, ಸಂದೇಹಗಳನ್ನು ವ್ಯಕ್ತಪಡಿಸುವ ಕೃತಿಯ ಲೇಖಕರು, ವೇದ ಮತ್ತು ಉಪನಿಷತ್ಕಾಲದಲ್ಲಿ ಪುರುಷರ ಹಾಗೂ ಸ್ತ್ರೀಯರ ಮಧ್ಯೆ ಸಮಾನತೆ ಇತ್ತು ಎಂದು ಗೊತ್ತಾಗುತ್ತದೆ ಎನ್ನುತ್ತಾ, ಕೃತಿಗಳಲ್ಲಿ ಸ್ತ್ರೀಗೆ ಗೌರವ ಸ್ಥಾನ ಕೊಟ್ಟಿದ್ದಾರೆ: ಆದರೆ ಸಮಾನತೆ ಕೊಟ್ಟಿಲ್ಲ. ಮನುಸ್ಮೃತಿಯಲ್ಲಿ **'ನ ಸ್ವಾತಂತ್ರ್ಯ ಮರ್ಹತಿ'** ಎಂದು ಹೇಳಿದ್ದಾರೆ. ಆದರೆ **'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ'** ಎಂದೂ ಹೇಳಿದ್ದಾರೆ. ಇದರ ಅರ್ಥ ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳಿಗೆ ಆನಂದವಾಗುತ್ತದೆ. ಆದರೆ ವೇದಕಾಲದ ನಂತರ ಸ್ತ್ರೀಯರಿಗೆ ಗೌರವ ಸ್ಥಾನ ಕೊಟ್ಟರೂ ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಕೊಟ್ಟಿದ್ದರೇ ಎಂಬ ಪ್ರಶ್ನೆಗೆ ಉತ್ತರ ಸ್ವಲ್ಪ ಕಷ್ಟವೇ ಎನ್ನುತ್ತಾರೆ.

ಇನ್ನೊಂದು ಕಡೆ ಮಹಾತ್ಮ ಗಾಂಧಿಯವರ ಸಾಮಾಜಿಕ ಕಳಕಳಿ, ಕಾನೂನಿನ ರಕ್ಷಣೆ ಹಾಗೂ ಕ್ರಾಂತಿಕಾರಿ ನಡೆಯಿಂದ ಇತ್ತೀಚಿನ ದಿನಗಳಲ್ಲಿ ವರ್ಗ ನಡುವಣ ಶೋಷಣೆ ಕಡಿಮೆಯಾಗುತ್ತಿದೆಯಾದರೂ ಇನ್ನೂ ಸಮಾನತೆ ಬಂದಿರುವುದು ಕಾಣುತ್ತಿಲ್ಲ. ಎಲ್ಲ ವರ್ಗದ ಜನರಿಗೆ ವಿದ್ಯಾಭ್ಯಾಸದ ಅವಕಾಶ ಒದಗಿಸಿ ಅದರಿಂದ ಅವರ ಆರ್ಥಿಕತೆ ಹೆಚ್ಚಾದಾಗ ಸಮಾನತೆ ಮೂಡಿಬರುತ್ತದೆ ಎನ್ನುವ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಮುಂದೆ ಮತ್ತೊಂದೆಡೆ ಅವರು ಕೌಟುಂಬಿಕ ಜೀವನದಲ್ಲಿನ ಶೋಷಣೆ ಹಿಂಸೆಯನ್ನು ಪ್ರಸ್ತಾಪಿಸುತ್ತಾ ವಿದ್ಯಾಭ್ಯಾಸದಿಂದ ಈ ಅಸಮಾನತೆ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇತ್ತು. ಆದರೆ ಆಶ್ಚರ್ಯವೆಂದರೆ ಹೆಚ್ಚು ಓದಿ ಆರ್ಥಿಕವಾಗಿ ಒಳ್ಳೆಯ ಕೆಲಸದಲ್ಲಿದ್ದವರಲ್ಲಿಯೂ ಈ ಅನಿಷ್ಟಗಳು ಕಂಡುಬರುತ್ತಿದ್ದು ಕಾನೂನಿನಿಂದಾಗಲೀ ಅಥವಾ ವಿದ್ಯಾಭ್ಯಾಸದಿಂದಾಗಲೀ ಇದಕ್ಕೆ ಸಂಪೂರ್ಣ ಪರಿಹಾರ ಸಿಗುವುದಿಲ್ಲ. ಈ ಸಮಾನತೆಯನ್ನು ನಮ್ಮ ಮಾನಸಿಕ ಬದಲಾವಣೆಯಿಂದ ಮಾತ್ರ ತರಬಹುದು ಎಂದು ಕಾಣುತ್ತದೆ ಎನ್ನುತ್ತಾರೆ.

ಪತಂಜಲಿ ಯೋಗವನ್ನು ಪ್ರಸ್ತಾಪಿಸುವಾಗ ಅವರು ಆದಿಶೇಷನ ಅವತಾರವೆಂದು ನಂಬಲಾದ ಪತಂಜಲಿಯೇ ಈ ಶಾಸ್ತ್ರದ ಮೂಲ ಕರ್ತೃ ಅಥವಾ ಪ್ರಥಮಾಚಾರ್ಯ ಎಂದು ಹೇಳಬಹುದು. ಪ್ರಾಚೀನವಾದ ಮತ್ತು ಶಿಸ್ತುಬದ್ಧವಾದ ಯೋಗಕ್ರಮವನ್ನು ಅವರೇ ಜಗತ್ತಿಗೆ ಹೇಳಿದವರೆಂದು ತಿಳಿಯಲಾಗಿದೆ ಎನ್ನುತ್ತಾರೆ. ಹಿಂದಿನ ಸಂಪ್ರದಾಯಗಳಲ್ಲಿನ ಯೋಗದ ಜ್ಞಾನವನ್ನು ಪತಂಜಲಿ ಮಹರ್ಷಿ ಸಂಯೋಜಿಸಿ ಕ್ರಮಬದ್ಧಗೊಳಿಸಿದರು ಎಂಬುದನ್ನು ಇಲ್ಲಿ ನಾವು ನೆನಪಿನಲ್ಲಿಡಬೇಕಾಗುತ್ತದೆ.

ವೇದಗಳಲ್ಲಿ ವಿಜ್ಞಾನದ ವಿಚಾರವನ್ನು ಪ್ರಸ್ತಾಪಿಸುವಾಗ ಡಾ.ನಾಗಪತಿ ಅವರು ಅಮೆರಿಕದ ವೀಲರ್ ವಿಲಾಕ್ಸ್ ಎಂಬ ವಿದ್ವಾಂಸರು ಹೇಳಿದ್ದರೆನ್ನಲಾದ ಮಾತುಗಳನ್ನು ಉಲ್ಲೇಖಿಸಿದ್ದಾರೆ: 'ಈ ವೇದಗಳು ಕೇವಲ ಧಾರ್ಮಿಕ ವಿಷಯಗಳನ್ನು ಮಾತ್ರ ಹೇಳದೆ. ವಿಜ್ಞಾನದ ಹಲವು ವಿಭಾಗದ ಮಾಹಿತಿಯನ್ನು ಹೇಳಿವೆ. ರೇಡಿಯಂ, ಇಲೆಕ್ಟ್ರಾನ್ಸ್, ಏರ್ಷಿಪ್, ಎಲೆಕ್ಟ್ರಿಸಿಟಿ ಮುಂತಾದ ಹಲವು ವೈಜ್ಞಾನಿಕ ಮಾಹಿತಿಗಳು ವೇದ ಕಾಲದಲ್ಲಿಯೇ ಭಾರತದ ಋಷಿಮುನಿಗಳಿಗೆ ಗೊತ್ತಿತ್ತು ಎನ್ನುವ ಬಗ್ಗೆ ವೇದಗಳಲ್ಲಿ ಉಲ್ಲೇಖವಿದೆ ಅದೇ ರೀತಿ ಜರ್ಮನ್ ದಾರ್ಶನಿಕ ಪ್ರೊಮ್ಯಾಕ್ಸ್‌ಮುಲ್ಲರ್‌ನ್ನೂ ಡಾ.ನಾಗಪತಿ ಅವರು ಉಲ್ಲೇಖಿಸುತ್ತಾ 'ಆಧುನಿಕ ವಿಜ್ಞಾನದ ಹಲವು ಬಗೆಯ ಆವಿಷ್ಕಾರಗಳು ವೇದ ಕಾಲದಲ್ಲಿಯೇ ಭಾರತದ ಋಷಿಮುನಿಗಳಿಗೆ ಗೊತ್ತಿತ್ತು ಎನ್ನುವುದಕ್ಕೆ ಸಾಕಷ್ಟು ಮಾಹಿತಿ ಲಭ್ಯವಿದೆ. ಸ್ಟೀಮ್ ಎಂಜಿನ್, ಎಲೆಕ್ಟ್ರಿಸಿಟಿ, ಟೆಲಿಗ್ರಫಿ, ವೈರ್ಲೆಸ್ ಮುಂತಾದ ಹಲವು ವೈಜ್ಞಾನಿಕ ಆವಿಷ್ಕಾರಗಳ ಬಗ್ಗೆ ಬಹಳಷ್ಟು ಮಾಹಿತಿ ವೇದ ಕಾಲದಲ್ಲಿಯೇ ಇತ್ತು. ಎನ್ನುವುದಕ್ಕೆ ನಮಗೆ ಸಾಕಷ್ಟು ಪುರಾವೆಗಳು ಸಿಕ್ಕಿವೆ ಎಂದು ಹೇಳುತ್ತಾರೆ. ವೇದಕಾಲದಲ್ಲಿ ಕೆಲವು ವೈಜ್ಞಾನಿಕ ವಿಷಯಗಳು ತಿಳಿದಿದ್ದವು ಎಂಬುದು ನಿಜವಾದರೂ ವಿದ್ಯುಚ್ಛಕ್ತಿ, ಏರ್ಷಿಪ್, ಸ್ಟೀಮ್ ಎಂಜಿನ್, ರೇಡಿಯಂ ಇಂತಹ ವಿಷಯಗಳು ತಿಳಿದಿತ್ತು ಎನ್ನುವುದು ಎಷ್ಟರ ಮಟ್ಟಿಗೆ ಸರಿ ಎಂಬ ಮಾತು ಯೋಚಿಸಬೇಕಾಗಿದೆ.

ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹವನ್ನು ಲೇಖಕರು ಪ್ರಸ್ತಾಪಿಸುತ್ತಾ, ಅದು ವಿಶ್ವದಲ್ಲಿಯೇ ಅತಿ ಎತ್ತರವಾದ ಏಕಶಿಲಾ ಮೂರ್ತಿಯ ವಿಗ್ರಹವಾಗಿದೆ ಎನ್ನುತ್ತಾರೆ. ಆದರೆ ಈಜಿಪ್ಟಿನ ಎರಡನೇ ರಾಮ್‌ಸಿಸ್ ಏಕಶಿಲಾ ಮೂರ್ತಿ 66 ಅಡಿ ಎತ್ತರವಿದ್ದು ಅದನ್ನು ವಿಶ್ವದ ಅತೀ ಎತ್ತರದ ಮೂರ್ತಿಯೆಂದು ಪರಿಗಣಿಸಲಾಗಿದ್ದು, ನಂತರದ ಸ್ಥಾನ ಗೊಮ್ಮಟೇಶ್ವರ ವಿಗ್ರಹಕ್ಕೆ ಕೊಡಲಾಗಿದೆ. ಅದೇ ರೀತಿ ಮೈಸೂರು ಅರಮನೆಯನ್ನು ವಿಶ್ವದ ಎಲ್ಲಾ ಕಡೆಯಿಂದ ಕಲಾವಿದರನ್ನು ಕರೆಸಿ ಅತಿ ಸುಂದರ ಕೆತ್ತನೆಗಳನ್ನು ಮಾಡಲಾಗಿದೆ' ಎಂದು ಬರೆದಿದ್ದಾರೆ. ಆದರೆ ಅರಮನೆಯನ್ನು ಸುಂದರ ಕೆತ್ತನೆಗಳಿಂದ ಅಲಂಕರಿಸಿದವರು ಸ್ಥಳೀಯರೇ ಆಗಿದ್ದು, ಆ ಕಲೆಯ ಪ್ರಾಕಾರಗಳೂ ನಮ್ಮದೇ ಆಗಿವೆ ಎಂಬುದು ಹೆಮ್ಮೆಯ ವಿಚಾರ.

ಡಾ.ನಾಗಪತಿಯವರ ಒಂದೆರಡು ಪ್ರಸ್ತಾಪಗಳು ಗಮನಾರ್ಹ, ಋಗ್ವೇದ ಕಾಲದ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಹೇಳುತ್ತಾ ಅವರು ವಿವಾಹವು ಸಾಮಾಜಿಕ ಮಹತ್ವವನ್ನು ಪಡೆದಿದ್ದು, ಸ್ತ್ರೀ ಪುರುಷರ ಸಂಬಂಧದ ನೈತಿಕ ಕಟ್ಟುಪಾಡುಗಳನ್ನು ಸೈದ್ಧಾಂತಿಕವಾಗಿ ರೂಪಿಸಲಾಗಿತ್ತು ಎಂದು ತಿಳಿಸಿ, 'ಭಾಗಶಃ ವಿಧವಾ ವಿವಾಹದ ಪ್ರತಿಪಾದನೆ ಕಂಡುಬರುತ್ತದೆ. ವಿಧವೆಯು ತನ್ನ ಮೈದುನನನ್ನು ಪುನರ್ವಿವಾಹವಾಗಬಹುದೆಂದು ಹೇಳಿದ್ದಾರೆ.' ಎನ್ನುತ್ತಾರೆ. ಡಾ.ನಾಗಪತಿಯವರ ಈ ಪ್ರಸ್ತಾಪಕ್ಕೆ ಹಲವಾರು ನಿದರ್ಶನಗಳು ಸುಮಾರು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದವರೆಗೂ ನಮಗೆ ದೊರೆಯುತ್ತವೆ. ಬ್ರಿಟಿಷರ ಪ್ರಭಾವ ಹೆಚ್ಚಿದ ಮೇಲೆ ಇದು ತಪ್ಪಿಹೋದದ್ದು ಕಂಡುಬರುತ್ತದೆ. ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಕಲ್ಪನೆಯಲ್ಲಿಯೇ ವಿಧವೆಯರ ಹಿತವನ್ನು ಕಾಯ್ದುಕೊಳ್ಳುವ ಈ ಆಚರಣೆಗೆ ಅವಕಾಶವಿತ್ತು ಎಂಬುದು ಗಮನಾರ್ಹ. ಸಮಾಜದ ಹಿತವನ್ನು ಕಾಯ್ದುಕೊಳ್ಳುವ ಇನ್ನೂ ಒಂದೆರಡು ಇಂತಹ ಆಚರಣೆಗಳು ಆಂಗ್ಲೇಯರ ಪ್ರಭಾವದಿಂದಾಗಿ ತಪ್ಪಿಹೋದದ್ದು ನಮಗೆ ಕಂಡುಬರುತ್ತವೆ.

ಅಂತೆಯೇ ಡಾ.ನಾಗಪತಿ ಹೆಗಡೆ ಅವರು ವಿಧವೆಯರ ಕೇಶಮಂಡನದ ಬಗ್ಗೆ ಋಗ್ವೇದದಲ್ಲಿ ಎಲ್ಲಿಯೂ ಪ್ರಸ್ತಾಪವಿಲ್ಲ ಎನ್ನುತ್ತಾರೆ. ಈ ಮಾತು ಕೂಡ ದಿಟ, ಸುಪ್ರಸಿದ್ಧ ಇತಿಹಾಸಕಾರರಾದ ಪ್ರೊ.ಎಸ್.ಶ್ರೀಕಂಠಶಾಸ್ತ್ರಿಗಳೂ ಈ ಮಾತನ್ನು ಹೇಳುತ್ತಾರೆ. ಯಾವುದೇ ಸ್ಮೃತಿ ವಿಧವೆಯರು ಕೂದಲನ್ನು ತೆಗೆಸಿಕೊಳ್ಳಬೇಕು ಎಂದು ಹೇಳಿಲ್ಲ ಎನ್ನುತ್ತಾರೆ.

ಒಟ್ಟಿನಲ್ಲಿ ಡಾ.ನಾಗಪತಿ ಹೆಗಡೆ ಅವರ 'ಭಾರತೀಯ ಸಂಸ್ಕೃತಿ ಮತ್ತು ಪರಂಪರೆ' ಕನ್ನಡದಲ್ಲಿ ಒಂದು ಒಳ್ಳೆಯ ಪುಸ್ತಕವಾಗಿದ್ದು, ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಒಂದು ಸೂಕ್ಷ್ಮ ನೋಟ ಪಡೆದುಕೊಳ್ಳಲು ಉಪಯುಕ್ತವಾಗಿದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಸೇನಾ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಮುಖ ಬದಲಾವಣೆ

ಅಗ್ನಿಪಥ್ ಯೋಜನೆಗೆ ಅನುಮೋದನೆ

ಸಂಪುಟ ಸಮಿತಿ ಐತಿಹಾಸಿಕ ನಿರ್ಧಾರ



ನವದೆಹಲಿ, ಜೂ.14– ಭಾರತೀಯ ಸೇನಾ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಮುಖ ಬದಲಾವಣೆಗೆ ಕೇಂದ್ರ ಸರ್ಕಾರ ಮುಂದಾಗಿದ್ದು, ಈ ಕುರಿತ ಅಗ್ನಿಪಥ ಯೋಜನೆಗೆ ಕೇಂದ್ರ ಸಂಪುಟ ಸಮಿತಿ ಅನುಮೋದನೆ ನೀಡಿದೆ. ಈ ಕುರಿತಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾಹಿತಿ ನೀಡಿದ್ದು, 'ಸೇನೆಯಲ್ಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಮುಖ ಬದಲಾವಣೆಗಾಗಿ ಆರಂಭಗೊಳ್ಳುತ್ತಿರುವ ಅಗ್ನಿಪಥ ಯೋಜನೆಗೆ ಕೇಂದ್ರ ಸಂಪುಟ ಸಮಿತಿ ಅನುಮೋದನೆ ನೀಡಿದ್ದು, ಇದೊಂದು ಐತಿಹಾಸಿಕ ನಿರ್ಧಾರವಾಗಿದೆ. ಅಗ್ನಿಪಥ್ ನೇಮಕಾತಿ ಯೋಜನೆಯಡಿ ಯಲ್ಲಿ ಸಶಸ್ತ್ರ ಪಡೆಗಳಲ್ಲಿ ಯೋಧರ ಸರಾಸರಿ ವಯಸ್ಸು 26 ವರ್ಷಗಳಾಗಿ ರಲಿವೆ. ನಾಲ್ಕು ವರ್ಷಗಳ ಕಾಲ ಸೇನೆಯಲ್ಲಿ ಯುವಕರನ್ನು ನೇಮಿಸಿಕೊ ಳ್ಳಲಾಗುವುದು ಎಂದು ಹೇಳಿದರು.

ಅಗ್ನಿಪಥ್ ನೇಮಕಾತಿ ಯೋಜನೆಯು ಪರಿವರ್ತಕ ಉಪಕ್ರಮವಾಗಿದ್ದು ಅದು ಸಶಸ್ತ್ರ ಪಡೆಗಳಿಗೆ ಯುವ ಪ್ರೊಫೈಲ್ ಅನ್ನು ಒದಗಿಸುತ್ತದೆ. ಅಂತೆಯೇ ಈ ಯೋಜನೆ ಯೊಂದಿಗೆ ಯೋಧರು ಕೆಲಸವನ್ನು ತೊರೆಯುವಾಗ ಸೇವಾ ನಿಧಿ ಪ್ಯಾಕೇಜ್ ಅನ್ನು ಪಡೆಯಲಿದ್ದು, ನಾಲ್ಕು ವರ್ಷಗಳ ಕಾಲ ಸೇನೆಗೆ ಯುವಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಯಾವುದೇ ವ್ಯಕ್ತಿಯು ಜೀವನದಲ್ಲಿ ಒಮ್ಮೆಯಾದರೂ ಸೇನೆಯ ಸಮವಸ್ತ್ರ ಧರಿಸಬೇಕೆಂಬ ಹಂಬಲ ಹೊಂದಿರುತ್ತಾರೆ. ಹಾಗೆಯೇ ಈ ಸೈನಿಕರು ಹೊಸ ಹೊಸ ಟೆಕ್ನಾಲಜಿ ಬಗ್ಗೆ ಮಾಹಿತಿ ಪಡೆಯಲಿದ್ದಾರೆ. ಹೆಲ್ತ್ ಹಾಗೂ ಫಿಟ್‌ನೆಸ್ ಕಡೆಗೆ ಹೆಚ್ಚು ಒತ್ತು ನೀಡಲಿದ್ದಾರೆ. ಇದರಿಂದ ಉದ್ಯೋಗ ಸೃಷ್ಟಿಯಾಗಲಿದ್ದು, ನಿರುದ್ಯೋಗ ಸಮಸ್ಯೆ ದೂರವಾಗಲಿದೆ. ಭಾರತೀಯ ಅರ್ಥವ್ಯವಸ್ಥೆಯೂ ಸುಧಾರಿಸಲಿದೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಲಿದೆ ಎಂದೂ ರಾಜನಾಥ್ ಸಿಂಗ್ ಹೇಳಿದ್ದಾರೆ.

ಭಾರತೀಯ ಸೇನೆಯಲ್ಲಿ ನೇಮಕಾತಿ ಯನ್ನು ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆಯಲ್ಲಿ ಮಾಡಲಾಗುತ್ತಿದ್ದು, ಈ ಯೋಜನೆಯಲ್ಲಿ, ದೇಶದ ಎಲ್ಲಾ ಮೂರು ಪಡೆಗಳಾದ ನೌಕಾಪಡೆ, ಭೂಸೇನೆ, ವಾಯುಸೇನೆಗಳ ಸೈನಿಕರು ಕೇವಲ ಮೂರು ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಬೇಕಾಗುತ್ತದೆ. ನಿವೃತ್ತಿ ಮತ್ತು ಪಿಂಚಣಿ ರೂಪದಲ್ಲಿ ಸರ್ಕಾರಕ್ಕೆ ಯಾವುದೇ ಹೊರೆ ಇರುವುದಿಲ್ಲ. ಸೇನೆಗೆ ಸೇರಲು ಬಯಸುವ ಎಲ್ಲಾ ಯುವಕರಿಗೂ ಅವಕಾಶ ನೀಡಲಾಗುವುದು. ಈಗ ಸರ್ಕಾರವು ಕೇವಲ 3 ವರ್ಷಕ್ಕೆ ಸೈನಿಕರನ್ನು ಆಯ್ಕೆ ಮಾಡುತ್ತದೆ ಮತ್ತು ಈ ಸಮಯದಲ್ಲಿ ಅವರು ವಿವಿಧ ಕ್ಷೇತ್ರಗಳಲ್ಲಿ ಅನೇಕ ತೊಂದರೆ ಮತ್ತು ಸವಾಲುಗಳನ್ನು ಎದುರಿಸಬೇಕಾ ಗುತ್ತದೆ ಎಂದು ಹೇಳಿದರು. ಈ ಕುರಿತು ಮಾತನಾಡಿದ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್ ಅವರು ಮಾತನಾಡಿ, ಈ ಯೋಜನೆಯು ಸಶಸ್ತ್ರ ಪಡೆಗಳಲ್ಲಿ ನೇಮಕಾತಿಗಾಗಿ ವ್ಯಾಪಕವಾದ ಪ್ರತಿಭಾ ಪ್ರವಾಹವನ್ನೇ ಹರಿಸುತ್ತದೆ. "ಅಗ್ನಿಪಥ್" ಯೋಜನೆಯನ್ನು ಮೊದಲು "ಟೂರ್ ಆಫ್ ಡ್ಯೂಟಿ" ಎಂದು ನಾಮಕರಣ ಮಾಡಲಾಗಿತ್ತು. ಇದನ್ನು ಮೂರು ಸೇವೆಗಳ ಮುಖ್ಯಸ್ಥರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು ಎಂದು ಹೇಳಿದರು.

ಸೇನೆಯಲ್ಲಿ 1.25 ಲಕ್ಷಕ್ಕೂ ಅಧಿಕ ಸ್ಥಾನಗಳು ಖಾಲಿ: ದೇಶದಲ್ಲಿ ಕೋವಿಡ್ 19 ನಂತಹ ಸಾಂಕ್ರಾಮಿಕ ರೋಗ ದಿಂದಾಗಿ, ಮಿಲಿಟರಿ ನೇಮಕಾತಿ ಕಡಿಮೆ ಯಾಗಿದ್ದು, ನಮ್ಮ ದೇಶದಲ್ಲಿ ಸೇನಾ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಾಗಿದೆ. ಅದೇ ಸಮಯದಲ್ಲಿ, ದೇಶದ ಮೂರು ಸೇನೆಗಳಲ್ಲಿ 1.25 ಲಕ್ಷಕ್ಕೂ ಹೆಚ್ಚು ಸೀಟುಗಳು ಖಾಲಿ ಇವೆ. ಅಗ್ನಿಪಥ್ ಯೋಜನೆಯಲ್ಲಿ ಸೇನೆಗೆ ನೇಮಕಗೊಳ್ಳುವ ಯೋಧರನ್ನು ಅಗ್ನಿವೀರ್ ಎಂದು ಕರೆಯಲಾಗುತ್ತದೆ ಎಂದು ಹೇಳಲಾಗಿದೆ. ನೇಮಕಾತಿ ಪ್ರಕ್ರಿಯೆ ಯಲ್ಲಿನ ಕ್ರಾಂತಿಕಾರಿ ಬದಲಾವಣೆಗಳು ಆರಂಭದಲ್ಲಿ ನಾಲ್ಕು ವರ್ಷಗಳ ಅವಧಿಗೆ ಸೈನಿಕರನ್ನು ಸೇರ್ಪಡೆ ಮಾಡಿಕೊಳ್ಳ ಲಾಗುತ್ತದೆ. ಅವರಲ್ಲಿ ಕೆಲವರನ್ನು ಉಳಿಸಿಕೊಳ್ಳಲಾಗುವುದು. ಅಗ್ನಿಪಥ್ ಯೋಜನೆಯಡಿ, ಭಾರತೀಯ ಯುವಕರಿಗೆ 'ಅಗ್ನಿವೀರ್' ಆಗಿ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶವನ್ನು ಒದಗಿಸಲಾಗುವುದು. ಕಳೆದ ಎರಡು ವರ್ಷಗಳಿಂದ ಅದರ ಬಗ್ಗೆ ವ್ಯಾಪಕವಾದ ಚರ್ಚೆಯ ನಂತರ ಹೊಸ ಯೋಜನೆಯನ್ನು ಘೋಷಿಸಲಾಗಿದ್ದು, ಯೋಜನೆಯಡಿ ನೇಮಕಗೊಳ್ಳುವ ಸೈನಿಕರನ್ನು "ಅಗ್ನಿವೀರ್" ಎಂದು ಕರೆಯ ಲಾಗುತ್ತದೆ. ಪ್ರಸ್ತುತ, ಸೈನ್ಯವು 10 ವರ್ಷಗಳ ಆರಂಭಿಕ ಅವಧಿಗೆ ಕಿರು ಸೇವಾ ಆಯೋಗದ ಅಡಿಯಲ್ಲಿ ಯುವಜನರನ್ನು ನೇಮಿಸಿಕೊಳ್ಳುತ್ತದೆ, ಇದನ್ನು 14 ವರ್ಷ ಗಳವರೆಗೆ ವಿಸ್ತರಿಸಬಹುದು. ಈ ಯೋಜನೆಯು ಮೂರು ಸೇವೆಗಳ ವೇತನ ಮತ್ತು ಪಿಂಚಣಿ ಬಿಲ್‌ಗಳನ್ನು ಕಡಿತಗೊಳಿಸುವ ಗುರಿಯನ್ನು ಹೊಂದಿದೆ, ಅದು ವೇಗವಾಗಿ ಹೆಚ್ಚುತ್ತಿದೆ. 2022– 23ರ ರಕ್ಷಣಾ ಬಜೆಟ್‌ನಲ್ಲಿ 5,25,166 ಕೋಟಿ ರೂ. ರಕ್ಷಣಾ ಪಿಂಚಣಿಗಾಗಿ 1,19,696 ಕೋಟಿ ರೂ. ರಾಜಸ್ವ ವೆಚ್ಚಕ್ಕೆ 2,33,000 ಕೋಟಿ ರೂ. ಆದಾಯದ ವೆಚ್ಚವು ವೇತನ ಪಾವತಿ ಮತ್ತು ಸಂಸ್ಥೆಗಳ ನಿರ್ವಹಣೆಯ ಮೇಲಿನ ವೆಚ್ಚಗಳನ್ನು ಒಳಗೊಂಡಿದೆ.

ನೂತನ ಸಿಡಿಎಸ್ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ

ನವದೆಹಲಿ, ಜೂ.14– ನೂತನ ರಕ್ಷಣಾ ಸಿಬ್ಬಂದಿಗಳ ಮುಖ್ಯಸ್ಥ (ಸಿಡಿಎಸ್) ನೇಮಕವನ್ನು ಶೀಘ್ರದಲ್ಲೇ ಮಾಡಲಾಗುವುದು ಮತ್ತು ಅದರ ಪ್ರಕ್ರಿಯೆಯು ನಡೆಯುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ಹೇಳಿದ್ದಾರೆ. ಕಳೆದ ವರ್ಷ ಡಿಸೆಂಬರ್ 8 ರಂದು ಹೆಲಿಕಾಪ್ಟರ್ ಅಪಘಾತದಲ್ಲಿ ಜನರಲ್ ಬಿಪಿನ್ ರಾವತ್ ಅವರು ಸಾವನ್ನಪ್ಪಿದ ನಂತರ ಸಿಡಿಎಸ್ ಹುದ್ದೆ ಖಾಲಿಯಾಗಿ ಉಳಿದಿದೆ. ಈ ಕುರಿತು ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜನಾಥ್ ಸಿಂಗ್ ಅವರು, 'ಸಿಡಿಎಸ್ ನೇಮಕಾತಿಯನ್ನು ಶೀಘ್ರದಲ್ಲೇ ಮಾಡಲಾಗುವುದು. ಅದರ ಪ್ರಕ್ರಿಯೆಯು ನಡೆಯುತ್ತಿದೆ. ಈ ತಿಂಗಳ ಆರಂಭದಲ್ಲಿ, ಸರ್ಕಾರವು ಅಧಿಸೂಚನೆಗಳನ್ನು ಹೊರಡಿಸಿದ್ದು, ಉನ್ನತ ಸ್ಥಾನಕ್ಕಾಗಿ ಆಯ್ಕೆಗಳನ್ನು ಪರಿಗಣಿಸಲಾಗುತ್ತಿದೆ ಎಂದು ಹೇಳಿದರು.

ಹೊಸ ನಿಯಮಗಳ ಪ್ರಕಾರ, 62 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಸೇವೆ ಸಲ್ಲಿಸುತ್ತಿರುವ ಅಥವಾ ನಿವೃತ್ತ ಲೆಫ್ಟಿನೆಂಟ್ ಜನರಲ್, ಏರ್ ಮಾರ್ಷಲ್ ಮತ್ತು ವೈಸ್–ಅಡ್ಮಿರಲ್ CDS ಹುದ್ದೆಗೆ ನೇಮಕಾತಿಗೆ ಅರ್ಹರಾಗಿರುತ್ತಾರೆ. ಸೇನೆ, ವಾಯುಪಡೆ ಮತ್ತು ನೌಕಾಪಡೆ ಕಾಯಿದೆಗಳಿಗೆ ಮಾಡಲಾದ ಬದಲಾವಣೆಗಳ ಪ್ರಕಾರ ಮೂರು–ಸ್ಟಾರ್ ಅಧಿಕಾರಿಗಳು ಈಗ ಮೂರು ಸೇವೆಗಳ ಮುಖ್ಯಸ್ಥರ ಜೊತೆಗೆ CDS ಆಗಲು ಅರ್ಹರಾಗಿದ್ದಾರೆ.

ಜನರಲ್ ರಾವತ್ ಅವರು ಜನವರಿ 1, 2020 ರಂದು ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಕಾರ್ಯಚಟುವಟಿಕೆಗಳಲ್ಲಿ ಒಮ್ಮುಖವನ್ನು ತರಲು ಮತ್ತು ದೇಶದ ಒಟ್ಟಾರೆ ಮಿಲಿಟರಿ ಪರಾಕ್ರಮವನ್ನು ಹೆಚ್ಚಿಸುವ ಆದೇಶದೊಂದಿಗೆ ಭಾರತದ ಮೊದಲ CDS ಆಗಿ ಅಧಿಕಾರ ವಹಿಸಿಕೊಂಡರು. CDSನ ಮತ್ತೊಂದು ಪ್ರಮುಖ ಆದೇಶ ವೆಂದರೆ, ಥಿಯೇಟರ್ ಕಮಾಂಡ್‌ಗಳ ಸ್ಥಾಪನೆ ಸೇರಿದಂತೆ ಕಾರ್ಯಾಚರಣೆಗಳಲ್ಲಿ ಏಕೀಕರಣವನ್ನು ತರುವ ಮೂಲಕ ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ಮಿಲಿಟರಿ ಆಜ್ಞೆಗಳ ಪುನರ್ರಚನೆಯನ್ನು ಸುಲಭಗೊಳಿಸುವುದಾಗಿದೆ.

3ನೇ ಟಿ20: ಭಾರತಕ್ಕೆ ಭರ್ಜರಿ ಗೆಲುವು

ವಿಶಾಖಪಟ್ಟಣ, ಜೂ.14– ಋತುರಾಜ್ ಗಾಯಕ್ವಾಡ್ ಹಾಗೂ ಇಶಾನ್‌ಕಿಶಾನ್ ಅವರ ಅರ್ಧಶತಕ, ಯಜುವೇಂದ್ರ ಚಹಲ್, ಹರ್ಷಲ್‌ಪಟೇಲ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ 48 ರನ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಇದರೊಂದಿಗೆ 5 ಪಂದ್ಯಗಳ ಟಿ20 ಸರಣಿಯಲ್ಲಿ ರಿಷಬ್ ಪಂತ್ ಬಳಗ ಮೊದಲ ಗೆಲುವು ದಾಖಲಿಸಿದೆ.



ಇಲ್ಲಿನ ಡಾ.ವೈ.ಎಸ್.ರಾಜಶೇಖರ್ ರೆಡ್ಡಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಆರಂಭಿಕರಾದ ಋತುರಾಜ್ ಗಾಯಕ್ವಾಡ್ ಹಾಗೂ ಇಶಾನ್‌ಕಿಶಾನ್ ಮೊದಲ ವಿಕೆಟ್‌ಗೆ 97ರನ್‌ಗಳ ಭರ್ಜರಿ ಆರಂಭ ನೀಡಿದರು. ಅಲ್ಲದೇ ಗಾಯಕ್ವಾಡ್ 35 ಎಸೆತದಲ್ಲಿ 7 ಬೌಂಡರಿ, 2 ಸಿಕ್ಸರ್‌ನಿಂದ 57 ಹಾಗೂ ಕಿಶಾನ್ 35 ಎಸೆತದಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್‌ನಿಂದ 54ರನ್ ಗಳಿಸಿ ಅರ್ಧಶತಕದ ಸಂಭ್ರಮಾಚರಿಸಿದರು. ಆದರೆ, ಇವರ ನಂತರ ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ 14, ನಾಯಕ ರಿಷಬ್‌ಪಂತ್ 6, ದಿನೇಶ್ ಕಾರ್ತಿಕ್ 6ರನ್ ಗಳಿಸಿ ವಿಕೆಟ್ ಒಪ್ಪಿಸುವ ಮೂಲಕ ನಿರಾಶೆ ಮೂಡಿಸಿದರು. ಹಾರ್ದಿಕ್‌ಪಾಂಡ್ಯ 31ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಲು ನೆರವಾದರು. ಅಂತಿಮವಾಗಿ ಭಾರತ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 179ರನ್ ಗಳಿಸಿತು. ಬೌಲಿಂಗ್‌ನಲ್ಲಿ ದಕ್ಷಿಣ ಆಫ್ರಿಕಾದ ಪರ ಡ್ವೇನ್ ಪ್ರಿಟೋರಿಯಸ್ 2, ಕಗಿಸೊ ರಬಾಡಾ, ತಬ್ರೇಜ್ ಶಾಮ್ಸಿ, ಕೇಶವ್ ಮಹಾರಾಜ್ ತಲಾ ಒಂದೊಂದು ವಿಕೆಟ್ ಪಡೆದರು.

180ರನ್‌ಗಳ ಗುರಿ ಬೆನ್ನತ್ತಿದ್ದ ದಕ್ಷಿಣ ಆಫ್ರಿಕಾ ಉತ್ತಮ ಆರಂಭ ಪಡೆದುಕೊಳ್ಳಲು ವಿಫಲವಾಯಿತು. 71ರನ್ ಆಗುವಷ್ಟರಲ್ಲಿಯೇ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಹೆನ್ರಿಚ್ ಕ್ಲಾಸೆನ್ 22, ಡ್ವೇನ್ ಪ್ರಿಟೋರಿಯಸ್ 20, ಕೇಶವ್ ಮಹಾರಾಜ್ 11, ರೀಜಾ ಹೆನ್ರಿಕ್ಸ್ 23ರನ್ ಗಳಿಸಿದರು. ಇವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಬ್ಯಾಟ್ಸ್‌ಮನ್ ಎರಡಂಕಿ ಮೊತ್ತ ದಾಟಲು ವಿಫಲರಾದರು. ಅಂತಿಮವಾಗಿ ದಕ್ಷಿಣ ಆಫ್ರಿಕಾ 19.1 ಓವರ್‌ಗಳಲ್ಲಿ 131ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಸೋಲನ್ನೊಪ್ಪಿ ಕೊಂಡಿತು. ಬೌಲಿಂಗ್‌ನಲ್ಲಿ ಭಾರತದ ಪರವಾಗಿ ಹರ್ಷಲ್‌ಪಟೇಲ್ 4, ಯಜುವೇಂದ್ರ ಚಹಲ್ 3, ಅಕ್ಷರ ಪಟೇಲ್, ಭುವನೇಶ್ವರ್‌ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣ

ಎರಡನೇ ದಿನವೂ ರಾಹುಲ್ ಗಾಂಧಿ ಸುದೀರ್ಘ ವಿಚಾರಣೆ



ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಎರಡನೇ ದಿನವಾದ ಮಂಗಳವಾರವೂ ಇಡಿ (ಜಾರಿ ನಿರ್ದೇಶನಾ ಲಯ) ಸುದೀರ್ಘ ವಿಚಾರಣೆ ನಡೆಸಿದೆ.

ಸೋಮವಾರ ತಮ್ಮ ಅಪಾರ ಬೆಂಬಲಿಗರೊಂ ದಿಗೆ ಪಾದಯಾತ್ರೆ ಮೂಲಕ ವಿಚಾರಣೆಗೆ ಹಾಜ ರಾಗಿದ್ದ ರಾಹುಲ್ ಗಾಂಧಿ ಅವರು ಮಂಗಳವಾರ ಬೆಳಗ್ಗೆ ಕಾರಿನಲ್ಲಿ ವಿಚಾರಣೆಗೆ ಇಡಿ ಕಚೇರಿಗೆ ಆಗಮಿಸಿದರು. ಅವರನ್ನು ಸುಮಾರು 9 ಗಂಟೆಗಳ ಸುದೀರ್ಘ ವಿಚಾರಣೆ ನಡೆಸಿ, ಹಗರಣದ ಸಂಬಂಧ ನೂರಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲಾಯಿತು. ರಾಹುಲ್ ಗಾಂಧಿಯವರು ಎರಡು ದಿನಗಳ ವಿಚಾರಣೆ ವೇಳೆ ಇಡಿ ಅಧಿಕಾರಿಗಳ ಪ್ರಶ್ನೆಗಳಿಗೆ ಸಮರ್ಪಕ ಮತ್ತು ಸರಿಯಾದ ಉತ್ತರ ನೀಡದ ಹಿನ್ನೆಲೆಯಲ್ಲಿ ನಾಳೆ (ಬುಧವಾರ)ಯೂ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾತ್ರಿ ಸುಮಾರು 9 ಗಂಟೆಗೆ ವಿಚಾರಣೆ ಮುಗಿಸಿ ಹೊರಬಂದ ರಾಹುಲ್ ಗಾಂಧಿ ಕಾರಿನಲ್ಲಿ ತಮ್ಮ ನಿವಾಸಕ್ಕೆ ಹಿಂತಿರುಗಿದರು. ಸೋಮವಾರ ಮತ್ತು ಮಂಗಳವಾರ ಸೇರಿದಂತೆ ಎರಡು ದಿನಗಳ ಕಾಲ ಸುಮಾರು 20 ಗಂಟೆಗಳ ಕಾಲ ವಿಚಾರಣೆ ನಡೆಸಿದ್ದು, ನೂರಾರು ಪ್ರಶ್ನೆಗಳನ್ನು ಇಡಿ ಅಧಿಕಾರಿಗಳು ಕೇಳಿ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ. ಈ ಮಧ್ಯೆ ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಹಾಜರಾಗುವಂತೆ ಇಡಿ ನೋಟಿಸ್ ಜಾರಿ ಮಾಡಿರುವು ದನ್ನು ವಿರೋಧಿಸಿ, ದೆಹಲಿ ಸೇರಿದಂತೆ ಹಲವಾರು ಕಡೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಪ್ರತಿಭಟನೆ ಮೂಲಕ ಹೈಡ್ರಾಮಾ ಸೃಷ್ಟಿಸಿದ್ದಾರೆ. ಈ ವೇಳೆ ಕೆಲವರನ್ನು ಪೊಲೀಸರು ತಮ್ಮ ವಶಕ್ಕೆ ಪಡೆದು ಸಂಜೆ ನಂತರ ಬಿಡುಗಡೆಗೊಳಿಸಿದರು.

'ಟೆಕ್ನಾಲಜಿ ಎನೆಬೆಲ್ಡ್ ಎಜುಕೇಷನ್' ಕೃತಿ ಬಿಡುಗಡೆ



ಮೈಸೂರು, ಜೂ. 14(ಎಸ್‌ಪಿಎನ್)–ಲೇಖಕ ಡಾ.ಪ್ರೇಮಕುಮಾರ್ ಮತ್ತು ಡಾ.ಟಿ.ಪ್ರದೀಪ್ ಕುಮಾರ್ ಸಂಪಾದಕತ್ವದ 'ಟೆಕ್ನಾಲಜಿ ಎನೆಬೆಲ್ಡ್ ಎಜುಕೇಷನ್' ಕೃತಿಯನ್ನು ಕನಕಗುರುಪೀಠ ಮೈಸೂರು ಶಾಖೆಯ ಶ್ರೀ ಶಿವಾನಂದ ಪುರಿ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮೈಸೂರು ಕುವೆಂಪುನಗರದ ಶ್ರೀ ಕಾಗಿನೆಲೆ ಬಿಇಡಿ ಕಾಲೇಜು ಆವರಣದಲ್ಲಿ ಶ್ರೀ ಕೃಷ್ಣ ಪಬ್ಲಿಕೇಶನ್ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದ ಶ್ರೀಗಳು, ಗುಣಮಟ್ಟದ ಶಿಕ್ಷಣಕ್ಕಾಗಿ ಶಿಕ್ಷಕರಿಗೆ ಹೆಚ್ಚಿನ ಅಧ್ಯಯನ, ತರಬೇತಿ ಶಿಬಿರಗಳ ಆಯೋಜನೆ ಅತ್ಯಗತ್ಯ ಎಂದರು.

ಕಳೆದ ವರ್ಷ ನಡೆದ ವಿಚಾರ ಸಂಕಿರಣದಲ್ಲಿ ವಿವಿಧ ವಿಷಯ ತಜ್ಞರು ಮಂಡಿಸಿದ 80ಕ್ಕೂ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿರುವುದು ಉತ್ತಮ ಸಂಗತಿ. ಇದರಿಂದ ಸಂಸ್ಥೆಗೂ ಹಾಗೂ ಶಿಕ್ಷಕರಿಗೂ ಗೌರವ ತರುವ ವಿಚಾರ ಎಂದರು.

ಈ ವೇಳೆ ಶ್ರೀ ಕಾಗಿನೆಲೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪುಟ್ಟಬಸವೇಗೌಡ, ಪ್ರಾಂಶುಪಾಲ ಡಾ.ಕೆ.ಕೆ. ವಿಶಾಲಾಕ್ಷಿ, ಎಸ್.ಪ್ರೇಮಕುಮಾರ್, ಡಾ.ಶರತ್‌ಕುಮಾರ್ ಉಪಸ್ಥಿತರಿದ್ದರು.

ಸಾಲ ಕೊಟ್ಟು ಕಿರುಕುಳ ನೀಡುವ ಆ್ಯಪ್‌ಗಳ ವಿರುದ್ಧ ಕ್ರಮ: ಆರ್‌ಬಿಐ

ನವದೆಹಲಿ, ಜೂ.14–ಆರ್‌ಬಿಐ ನಿಯಮಗಳನ್ನು ಉಲ್ಲಂಘಿಸಿ ಹಣಕಾಸು ವ್ಯವಹಾರ ನಡೆಸುತ್ತಿರುವ ಆ್ಯಪ್‌ಗಳ ವಿರುದ್ಧ ಕ್ರಮ ಜರುಗಿಸಲು ಆರ್‌ಬಿಐ ನಿರ್ಧರಿಸಿದೆ.

ಕೆಲವು ಆ್ಯಪ್‌ಗಳು ಸಾಮಾಜಿಕ ಜಾಲತಾಣಗಳ ಮೂಲಕ ಹಣಕಾಸು ವ್ಯವಹಾರ ನಡೆಸುತ್ತಿದ್ದು, ಆರ್‌ಬಿಐನೊಂದಿಗೆ ನೋಂದಾಯಿಸಿಕೊಳ್ಳದೇ ಜನಸಾಮಾನ್ಯರಿಗೆ ಸಾಲ ಕೊಟ್ಟು ಕಿರುಕುಳ ನೀಡುತ್ತಿರುವ ಬಗ್ಗೆ ತಮಗೆ ದೂರುಗಳು ಬಂದಿದ್ದು, ಅಂತಹ ಆ್ಯಪ್‌ಗಳ ಮೇಲೆ ಶೀಘ್ರ ಕ್ರಮ ಜರುಗಿಸಲಾಗುವುದು ಎಂದು ಆರ್‌ಬಿಐ ಗವರ್ನರ್ ತಿಳಿಸಿದ್ದಾರೆ. ಸಾಲ ನೀಡುವ ಈ ಆ್ಯಪ್‌ಗಳು ಸಾಲ ಪಡೆದವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಇದನ್ನು ಆರ್‌ಬಿಐ ಗಂಭೀರವಾಗಿ ಪರಿಗಣಿಸಿದೆ ಎಂದು ತಿಳಿಸಿದ ಅವರು, ಇಂತಹ ಆ್ಯಪ್‌ಗಳ ಬಗ್ಗೆ ಜಾಗರೂಕರಾಗಿರುವಂತೆ ಮನವಿ ಮಾಡಿದರು.

ಮುಂದಿನ ಒಂದೂವರೆ ವರ್ಷದಲ್ಲಿ 10 ಲಕ್ಷ ನೇಮಕಾತಿ

ಪ್ರಧಾನಮಂತ್ರಿ ನರೇಂದ್ರ ಮೋದಿ ಸೂಚನೆ

ನವದೆಹಲಿ, ಜೂ.14– ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿನ ಮಾನವ ಸಂಪನ್ಮೂಲ ಪರಿಸ್ಥಿತಿಯನ್ನು ಪರಿಶೀಲಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಮುಂದಿನ ಒಂದೂವರೆ ವರ್ಷದಲ್ಲಿ ವಿವಿಧ ಇಲಾಖೆಗಳಲ್ಲಿ ಮಿಷನ್ ಮೋಡ್‌ನಲ್ಲಿ 10 ಲಕ್ಷ ನೇಮಕಾತಿಗಳನ್ನು ಮಾಡಲು ನಿರ್ದೇಶನ ನೀಡಿದ್ದಾರೆಂದು ಪ್ರಧಾನಮಂತ್ರಿಗಳ ಕಾರ್ಯಾಲಯವು ಮಾಹಿತಿ ನೀಡಿದೆ. ಈ ಕುರಿತು ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಮಂತ್ರಿಗಳ ಕಾರ್ಯಾಲಯವು ಜನರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಮೋದಿ ಸರ್ಕಾರ ದೊಡ್ಡ ಹೆಜ್ಜೆ ಇಡಲು ಮುಂದಾಗಿದ್ದು, ಈ ನಿಟ್ಟಿನಲ್ಲಿ ಮುಂದಿನ ಒಂದೂವರೆ ವರ್ಷದಲ್ಲಿ ಮೋದಿ ಸರ್ಕಾರ 10 ಲಕ್ಷ ಉದ್ಯೋಗಗಳನ್ನು ಒದಗಿಸಲಿದೆ ಎಂದು ತಿಳಿಸಿದೆ. ನಿರುದ್ಯೋಗ ಸಮಸ್ಯೆಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಪದೇ ಪದೆ ಟೀಕೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದು ಹೇಳಲಾಗುತ್ತಿದೆ.

ವರುಣ್ ಗಾಂಧಿ ಟಾಂಗ್: ಪ್ರಧಾನಿ ನರೇಂದ್ರ ಮೋದಿಯವರ ಕಚೇರಿಯು ಮುಂದಿನ ಒಂದೂವರೆ ವರ್ಷದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 10 ಲಕ್ಷ ಉದ್ಯೋಗ ಭರ್ತಿಮಾಡಲು 'ಮಿಷನ್ ಮೋಡ್' ಘೋಷಿಸಿದ ಕೂಡಲೇ, ಬಿಜೆಪಿ ಸಂಸದ ವರುಣ್ ಗಾಂಧಿ ಅವರು ಪ್ರಧಾನಿ ಮೋದಿಗೆ ಧನ್ಯವಾದ ಹೇಳುವುದರ ಜೊತೆಗೆ ಚುರುಕು ಮುಟ್ಟಿಸಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ತಮ್ಮದೇ ಪಕ್ಷ ಮತ್ತು ಸರ್ಕಾರದ ವಿರುದ್ಧ ಬಹಿರಂಗವಾಗಿ ಟೀಕಿಸುತ್ತಿರುವ ವರುಣ್ ಗಾಂಧಿ ಅವರು, 10 ಲಕ್ಷ ಉದ್ಯೋಗ ಭರ್ತಿ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನಮಂತ್ರಿ ಕಚೇರಿ ಪೋಸ್ಟ್‌ಗೆ ಪ್ರತಿಕ್ರಿಯಿಸುವ ಮೂಲಕ ಮತ್ತೊಮ್ಮೆ ಪಕ್ಷಕ್ಕೆ ನಯವಾದ ಮಾತುಗಳಲ್ಲೇ ಚಾಟಿ ಬೀಸಿದ್ದಾರೆ. ನಿರುದ್ಯೋಗಿ ಯುವಕರ ನೋವು ಮತ್ತು ಭಾವನೆಗಳನ್ನು ಅರ್ಥಮಾಡಿಕೊಂಡಿದ್ದಕ್ಕಾಗಿ ಪ್ರಧಾನಿಯವರಿಗೆ ಧನ್ಯವಾದಗಳು. ಹೊಸ ಉದ್ಯೋಗಗಳನ್ನು ಸೃಷ್ಟಿಸುವುದರೊಂದಿಗೆ 1 ಕೋಟಿಗೂ ಹೆಚ್ಚು ಮಂಜೂರಾದ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ಪ್ರತಿ ವರ್ಷ 2 ಕೋಟಿ ಉದ್ಯೋಗವಕಾಶಗಳನ್ನು ನೀಡುವ ಭರವಸೆಯನ್ನು ಪೂರ್ಣಗೊಳಿಸಲು ನಾವು ಅರ್ಥಪೂರ್ಣ ಪ್ರಯತ್ನಗಳನ್ನು ತ್ವರಿತ ಗತಿಯಲ್ಲಿ ಮಾಡಬೇಕಾಗಿದೆ ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಯೋಗ ದಿನಾಚರಣೆಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ ಮೈಸೂರಿನ ಸ್ಟಾರ್ ಹೋಟೆಲ್‌ಗಳಲ್ಲಿ 410 ರೂಂ ಬುಕ್ಕಿಂಗ್

ಮೈಸೂರು,ಜೂ 14(ಜಿಎ)– ಈ ಬಾರಿಯ ವಿಶ್ವ ಯೋಗ ದಿನಾಚರಣೆಗೆ ಮೈಸೂರಿಗೆ ಪ್ರಧಾನಿ ಮೋದಿ ಆಗಮಿ ಸುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಡಳಿತ ನಗರದ ಸ್ಟಾರ್ ಹೋಟೆಲ್‌ಗಳಲ್ಲಿ 410 ರೂಂಗಳನ್ನು ಈಗಾಗಲೇ ಬುಕ್ಕಿಂಗ್ ಮಾಡಿದ್ದು, ಅಂದು ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಸಮಸ್ಯೆ ಆಗುವ ಸಾಧ್ಯತೆ ಇದೆ.

6 ಮೈಸೂರು ನಗರದ ಪ್ರಮುಖ ಹೋಟೆಲ್‌ಗಳಲ್ಲಿ ಶೇ.20 ರಷ್ಟು ರೂಂ ಬುಕ್ಕಿಂಗ್ ಆಗಿದ್ದು, ಜೂ.20, 21 ರಂದು ಸಂಪೂರ್ಣ ಭರ್ತಿಯಾಗುವ ಸಾಧ್ಯತೆ ಇದೆ.

–ಕೆ.ಸಿ.ನಾರಾಯಣ ಗೌಡ ಅಧ್ಯಕ್ಷ, ಜಿಲ್ಲಾ ಹೋಟೇಲ್ ಮಾಲೀಕರ ಸಂಘ




ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅಂದು ಮೈಸೂರಿಗೆ ಬರುವ ವಿಐಪಿ, ವಿವಿಐಪಿ, ರಾಜ್ಯ ಮತ್ತು ಕೇಂದ್ರದ ವಿವಿಧ ಇಲಾಖೆಯ ಅಧಿಕಾರಿಗಳಿಗಾಗಿ ಮೈಸೂರು ನಗರದ ಸ್ಟಾರ್ ಹೋಟೆಲ್‌ಗಳಲ್ಲಿ ರೂಂಗಳನ್ನು ಜೂ.20 ಮತ್ತು 21ಕ್ಕೆ ಈಗಾಗಲೇ ಕಾಯ್ದಿರಿಸಿದ್ದಾರೆ.

ಜೂ.20,21 ಹೋಟೆಲ್ ರೂಂ ಫುಲ್: ಮೋದಿ ಅವರು ಜೂ.20ರಂದು ಮೈಸೂರಿಗೆ ಆಗಮಿಸಲಿದ್ದು, ಅವರ ಭದ್ರತೆಗೆ ಆಗಮಿ ಸುವ ಸಿಬ್ಬಂದಿ, ಕೇಂದ್ರ ಮತ್ತು ರಾಜ್ಯದ ಆಯುಷ್, ಗುಪ್ತಚರ ಇಲಾಖೆ ಅಧಿಕಾರಿ ಗಳು, ಆರೋಗ್ಯ ಇಲಾಖೆ, ರಾಜ್ಯದ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಸಚಿವ ಸಂಪುಟದ ಎಲ್ಲಾ ಮಂತ್ರಿಗಳು, ಕರ್ನಾಟಕದ ರಾಜ್ಯಪಾಲರು ಹಾಗೂ ವಿವಿಧ ಕ್ಷೇತ್ರದ ಗಣ್ಯರು ಕಾರ್ಯ ಕ್ರಮದಲ್ಲಿ ಭಾಗವಹಿಸುತ್ತಿದ್ದು, ಅವರೆಲ್ಲರನ್ನೂ ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳು ಮೈಸೂರಿನ ಪ್ರಮುಖ ಹೋಟೇಲ್ ಮಾಲೀಕರ ಜೊತೆ ಸಭೆ ನಡೆಸಿದ್ದು, ಜೂ.20 ,21 ರಂದು ಹೋಟೆಲ್‌ನ ರೂಂಗಳನ್ನು ಕಾಯ್ದಿರಿಸುವಂತೆ ತಿಳಿಸಿದ್ದಾರೆ ಎಂದು ಕೆಲ ಹೋಟೆಲ್ ಮೂಲಗಳು ತಿಳಿಸಿವೆ.

ಪ್ರವಾಸಿಗರಿಗೆ ರೂಂ ಸಿಗೋದು ಡೌಟ್ : ಹೋಟೆಲ್‌ನ ರೂಂಗಳನ್ನು ಕಾಯ್ದಿರಿಸಿದ್ದು, ಅಂದು ಮೈಸೂರಿಗೆ ಬರುವ ಪ್ರವಾಸಿಗರಿಗೆ ಇದು ಸಮಸ್ಯೆ ಆಗುವ ಸಾಧ್ಯತೆಗಳಿವೆ. ನಗರದ ಪ್ರಮುಖ ಹೋಟೆಲ್‌ಗಳಲ್ಲಿ ರೂಂ ಬುಕ್ಕಿಂಗ್ ಆಗಿರುವುದರಿಂದ ಹೊರ ಜಿಲ್ಲೆ, ರಾಜ್ಯ ಮತ್ತು ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಅಂದು ಹೋಟೆಲ್‌ಗಳಲ್ಲಿ ರೂಂ ಸಿಗುವುದೇ ಡೌಟ್ ಎಂಬ ಮಾತುಗಳು ಕೇಳಿ ಬರುತ್ತಿವೆ.

ಸೇನಾಪಡೆಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಳ: ರಾಷ್ಟ್ರಪತಿ ರಾಮನಾಥ್ ಕೋವಿಂದ್ ಶ್ಲಾಘನೆ



ಬೆಂಗಳೂರು, ಜೂ.14– ಸಶಸ್ತ್ರ ಪಡೆಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು ಉತ್ತಮ ಬೆಳವಣಿಗೆ ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹೇಳಿದ್ದಾರೆ. ಎರಡು ದಿನಗಳ ರಾಜ್ಯ ಪ್ರವಾಸದಲ್ಲಿರುವ ರಾಷ್ಟ್ರಪತಿ ಸೋಮವಾರ, ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಹೊಸ ಎತ್ತರಕ್ಕೆ ತಲುಪುತ್ತಿರುವುದು ಹಾಗೂ ಹೊಸ ದಾಖಲೆಗಳನ್ನು ಮಾಡುತ್ತಿರುವುದಕ್ಕೆ ಶ್ಲಾಘಿಸಿದರು.

ಸುಪ್ರೀಂ ಕಮಾಂಡರ್ ಆಗಿ, ಯುದ್ಧದಲ್ಲಿ ಪಾತ್ರಗಳು ಸೇರಿದಂತೆ ಸಶಸ್ತ್ರ ಪಡೆಗಳಲ್ಲಿ ಹೆಚ್ಚುತ್ತಿರುವ ಮಹಿಳೆಯರ ಸಂಖ್ಯೆಯನ್ನು ನೋಡಲು ನನಗೆ ಸಂತೋಷವಾಗಿದೆ. ಇತ್ತೀಚೆಗೆ ಕ್ಯಾಪ್ಟನ್ ಅಭಿಲಾಷಾ ಬರಾಕ್ ಅವರು ಸೇನಾ ವಿಮಾನಯಾನ ದಳಕ್ಕೆ ಯುದ್ಧ ಏವಿಯೇಟರ್ ಆಗಿ ಸೇರಿದ ಮೊದಲ ಮಹಿಳಾ ಅಧಿಕಾರಿ ಯಾಗಿರುವುದು ಸಂತಸವನ್ನುಂಟು ಮಾಡಿದೆ ಎಂದರು.

ಸೇನಾ ಸಿಬ್ಬಂದಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ರಾಷ್ಟ್ರೀಯ ಮಿಲಿಟರಿ ಶಾಲೆಗಳನ್ನು ಕಲ್ಪಿಸಲಾಗಿದೆ. ಈ ಶೈಕ್ಷಣಿಕ ವರ್ಷದಿಂದ ದೇಶಾದ್ಯಂತ ಈ ಶಾಲೆಗಳಿಗೆ ಬಾಲಕಿಯರ ಕೆಡೆಟ್‌ಗಳು ಪ್ರವೇಶ ಪಡೆಯಲಿದ್ದಾರೆ ಎಂದು ತಿಳಿದು ಸಂತೋಷವಾಗಿದೆ ಎಂದು ಹೇಳಿದರು. ಈ ವರ್ಷದಿಂದ, ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಬಾಗಿಲುಗಳನ್ನು ಹೆಣ್ಣು ಮಕ್ಕಳಿಗೂ ತೆರೆಯಲಾಗಿದೆ. ಈ ಪ್ರತಿಷ್ಠಿತ ಶಾಲೆಗೆ ಸೇರುವ ಹೆಣ್ಣು ಮಕ್ಕಳು ರಾಷ್ಟ್ರವನ್ನು ರಕ್ಷಿಸುವಲ್ಲಿ ಕೊಡುಗೆ ನೀಡುತ್ತಾರೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಪಾತ್ರವನ್ನು ನಿರ್ವ ಹಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಅವರು ಹೇಳಿದರು.

ಇದಲ್ಲದೆ, ಕರ್ನಾಟಕವು ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನದ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಿದೆ ಮತ್ತು ಇತ್ತೀಚಿನ ಇಂಡಿಯಾ ನಾವಿನ್ಯತಾ ಸೂಚ್ಯಂಕ'ದಲ್ಲಿ ರಾಜ್ಯವು ಎಲ್ಲಾ ರಾಜ್ಯಗಳಲ್ಲಿ ಅಗ್ರ ಸ್ಥಾನವನ್ನು ಪಡೆದುಕೊಂಡಿದೆ ಎಂದು ಬೆಂಗಳೂರು ಕಲಿಕೆ, ತಂತ್ರಜ್ಞಾನ ಮತ್ತು ಉದ್ಯಮದ ಜಾಗತಿಕವಾಗಿ ಹೋಲಿಸಬಹು ದಾದ ಕೇಂದ್ರವಾಗಿ ಹೊರಹೊಮ್ಮಿದೆ ಎಂದು ಅವರು ಹೇಳಿದರು.

ನಾನು ಪ್ರತಿನಿಧಿಸುತ್ತಿರುವುದು ಭಾರತವನ್ನು!

ನವದೆಹಲಿ, ಜೂ.14– ಕ್ರೀಡಾಪಟುವಾಗಿ ನಾನು ಭಾರತವನ್ನು ಪ್ರತಿನಿಧಿಸುತ್ತೇನೆ, ನನಗೆ ಹಿಂದೂ–ಮುಸ್ಲಿಂ ಮುಖ್ಯವಲ್ಲ. ನಾನು ಸಮುದಾಯವನ್ನು ಪ್ರತಿನಿಧಿಸುತ್ತಿಲ್ಲ ಬದಲಿಗೆ ನನ್ನ ದೇಶವನ್ನು ಪ್ರತಿನಿಧಿಸುತ್ತಿದ್ದೇನೆ ಎಂದು ವಿಶ್ವ ಚಾಂಪಿಯನ್ ಬಾಕ್ಸರ್ ನಿಖತ್ ಜರೀನ್ ಸ್ಪಷ್ಟವಾಗಿ ಹೇಳಿದ್ದಾರೆ.



ಆಕೆಯ ಸಾಧನೆಗಳಿಗಿಂತ ಆಕೆಯ ಧಾರ್ಮಿಕ ಹಿನ್ನೆಲೆಯ ಬಗ್ಗೆ ಮಾತನಾಡುತ್ತಿರುವ ಬಗ್ಗೆ ಮಾಧ್ಯಮದವರು ಕೇಳಿದಾಗ ಈಕೆಯ ದಿಟ್ಟ ಉತ್ತರವಿದು. ನನ್ನ ದೇಶಕ್ಕಾಗಿ ಪದಕ ಗೆಲ್ಲಲು ನನಗೆ ಸಂತೋಷವಾಗಿದೆ ಎಂದು ತೆಲಂಗಾಣ ಮೂಲದ 25 ವರ್ಷದ ಕ್ರೀಡಾಪಟು ಸಂವಾದ ವೇಳೆ ಹೇಳಿದ್ದಾರೆ. ಕ್ರೀಡಾಕೂಟಗಳಲ್ಲಿ ಮಾನಸಿಕ ಒತ್ತಡವನ್ನು ನಿಭಾಯಿಸಲು ಬೆಂಬಲದ ಅಗತ್ಯವನ್ನು ಒತ್ತಿ ಹೇಳಿದರು.

ಜರೀನ್ ಕಳೆದ ತಿಂಗಳು ಟರ್ಕಿಯಲ್ಲಿ ನಡೆದ ಚಾಂಪಿಯನ್‌ಶಿಪ್‌ನ ಫ್ಲೈವೇಟ್ ವಿಭಾಗದಲ್ಲಿ ಥಾಯ್ಲೆಂಡ್‌ನ ಜಿಟ್‌ಪಾಂಗ್ ಜುತಾಮಾಸ್ ಅವರನ್ನು 5–0 ಅಂತರದಿಂದ ಸೋಲಿಸಿ ವಿಶ್ವ ಚಾಂಪಿಯನ್ ಕಿರೀಟವನ್ನು ಅಲಂಕರಿಸಿದ ಐದನೇ ಭಾರತೀಯ ಮಹಿಳೆಯಾಗಿದ್ದಾರೆ. ಸಾಂಪ್ರದಾಯಿಕ ಸಮಾಜವಾದ ಮುಸ್ಲಿಂ ಸಮುದಾಯದಿಂದ ಬಂದಿರುವ ಜರೀನ್ ಬಾಕ್ಸಿಂಗ್‌ನಲ್ಲಿ ವೃತ್ತಿಜೀವನಕ್ಕೆ ಸಾಮಾಜಿಕ ಪಿಡುಗನ್ನು ಮೊದಲು ತೊಲಗಿಸಬೇಕು ಎಂದಿದ್ದಾರೆ.

ಭಾರತೀಯ ಕ್ರೀಡಾಪಟುಗಳಲ್ಲಿ ಮಾನಸಿಕ ಒತ್ತಡ ಬಹಳವಾಗಿದ್ದು, ಅದನ್ನು ನಿಭಾಯಿಸು ವುದನ್ನು ಕ್ರೀಡಾಪಟುಗಳು ಕಲಿಯಬೇಕಿದೆ, ಈ ನಿಟ್ಟಿನಲ್ಲಿ ಆದ್ಯತೆ ತರಬೇತಿ ಮುಖ್ಯ ಎಂದಿದ್ದಾರೆ. ಭಾರತೀಯ ಅಥ್ಲೀಟ್‌ಗಳು ನಿಯಮಿತ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡುವ ಪ್ರವೃತ್ತಿಯನ್ನು ಹೊಂದಿದ್ದಾರೆ ಆದರೆ ಒಲಿಂಪಿಕ್ಸ್ ಅಥವಾ ವಿಶ್ವ ಚಾಂಪಿ ಯನ್‌ಶಿಪ್‌ನಂತಹ ದೊಡ್ಡ ಹಂತದಲ್ಲಿ ಎಡವುತ್ತಾರೆ. ನಮ್ಮ ಭಾರತೀಯ ಬಾಕ್ಸರ್‌ಗಳು ತುಂಬಾ ಪ್ರತಿಭಾವಂತರು, ನಾವು ಯಾರಿಗೂ ಕಡಿಮೆ ಇಲ್ಲ. ನಮ್ಮಲ್ಲಿ ಶಕ್ತಿ, ವೇಗ ಎಲ್ಲವೂ ಇದೆ ಎಂದರು. ಎತ್ತರಕ್ಕೆ ತಲುಪಿದಾಗ ಭಾರತೀಯ ಬಾಕ್ಸರ್‌ಗಳಿಗೆ ಮಾನಸಿಕ ಒತ್ತಡವನ್ನು ನಿಭಾಯಿಸಲು ತರಬೇತಿ ನೀಡಬೇಕು ಎಂದರು. ಕಳೆದ ತಿಂಗಳು ಫ್ಲೈವೇಟ್ ಸ್ಪರ್ಧೆಯಲ್ಲಿ ವಿಶ್ವ ಚಾಂಪಿಯನ್ ಕಿರೀಟವನ್ನು ಮುಡಿಗೇರಿಸಿಕೊಂಡ ಜರೀನ್, ಜು.28ರಿಂದ ಪ್ರಾರಂಭವಾಗುವ ಬರ್ಮಿಂಗ್ಹ್ಯಾಮ್ ಕಾಮನ್ವೆಲ್ತ್ ಗೇಮ್ಸ್‌ಗೆ ಸಹ ಸ್ಥಾನ ಪಡೆದಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಸೋನಿಯಾ, ರಾಹುಲ್ ಗಾಂಧಿ ವೈಯಕ್ತಿಕ ಆಸ್ತಿಯಲ್ಲ

ನವದೆಹಲಿ, ಜೂ.14– ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ವೈಯಕ್ತಿಕ ಆಸ್ತಿಯಲ್ಲ ಎಂದು ರಾಜ್ಯಸಭಾ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.



ರಾಹುಲ್ ಗಾಂಧಿ ಅವರನ್ನು ಇ.ಡಿ ವಿಚಾರಣೆಗೆ ಒಳಪಡಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ ವೇಳೆ ಮಾತನಾಡಿದ ಖರ್ಗೆ, ಸ್ವಾತಂತ್ರ್ಯ ನಂತರ ನೆಹರೂ ಅವರು ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹುಟ್ಟುಹಾಕಿದರು. ಇಂಗ್ಲಿಷ್, ಹಿಂದಿ, ಉರ್ದು ಮೂರು ಭಾಷೆಗಳಲ್ಲಿ ಪತ್ರಿಕೆ ನಡೆಯಿತು. 2008ರ ಬಳಿಕ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರಿಂದ ಪತ್ರಿಕೆ ಮುಚ್ಚಲಾಯಿತು. ನಂತರ ನೌಕರರ ಬಾಕಿ ಹಣ ತೀರಿಸಲು 90 ಕೋಟಿ ರೂ. ಸಾಲ ಮಾಡಲಾಗಿತ್ತು. ಜಾತ್ಯತೀತ ತತ್ವದ ಪ್ರಚಾರಕ್ಕಾಗಿ ಈ ಪತ್ರಿಕೆ ರೂಪಿಸಲಾಗಿತ್ತು. ಅದೇ ಕಾರಣಕ್ಕೆ ನ್ಯಾಷನಲ್ ಹೆರಾಲ್ಡ್ ಅನ್ನು ಯಂಗ್ ಇಂಡಿಯಾ ಸಂಸ್ಥೆಗೆ ನೀಡಲಾಗಿದೆ ಎಂದು ಇತಿಹಾಸದ ಬಗ್ಗೆ ಮಾಹಿತಿ ನೀಡಿದ್ದಾರೆ.

9 ವರ್ಷದ ಬಳಿಕ ಇ.ಡಿ ಈ ಬಗ್ಗೆ ದೂರು ದಾಖಲಿಸಿಕೊಂಡಿದೆ. ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರ ಧೈರ್ಯ ಕಡಿಮೆ ಮಾಡಲು ಈ ದಾಳಿ ನಡೆಸಲಾಗಿದೆ. ರಾಹುಲ್ ಗಾಂಧಿ, ಹಣದುಬ್ಬರ, ನಿರುದ್ಯೋಗ ಮತ್ತಿತರ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ರಾಹುಲ್ ಗಾಂಧಿ ಅವರ ಬಾಯಿ ಮುಚ್ಚಿಸಲು ಇ.ಡಿ ದಾಳಿ ಮಾಡಲಾಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಯಂಗ್ ಇಂಡಿಯನ್ ಸಂಸ್ಥೆ ಬೈಲಾ ಪ್ರಕಾರ ಯಾರೂ ಹಣ ತೆಗೆಯಲು ಸಾಧ್ಯವಿಲ್ಲ. ಸದಸ್ಯರು ಟಿಎ–ಡಿಎ ಅನ್ನು ಕೂಡ ಡ್ರಾ ಮಾಡಲು ಸಾಧ್ಯವಿಲ್ಲ. ಆದರೂ ಕೇಂದ್ರ ಸರ್ಕಾರ ದುರು ದ್ದೇಶದಿಂದ ದೂರು ದಾಖಲಿಸಿಕೊಂಡಿದೆ. ಕೇಂದ್ರ ಸರ್ಕಾರದ ದುರುದ್ದೇಶದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇವೆ. ಶಾಂತಯುತವಾಗಿ ಪ್ರತಿಭಟನೆ ಮಾಡಲು ಮುಂದಾಗಿದ್ದೆವು. ಆದರೆ ಎಐಸಿಸಿ ಕಚೇರಿಗೆ ಬರುವ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿದ್ದಾರೆ. ನನ್ನ ಕಚೇರಿಗೆ ಬರುವುದಕ್ಕೂ ತಡೆಯೊಡ್ಡುತ್ತಿ ದ್ದಾರೆ. ನಮ್ಮ ನಾಯಕರನ್ನು ಭೇಟಿ ಮಾಡು ವುದನ್ನೂ ತಡೆಯುತ್ತಿದ್ದಾರೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಕಾಂಗ್ರೆಸ್ ಪಕ್ಷದ ಮೇಲೆ ದಬ್ಬಾಳಿಕೆ ಮಾಡಲಾಗುತ್ತಿದೆ. ಈ ದಬ್ಬಾಳಿಕೆಗೆ ಕಾಂಗ್ರೆಸ್ಸಿಗರು ಜಗ್ಗಲ್ಲ. ಬಿಜೆಪಿಯವರಿಗೆ ಸತ್ಯಾಗ್ರಹ ಗೊತ್ತಿಲ್ಲ, ಚಳವಳಿ ಗೊತ್ತಿಲ್ಲ. ಬಿಜೆಪಿಯವರಿಗೆ ಪ್ರಚೋದನಕಾರಿ ಭಾಷಣ ಮಾಡುವುದು ಗೊತ್ತು. ರಾಷ್ಟ್ರದ ಹಿತಕ್ಕಾಗಿ ಕಾಂಗ್ರೆಸ್ ಪತ್ರಿಕೆಗಳನ್ನು ಹುಟ್ಟು ಹಾಕಿದೆ. ರಾಷ್ಟ್ರದ ಹಿತಕ್ಕಾಗಿ ಬಿಜೆಪಿ ಯಾವ ಪತ್ರಿಕೆಯನ್ನೂ ತೆರೆದಿಲ್ಲ ಎಂದು ಕುಟುಕಿದ್ದಾರೆ.

ಇದು ಇಟಲಿ ಅಲ್ಲ, ದೇಶದ ಕಾನೂನಿಗೆ ಬೆಲೆ ಕೊಡಬೇಕು: ಆರ್.ಅಶೋಕ್

ಬೆಂಗಳೂರು, ಜೂ.14– ದೇಶದ ಕಾನೂನಿಗೆ ಎಲ್ಲರೂ ಗೌರವ ಕೊಡಬೇಕು. ಇದು ಇಟಲಿ ಅಲ್ಲ ಅಂತ ಕಾಂಗ್ರೆಸ್ ನಾಯಕರ ವಿರುದ್ಧ ಕಂದಾಯ ಸಚಿವ ಆರ್. ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ರಾಹುಲ್ ಗಾಂಧಿಗೆ ಇಡಿ ವಿಚಾರಣೆ ಮಾಡುತ್ತಿರುವುದಕ್ಕೆ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ವಿರುದ್ಧ ಅಶೋಕ್ ಕಿಡಿಕಾರಿದರು. ಈ ಬಗ್ಗೆ ವಿಧಾನಸೌಧದಲ್ಲಿ ಮಾತನಾಡಿದ ಅವರು, ನ್ಯಾಷನಲ್ ಹೆರಾಲ್ಡ್ ಹಗರದ ಬಗ್ಗೆ ನಡೆಯುತ್ತಿರುವ ಇಡಿ ತನಿಖೆಗೆ ಇವತ್ತು ಕಾಂಗ್ರೆಸ್ ಮತ್ತೆ ಧರಣಿ ನಾಟಕವಾಡುತ್ತಿದೆ. ಇಡಿ ಒಂದು ಸ್ವಾಯತ್ತತೆ ಸಂಸ್ಥೆ. ಅದರ ಕೆಲಸ ಅದು ಮಾಡುತ್ತಿದೆ. ಇದರ ವಿರುದ್ಧ ಪ್ರತಿಭಟನೆ ಮಾಡುವುದು ಸರಿಯಲ್ಲ ಎಂದರು.

ಸ್ವಾತಂತ್ರ್ಯ ಬರುವುದಕ್ಕೂ ಮುನ್ನ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಾವಿರಾರು ಜನ ಹಣ ಹಾಕಿ ಸ್ಥಾಪನೆ ಮಾಡಿದ್ದರು. ಅದನ್ನು ಕಬಳಿಸುವುದಕ್ಕೆ, ಕುಟುಂಬದ ಆಸ್ತಿ ಮಾಡಿಕೊಳ್ಳುವುದಕ್ಕೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹೋಗಿದ್ದಾರೆ. ಹೀಗಾಗಿ ತನಿಖೆ ಆಗುತ್ತಿದೆ. ಇದು ಕಾಂಗ್ರೆಸ್ ಮೇಲೆ ಆಗುತ್ತಿರುವ ದಾಳಿ ಅಲ್ಲ. ಈ ಆಸ್ತಿ ಅವರ ಕುಟುಂಬಕ್ಕೆ ಹೋಗುತ್ತಿರುವುದರಿಂದ ವಿಚಾರಣೆ ಆಗಿದೆ. ಆದರೆ ಕುಟುಂಬದ ಆಸ್ತಿ ರಕ್ಷಣೆ ಮಾಡುವುದಕ್ಕೆ ಕಾಂಗ್ರೆಸ್ ಹೆಸರು ಬಳಸಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ಇದೊಂದು ಅಪರಾಧ ಅದಕ್ಕೆ ಇಡಿ ತನಿಖೆ ಮಾಡುತ್ತಿದೆ. ತಪ್ಪು ಮಾಡಿಲ್ಲ ಅಂದರೆ ಹೊರಗೆ ಬರುತ್ತಾರೆ. ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸುತ್ತಾರೆ. ದೇಶದ ಕಾನೂನಿಗೆ ಎಲ್ಲರೂ ಬೆಲೆ ಕೊಡಬೇಕು. ಇದು ಇಟಲಿ ಅಲ್ಲ ಅಂತ ರಾಹುಲ್, ಸೋನಿಯಾ ವಿರುದ್ಧ ಹರಿಹಾಯ್ದರು. ದೇಶದ ಕಾನೂನು ಎಲ್ಲರಿಗೂ ಒಂದೇ. ಈ ವಿಚಾರದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ತುರ್ತು ಪರಿಸ್ಥಿತಿಗಿಂತ ಇದು ದೊಡ್ಡದು ಅಂತ ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ಈಗಲಾದರೂ ಗೊತ್ತಾಯಿತಾ ತುರ್ತು ಪರಿಸ್ಥಿತಿ ಅಂದರೆ ಏನು ಅಂತ ಎಂದು ಡಿ.ಕೆ.ಶಿವಕುಮಾರ್‌ಗೆ ತಿರುಗೇಟು ನೀಡಿದರು.

ಏಕಾಏಕಿ ಕೊಪ್ಪ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಆರಂಭ ಖಂಡಿಸಿ

ವಿವಿಧ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ



ಮದ್ದೂರು, ಜೂ.14– ರೈತರ ಗಮನಕ್ಕೆ ತರದೇ ಹಾಗೂ ಯಾವುದೇ ಮಾಹಿತಿ ನೀಡದೆ ಏಕಾಏಕಿ ತಾಲೂಕಿನ ಕೊಪ್ಪ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಪ್ರಾರಂಭ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಕಾರ್ಖಾನೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರೈತರಿಗೆ ಯಾವುದೇ ಸೂಚನೆ ನೀಡದೆ ಕಾರ್ಖಾನೆ ಆರಂಭಿಸಿರುವ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು ಹಾಗೂ ರೈತರ ಸಭೆ ಕರೆದು ಕಬ್ಬು ಅರೆಯಲು ಪ್ರಾರಂಭಿಸುವಂತೆ ಒತ್ತಾಯಿಸುವ ಜೊತೆಗೆ ಅಧಿಕಾರಿಗಳ ಉದ್ಧಟತನವನ್ನು ತೀವ್ರವಾಗಿ ಖಂಡಿಸಿದರು.

ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷ ವಿ.ಸಿ.ಉಮಾಶಂಕರ್ ಮಾತನಾಡಿ, ಕಾರ್ಖಾನೆ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು ಕಾರ್ಖಾನೆ ಆರಂಭಿಸುವ ಮುನ್ನ ರೈತರ ಸಭೆ ಕರೆದು ಆರಂಭಿಸುವುದನ್ನು ಬಿಟ್ಟು ಏಕಾಏಕಿ ಪ್ರಾರಂಭ ಮಾಡಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಇದೇ ವೇಳೆ ಸ್ಥಳಕ್ಕಾಗಮಿಸಿದ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಅಧಿಕಾರಿಗಳು ಕಾರ್ಖಾನೆ ಪ್ರಾರಂಭಿಸುವ ಮೊದಲು ಪ್ರತಿ ಹಳ್ಳಿಗಳಿಗೆ ಕರಪತ್ರ ಹಂಚಿ ರೈತ ಮುಖಂಡರು ಹಾಗೂ ಕಬ್ಬು ಬೆಳೆಗಾರರ ಸಭೆ ಕರೆದು ನಂತರ ಕಾರ್ಖಾನೆ ಪ್ರಾರಂಭ ಮಾಡಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ನಂತರ ಇದೇ ಸಂದರ್ಭ ಕಾರ್ಖಾನೆ ಹಿರಿಯ ಉಪಾಧ್ಯಕ್ಷ ದತ್ತಾ ಹಾಗೂ ಎಜಿಎಂ ಚೆಲುವರಾಜು, ವ್ಯವಸ್ಥಾಪಕ ಸೋಮಶೇಖರ್, ಅಧಿಕಾರಿ ಸುಧೀಂದ್ರಕಟ್ಟಿ ಸಮ್ಮುಖದಲ್ಲಿ ರೈತರ ಸಭೆ ನಡೆಯಿತು. ಸಭೆಯಲ್ಲಿ ಕಬ್ಬಿಗೆ ಸೂಕ್ತ ಬೆಂಬಲ ಬೆಲೆ ನಿಗದಿ, ಕಟಾವು ವೆಚ್ಚ, ವಾಹನ ಬಾಡಿಗೆ ಸೇರಿದಂತೆ ಸರಬರಾಜು ಮಾಡುವ ರೈತರಿಗೆ ಸಕ್ಕರೆ ಪ್ರಮಾಣ ಹೆಚ್ಚುವರಿ ಕೊಡುವಂತೆ ರೈತರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪ್ರಭುಲಿಂಗ, ಸೊ.ಸಿ.ಪ್ರಕಾಶ್, ರೇಷ್ಮೆ ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ, ಪಣ್ಣೆದೊಡ್ಡಿ ವೆಂಕಟೇಶ್, ರಮೇಶ್, ಕೆ.ಜಿ.ಉಮೇಶ್, ಅಣ್ಣೆದೊಡ್ಡಿ ಮಹೇಂದ್ರ, ಎಂ.ಡಿ.ಶಿವಣ್ಣ, ಜಗ್ಗಿಶೀನಪ್ಪ, ಸೊಳ್ಳೇಪುರ ಪುಟ್ಟಸ್ವಾಮಿ, ವೆಂಕಟೇಶ್, ವೆಂಕಟಾಚಲಪ್ಪ, ಶಿವರಾಮು ಇದ್ದರು.

ರಕ್ತದಾನದಿಂದ ಮಾತ್ರ ಮತ್ತೊಂದು ಜೀವ ಉಳಿಸಲು ಸಾಧ್ಯ

ಜಿಲ್ಲಾ ಏಡ್ಸ್ ಪ್ರತಿಬಂಧಕ ಅಧಿಕಾರಿ ಡಾ.ಆಶಾಲತಾ



ಶ್ರೀರಂಗಪಟ್ಟಣ, ಜೂ.14(ವಿನಯ್ ಕಾರೇಕುರ)– ರಕ್ತದಾನದಿಂದ ಮಾತ್ರ ಮತ್ತೊಂದು ಜೀವ ಉಳಿಸಲು ಸಾಧ್ಯ ಎಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಅಧಿಕಾರಿ ಡಾ.ಆಶಾಲತಾ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಓಂ ಶ್ರೀನಿಕೇತನ ಟ್ರಸ್ಟ್, ಪರಿವರ್ತನಾ ಕಾಲೇಜು, ಉದ್ಯೋಗದಾತ ಸಂಸ್ಥೆ, ಶೇಷಾದ್ರಿಪುರಂ ಪದವಿ ಕಾಲೇಜು, ಅಚೀ ವರ್ಸ್ ಅಕಾಡೆಮಿ, ಭಾವಸಾರ ವಿಜನ್ ಇಂಡಿಯಾ, ರಕ್ತನಿಧಿ ಕೇಂದ್ರ ಮಂಡ್ಯ ಸೇರಿದಂತೆ ಇತರೆ ಸಂಘ ಸಂಸ್ಥೆಗಳ ಸಹ ಯೋಗದಲ್ಲಿ 'ವಿಶ್ವ ರಕ್ತದಾನಿಗಳ ದಿನಾಚರಣೆ' ಅಂಗವಾಗಿ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಅಪಘಾತಕ್ಕೊಳಗಾದ ಗಾಯಾಳುಗಳಿಗೆ, ಹೆರಿಗೆಗೆ ದಾಖಲಾಗುವ ಗರ್ಭಿಣಿಯರಿಗೆ, ರಕ್ತಹೀನತೆ ಹಾಗೂ ಇತರೆ ರೋಗಗಳಿಂದ ಬಳಲುತ್ತಿರುವವರಿಗೆ ತುರ್ತು ರಕ್ತದ ಅಗತ್ಯವಿರುತ್ತದೆ. ಹೀಗಾಗಿ 18 ರಿಂದ 65 ವರ್ಷದೊಳಗಿನ 45 ಕೆಜಿಗಿಂತ ಹೆಚ್ಚು ತೂಕವಿರುವ ಎಲ್ಲಾ ಆರೋಗ್ಯವಂತರು ರಕ್ತದಾನ ಮಾಡಬೇಕು ಎಂದು ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಎನ್.ಕೆ. ವೆಂಕಟೇಶ್ ಮಾತನಾಡಿ 'ರಕ್ತದಾನ ಮಾಡುವುದು ಒಗ್ಗಟ್ಟಿನ ಪ್ರಕ್ರಿಯೆ ಈ ಪ್ರಯತ್ನಕ್ಕೆ ಕೈ ಜೋಡಿಸಿ ಜೀವ ಉಳಿಸೋಣ' ಎಂಬ ಘೋಷಣೆಯಡಿ ಈ ವರ್ಷದ ವಿಶ್ವ ರಕ್ತದಾನಿಗಳ ದಿನಾಚರಣೆ ಆಚರಿಸುತ್ತಿದ್ದೇವೆ ಎಂದರು.

ಶಿಬಿರದಲ್ಲಿ 158 ಯುನಿಟ್ ರಕ್ತ ಸಂಗ್ರಹಿಸಿ, ಮಂಡ್ಯ ಜಿಲ್ಲಾ ರಕ್ತನಿಧಿ ಕೇಂದ್ರಕ್ಕೆ ರವಾನಿಸಲಾಯಿತು. ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟೇಗೌಡ, ಪರಿವರ್ತನ ಕಾಲೇಜಿನ ಪ್ರಾಂಶುಪಾಲ ಚೇತನ್ ರಾಮ್, ಆರಕ್ಷಕ ನಿರೀಕ್ಷಕ ಪುನೀತ್, ವಾರ್ತಾ ಇಲಾಖೆಯ ಡಾ.ಟಿ.ಸಿ.ಪೂರ್ಣಿಮಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ. ವೇಣುಗೋಪಾಲ್, ಅಚೀವರ್ಸ್ ಅಕಾಡೆಮಿ ಅಧ್ಯಕ್ಷ ಡಾ.ರಾಘವೇಂದ್ರ, ಭಾವಸಾರ ವಿಷನ್ ಇಂಡಿಯಾ ಸಂಸ್ಥೆ ಸುರೇಶ್, ಮಂಜುನಾಥ್, ಆರೋಗ್ಯ ರಕ್ಷಾ ಸಮಿತಿಯ ನಾಗರಾಜು, ಡಾ.ಪ್ರಶಾಂತ್, ನಳಿನಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ್, ತಾಲೂಕು ಮೇಲ್ವಿಚಾರಕರಾದ ಜಿ. ಮೋಹನ್, ಮಂಗಳ, ಉದ್ಯೋಗದಾತ ಸಂಸ್ಥೆ ಸಂಸ್ಥಾಪಕ ರುಕ್ಮಾಂಗದ, ರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಲೀಂ ಪಾಷ, ಕೆಂಪೇಗೌಡ, ಶಶಿಧರ್, ರಾಜು, ಹೇಮಣ್ಣ, ಚಂದನ್, ಫಣೀಂದ್ರ, ಕೃಷ್ಣೇಗೌಡ, ಆಪ್ತ ಸಮಾಲೋಚಕರಾದ ವಿಲನ, ರೂಪೇಶ್, ಪ್ರಯೋಗ ಶಾಲಾ ತಂತ್ರಜ್ಞಾಧಿಕಾರಿ ಹುಸೇನ್, ಆರೋಗ್ಯ ಸುರಕ್ಷಾಧಿಕಾರಿ ಮಹದೇವಮ್ಮ, ಆಶಾ ಕಾರ್ಯಕರ್ತರು ಹಾಜರಿದ್ದರು.

ಕೆ.ಆರ್.ಪೇಟೆ: ಸರಗಳ್ಳನ ಬಂಧನ

ಕೆ.ಆರ್.ಪೇಟೆ, ಜೂ.14– ತಾಲೂಕಿನಲ್ಲಿ ಸರಗಳ್ಳತನ ಮಾಡಿದ್ದ ಆರೋಪಿ ಬಂಧಿಸುವಲ್ಲಿ ಕೆಆರ್.ಪೇಟೆ ಪೊಲೀಸರು ಯಶಸ್ವಿಯಾಗಿದ್ದಾರೆ.



ತಾಲೂಕಿನ ದೊಡ್ಡಕ್ಯಾತನಹಳ್ಳಿ ಗ್ರಾಮದ ನಿವಾಸಿ ಯೋಗೇಶ್(32) ಬಂಧಿತ ಆರೋಪಿ.

ಮಾ.3 ರಂದು ಬೈಕ್‌ನಲ್ಲಿ ಬಂದ ಯೋಗೇಶ್ ತಾಲೂಕಿನ ಕೈಗೋನಹಳ್ಳಿ ಗ್ರಾಮದ ಮಂಜೇಗೌಡರ ಪತ್ನಿ ಲತಾಮಣಿ ಅವರ ಕತ್ತಿನಲ್ಲಿದ್ದ 45 ಗ್ರಾಂ ತೂಕದ 1,65,000 ರೂ. ಬೆಲೆ ಬಾಳುವ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ. ಅಲ್ಲದೇ ಕೆ.ಆರ್.ಪೇಟೆ ವಿವಿಧ ಬಡಾವಣೆಗಳಲ್ಲಿ ಸರಗಳ್ಳತನ ಮಾಡಲು ವಿಫಲಯತ್ನ ನಡೆಸಿದ್ದ. ಕಳೆದ ವಾರ ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್ ಸಹೋದರಿ ಶಿಕ್ಷಕಿ ಡಿ.ಜ್ಯೋತಿ ಅವರ ಚಿನ್ನದ ಸರ ಕಸಿಯಲು ವಿಫಲಯತ್ನ ನಡೆಸಿದ್ದ. ಈ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿತ್ತು. ಇದರ ಆಧಾರದ ಮೇರೆಗೆ ಕೆ.ಆರ್.ಪೇಟೆ ಠಾಣೆ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್ ಮತ್ತು ಎಸ್‌ಐ ಎಸ್.ಪಿ.ಸುನೀಲ್ ನೇತೃತ್ವದ ಪೊಲೀಸರ ತಂಡ ಆರೋಪಿ ಬಂಧಿಸಿ, ಕೃತ್ಯಕ್ಕೆ ಬಳಸುತ್ತಿದ್ದ 2 ಬೈಕ್ ವಶಪಡಿಸಿಕೊಂಡಿದ್ದಾರೆ.

ಆರೋಪಿ ಬಂಧಿಸಿದ ಪೊಲೀಸರನ್ನು ಜಿಲ್ಲಾ ಎಸ್‌ಪಿ ಡಾ.ಎನ್.ಯತೀಶ್, ಎಎಸ್‌ಪಿ ವೇಣುಗೋಪಾಲ್, ನಾಗಮಂಗಲ ಡಿವೈಎಸ್‌ಪಿ ನವೀನ್‌ಕುಮಾರ್ ಅಭಿನಂದಿಸಿದ್ದಾರೆ.

ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ

ಮಂಡ್ಯ, ಜೂ.14(ಮೋಹನ್ ರಾಜ್)– ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಆ ಮೂಲಕ ಇತರರ ಆರೋಗ್ಯ ಕಾಪಾಡುವುದೂ ಅಗತ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎ.ಎಂ. ನಳಿನಿ ಕುಮಾರಿ ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಿಮ್ಸ್ ಸೇರಿದಂತೆ ಇತರೆ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಗರದ ಡಿಎಚ್‌ಓ ಕಚೇರಿ ಸಭಾಂಗಣದಲ್ಲಿ ನಡೆದ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದಾನ ದಾನಗಳಿಗಿಂತಲೂ ಶ್ರೇಷ್ಠವಾದದ್ದು ರಕ್ತದಾನ. ಇದನ್ನು ಪ್ರತಿಯೊಬ್ಬ ಆರೋಗ್ಯವಂತ ಮನುಷ್ಯ ರೂಢಿಸಿಕೊಳ್ಳಬೇಕು ಎಂದರು.

ವಯಸ್ಸಾದವರು ಮುಂಜಾನೆ ಎದ್ದ ತಕ್ಷಣ ಶೌಚಾಲಯಕ್ಕೆ ಹೋಗುತ್ತಾರೆ. ಹೋದ ಕೆಲವರು ಅಲ್ಲೇ ಕುಸಿದುಬಿದ್ದು ಸಾವು–ನೋವುಗಳಿಗೆ ತುತ್ತಾಗುತ್ತಾರೆ. ಏಕೆಂದರೆ ಅವರಲ್ಲಿ ರಕ್ತದ ಹರಿವಿನ ಪ್ರಮಾಣ ಕಡಿಮೆ ಇರುತ್ತದೆ. ಇಂತಹುದ್ದಕ್ಕೆಲ್ಲಾ ರಕ್ತದ ಅವಶ್ಯಕತೆ ಇರುವುದರಿಂದ ರಕ್ತವನ್ನು ದಾನಿಗಳ ಮೂಲಕವೇ ಪಡೆಯಬೇಕಿದೆ. ಆದ್ದರಿಂದ ರಕ್ತದಾನವನ್ನು ಆರೋಗ್ಯವಂತ ಎಲ್ಲರೂ ಮಾಡಬೇಕು ಎಂದು ಸಲಹೆ ನೀಡಿದರು.

ದೇಹದಲ್ಲಿ ರಕ್ತ ವೃದ್ಧಿಸಲು ಪೌಷ್ಠಿಕಾಂಶವುಳ್ಳ ಆಹಾರವನ್ನು ಸೇವನೆ ಮಾಡಬೇಕು. ಬಾಯಿ ರುಚಿಗಾಗಿ ಜಂಕ್‌ಫುಡ್ ಅನ್ನು ಸೇವಿಸಿ ಇಲ್ಲದ ಅನಾರೋಗ್ಯವನ್ನು ನಾವೇ ತಂದುಕೊಳ್ಳುತ್ತೇವೆ. ಇದು ಸರಿಯಲ್ಲ. ಒಳ್ಳೆಯ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳುವಂತೆ ಕಿವಿಮಾತು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಟಿ.ಎನ್.ಧನಂಜಯ, ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎನ್.ಆಶಾಲತಾ, ಮಾನಸಿಕ ತಜ್ಞ ಡಾ.ಕೆ.ಪಿ.ಅಶ್ವತ್, ಮಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಪಿ.ವಿ.ಶ್ರೀಧರ್ ಇತರರಿದ್ದರು.



ನಾಗಮಂಗಲ ತಾಲೂಕಿನ ಶಿವನಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಎಸ್.ಎಸ್.ವಿಜಯಕುಮಾರ್, ಉಪಾಧ್ಯಕ್ಷೆಯಾಗಿ ಪುಟ್ಟಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಗ್ರಾಪಂ ಸದಸ್ಯ ರೇವಣ್ಣ, ಸ್ವಾಮಿಗೌಡ, ಗಂಗಾಧರಯ್ಯ, ಧನಲಕ್ಷ್ಮಿ, ವಿಜಯ ಕುಮಾರ್, ಮಂಜುನಾಥ್, ಮರಿಸ್ವಾಮಿ, ಮಾಯಣ್ಣಗೌಡ ಇದ್ದರು.

ಮಿಮ್ಸ್‌ನಲ್ಲಿ ವ್ಹೀಲ್‌ಚೇರ್ ಇಲ್ಲದೇ ಮಗು ಹೊತ್ತೊಯ್ದ ತಂದೆ

ಮಂಡ್ಯ, ಜೂ.14(ಮೋಹನ್‌ರಾಜ್)– ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದ್ದು, ವ್ಹೀಲ್‌ಚೇರ್ ಸಿಗದೇ ಚಿಕಿತ್ಸೆಗೆ ದಾಖಲಾಗಿದ್ದ 6 ವರ್ಷದ ಮಗುವನ್ನು ತಂದೆಯೊಬ್ಬ ಆಸ್ಪತ್ರೆ ಸುತ್ತ ಕೈಯಲ್ಲಿ ಹೊತ್ತೊಯ್ದಿರುವ ಘಟನೆ ಬೆಳಕಿಗೆ ಬಂದಿದೆ.

ರಾಮನಗರದ ವ್ಯಕ್ತಿಯೊಬ್ಬರು ತಮ್ಮ ಮಗುವನ್ನು ಮಿಮ್ಸ್‌ನಲ್ಲಿ ಚಿಕಿತ್ಸೆಗೆ ದಾಖಲಿಸಿದ್ದರು. ಮಗುವಿಗೆ ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ಮೂಗಿನ ಮೂಲಕ ಆಕ್ಸಿಜನ್ ನೀಡಲಾಗುತ್ತಿತ್ತು. ಭಾನುವಾರ ಮಗುವಿಗೆ ಸ್ಕ್ಯಾನಿಂಗ್ ಮಾಡಿಸುವಂತೆ ವೈದ್ಯರು ಸೂಚಿಸಿದ್ದರು. ಅದರಂತೆ ಸ್ಕ್ಯಾನಿಂಗ್ ಮಾಡಿಸಲು ಆಸ್ಪತ್ರೆಯಲ್ಲಿ ವ್ಹೀಲ್‌ಚೇರ್ ಸಿಗದೆ ತಂದೆಯೇ ಮಗುವನ್ನು ಮಿಮ್ಸ್ ವಿಭಾಗದಲ್ಲಿರುವ ಸ್ಕ್ಯಾನಿಂಗ್ ಸೆಂಟರ್‌ಗೆ ಹೊತ್ತುಕೊಂಡು ಹೋಗಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೇಲುಕೋಟೆ 'ಬಾಹುಬಲಿ' ಇನ್ನಿಲ್ಲ

ಮೇಲುಕೋಟೆ, ಜೂ.14– ಇಲ್ಲಿನ ಯೋಗಾನರಸಿಂಹಸ್ವಾಮಿ ಬೆಟ್ಟದ ದೇವಾಲಯದಲ್ಲಿ ಅಡಿಗೆ ಮನೆ ಕೈಂಕರ್ಯ ಮಾಡುತ್ತಾ ಒಂಟಿಯಾಗಿ ಜೀವನ ಸಾಗಿಸುತ್ತಿದ್ದ 'ಮೇಲುಕೋಟೆ ಬಾಹುಬಲಿ' ಎಂದೇ ಹೆಸರಾಗಿದ್ದ ಶ್ರೀ ಕಾಲಾಮೇಘಂ ರಾಮಸ್ವಾಮಿ ಅಯ್ಯಂಗಾರ್ (75) ಸೋಮವಾರ ಬೆಂಗಳೂರಲ್ಲಿ ನಿಧನರಾಗಿದ್ದಾರೆ.



ಭಾರೀ ಗಾತ್ರದ ಪಾತ್ರೆಯಲ್ಲಿ ಬೆಟ್ಟದ ಮಧ್ಯ ಭಾಗದ ಬಾವಿಯಿಂದ ನೀರು ತೆಗೆದುಕೊಂಡು ಯಾವುದೇ ಪ್ರಯಾಸವಿಲ್ಲದೆ ನೂರಾರು ಕಡಿದಾದ ಮೆಟ್ಟಿಲು ಹತ್ತಿ ನರಸಿಂಹನ ಅಭಿಷೇಕ ಮತ್ತು ಪ್ರಸಾದಗಳಿಗೆ ಸಮರ್ಪಿಸುತ್ತಿದ್ದ ಅವರ 6 ದಶಕಗಳ ಸೇವೆ ಭಕ್ತರಲ್ಲಿ ವಿಸ್ಮಯ ಮೂಡಿಸಿತ್ತು. ಇಳಿ ವಯಸ್ಸಿನಲ್ಲೂ ಭಾರ ಹೊತ್ತು ಹಲವು ಸಲ ಸಲೀಸಾಗಿ ಮೆಟ್ಟಿಲು ಹತ್ತುತ್ತಿದ್ದ ಅವರ ಜೀವನ ಶೈಲಿ ಮೇಲುಕೋಟೆ ಜನತೆ ಮತ್ತು ಭಕ್ತರಿಗೆ ಮಾದರಿಯಾಗಿತ್ತು.

ಗೋವುಗಳ ಜೊತೆ ಒಡನಾಟ ಬೆಳೆಸಿಕೊಂಡು ನಾಟಿ ಹಸುಗಳನ್ನು ಸಾಕುತ್ತಿದ್ದ ಅವರು ಮೇಲುಕೋಟೆ ಪುಳಿಯೊಗರೆ, ಸಕ್ಕರೆ ಪೊಂಗಲ್ ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆದಿದ್ದರು. ಇತ್ತೀಚೆಗೆ ನಡೆದ ರಾಜಗೋಪುರ ಕಳಸ ಪ್ರತಿಷ್ಠಾಪನೆ ಮಹೋತ್ಸವದಲ್ಲೂ ಲವಲವಿಕೆಯಿಂದ ಪಾಲ್ಗೊಂಡಿದ್ದ ಅವರು ಎಂದೂ ಅನಾರೋಗ್ಯದಿಂದ ಹಾಸಿಗೆಯಲ್ಲಿ ಮಲಗಿರಲಿಲ್ಲ ಆದರೆ 3 ದಿನಗಳ ಹಿಂದೆ ಅನಾರೋಗ್ಯಪೀಡಿತರಾಗಿದ್ದರು. ವಿಶೇಷವೆಂದರೆ ಸೌರಮಾನ ನರಸಿಂಹ ಜಯಂತಿಯಂದೇ ಅವರು ಪ್ರಾಣತ್ಯಾಗ ಮಾಡಿದ್ದಾರೆ.

ಮೃತರ ನಿಧನಕ್ಕೆ ಸಿಎಂ ಬಸವರಾಜ ಬೊಮ್ಮಾಯಿ, ಶಾಸಕ ಸಿ.ಎಸ್.ಪುಟ್ಟರಾಜು, ರಾಮದಾಸ್, ಸಚಿವ ಶ್ರೀರಾಮುಲು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ದೇವಸ್ಥಾನದ ಸ್ಥಾನಿಕರು ಹಾಗೂ ಅರ್ಚಕರು ಸಂತಾಪ ಸೂಚಿಸಿದ್ದಾರೆ. ಶ್ರೀಚೆಲುವನಾರಾಯಣಸ್ವಾಮಿ, ಶ್ರೀಯೋಗಾನರಸಿಂಹಸ್ವಾಮಿ ದೇವಾಲಯಗಳ ಪರಂಪರೆಯಂತೆ ಮೇಲುಕೋಟೆಯಲ್ಲಿ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

12 ಸಾವಿರ ಮಂದಿ ನೋಂದಣಿ

ಕೇಂದ್ರ ಸರ್ಕಾರದಿಂದಲೇ ಕಾರ್ಯಕ್ರಮ ಆಯೋಜನೆ: ಯೋಗ ಕಾರ್ಯಕ್ರಮದ ಕುರಿತಂತೆ ಕೇಂದ್ರ ಸರ್ಕಾರದ ಆಯುಷ್ ಇಲಾಖೆ ಅಧಿಕಾರಿಗಳು ಎರಡ್ಮೂರು ಬಾರಿ ಸಭೆ ನಡೆಸಿದ್ದಾರೆ. ಮುಖ್ಯಮಂತ್ರಿಗಳು, ಸಚಿವ ಡಾ.ಸುಧಾಕರ್ ಅಧ್ಯಕ್ಷತೆಯಲ್ಲಿ ವರ್ಚ್ಯುವಲ್ ಸಭೆ ನಡೆಸಿ, ಮೈಸೂರಲ್ಲಿ ಯೋಗ ದಿನಾಚರಣೆ ಸಂಬಂಧ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ಪಡೆದುಕೊಂಡಿದ್ದಾರೆ. ಕೇಂದ್ರ ಸರ್ಕಾರವೇ ಸಂಪೂರ್ಣ ಕಾರ್ಯಕ್ರಮದ ಆಯೋಜನೆ ಮಾಡಲಿದ್ದು, ಪಾಲ್ಗೊಳ್ಳುವ 15 ಸಾವಿರ ಜನರಿಗೆ ಮ್ಯಾಟ್, ಮೊಬೈಲ್ ಪೌಚ್, ಶೂ ಬ್ಯಾಗ್ ವಿತರಣೆ ಸೇರಿದಂತೆ ಆಹ್ವಾನ ಪತ್ರಿಕೆಯನ್ನು ಕೇಂದ್ರ ಸರ್ಕಾರವೇ ಸಿದ್ಧಪಡಿಸಲಿದೆ. ವೇದಿಕೆ ಸಿದ್ಧಪಡಿಸಿದ್ದು, ಭದ್ರತೆ ಸೇರಿದಂತೆ ಉಳಿದಂತಹ ಜವಾಬ್ದಾರಿಗಳನ್ನು ನಿರ್ವಹಿಸಲು ಜಿಲ್ಲಾಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಲಾಗುವುದು ಎಂದರು.

12 ಸಾವಿರ ಜನರ ನೋಂದಣಿ: ಈಗಾಗಲೇ 12 ಸಾವಿರ ಜನರ ನೋಂದಣಿಯಾಗಿದ್ದು, ಕಡ್ಡಾಯವಾಗಿ ಕೊರೊನಾ ಲಸಿಕೆ 2 ಡೋಸ್‌ಗಳನ್ನು ತೆಗೆದುಕೊಂಡಿರಬೇಕು. ಇಲ್ಲವಾದರೆ 72 ಗಂಟೆ ಮುಂಚಿನ ನೆಗೆಟಿವ್ ರಿಪೋರ್ಟ್ ಹೊಂದಿರಬೇಕು. ಕೇಂದ್ರ ಸರ್ಕಾರದ ನಿರ್ದೇಶನವನ್ನು ರಾಜ್ಯ ಸರ್ಕಾರ ಪಾಲನೆ ಮಾಡಲಿದೆ. ಯೋಗದಲ್ಲಿ ಪಾಲ್ಗೊಳ್ಳುವವರಿಗೆ ರಾಜ್ಯ ಸರ್ಕಾರದ ವತಿಯಿಂದ ತಿಂಡಿ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗ್ಗೆ 5.30 ಗಂಟೆಗೆ ಎಲ್ಲಾ ಗೇಟ್‌ಗಳು ಬಂದ್ ಆಗಲಿದೆ. ಜೂನ್ 19ರಂದು ಅಂತಿಮ ಹಂತದ ತಾಲೀಮು ನಡೆಸಲಾಗುತ್ತದೆ. ಭದ್ರತೆ ಸಂಬಂಧ ಪೊಲೀಸ್ ಅಧಿಕಾರಿಗಳು ಸಭೆ ನಡೆಸಿದ್ದಾರೆ ಎಂದರು.

ಹೆಮ್ಮೆಯ ವಿಷಯ: ಆರೋಗ್ಯ ಸಚಿವ ಡಾ.ಸುಧಾಕರ್ ಮಾತನಾಡಿ, ವಿಶ್ವ ಯೋಗ ದಿನದಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವುದು ಹೆಮ್ಮೆಯ ವಿಷಯ. ಕಾರ್ಯಕ್ರಮದ ಸಿದ್ಧತೆಗಳ ಪರಾಮರ್ಶೆ ಮಾಡಲಾಗಿದೆ. ಆರೋಗ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲಿ ಬೀಡುಬಿಡಲಿದ್ದಾರೆ. ಯೋಗ ಕಾರ್ಯಕ್ರಮಕ್ಕೂ ಮುನ್ನ ಮತ್ತು ನಂತರ ಸ್ವಚ್ಛತೆ ಕಾಪಾಡುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು. ಯೋಗವನ್ನು ಇಡೀ ವಿಶ್ವವೇ ಒಪ್ಪಿದೆ. ಯೋಗ ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲ, ಮಾನಸಿಕ ಆರೋಗ್ಯಕ್ಕೂ ಸಹಕಾರಿಯಾಗಿದೆ. ಯೋಗ ದೈಹಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ ಆರೋಗ್ಯಕ್ಕೂ ಸಹಕಾರಿ. ಈ ಕಾರ್ಯಕ್ರಮಕ್ಕೆ 'ಮಾನವತ್ವವನ್ನು ಉಳಿಸುವ' ಶೀರ್ಷಿಕೆಯನ್ನು ಕೊಟ್ಟಿರುವುದು ಸರಿಯಾಗಿದೆ. ವಿಶ್ವ ಯೋಗ ದಿನಾಚರಣೆ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯವಿದೆ ಎಂದರು.

ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಎಸ್‌ಪಿ ಚೇತನ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಜಿಪಂ ಸಿಇಒ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಮಂಜುನಾಥ್‌ಸ್ವಾಮಿ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಉಪಸ್ಥಿತಿ ಬಗ್ಗೆ ಇನ್ನು ನಿರ್ಧರಿಸಿಲ್ಲ

ಆದರೆ ಹಿಂದಿನಂತೆ ವೇದಿಕೆಯಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ಮುಖ್ಯಮಂತ್ರಿಗಳು, ರಾಜ್ಯಪಾಲರು, ಜಿಲ್ಲಾ ಉಸ್ತುವಾರಿ ಸಚಿವರು, ಆಯುಷ್ ಇಲಾಖೆಯ ಕ್ಯಾಬಿನೆಟ್ ಹಾಗೂ ರಾಜ್ಯ ಸಚಿವರಿಗೆ ಮಾತ್ರ ಅವಕಾಶವಿರುತ್ತದೆ. ಇವರನ್ನು ಹೊರತುಪಡಿಸಿ ಸಂಸದನಾದ ನಾನು ಸೇರಿದಂತೆ ಯಾವ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರೂ ವೇದಿಕೆಯಲ್ಲಿರುವುದಿಲ್ಲ. ಕೊರೊನಾ ಕಾರಣದಿಂದ 2 ವರ್ಷ ಪ್ರಧಾನಿಯವರ ನೇತೃತ್ವದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ನಡೆದಿಲ್ಲ. ಇನ್ನುಳಿದ 5 ಯೋಗ ದಿನಾಚರಣೆಗಳಲ್ಲಿದ್ದಂತೆ ಸೀಮಿತ ಜನಪ್ರತಿನಿಧಿಗಳು ವೇದಿಕೆಯಲ್ಲಿ ಇರಲಿದ್ದಾರೆ ಎಂದು ತಿಳಿಸಿದರು.

ಇನ್ನು ಗಣ್ಯರನ್ನು ಆಹ್ವಾನಿಸುವ ಬಗ್ಗೆ ಚರ್ಚೆ ನಡೆಯುತ್ತಿದ್ದು, ಇನ್ನೆರಡು ದಿನಗಳಲ್ಲಿ ನಿರ್ಧರಿಸಲಾಗುತ್ತದೆ. ಮೈಸೂರು ಮಹಾರಾಜರ ಪರಂಪರೆ ವಿಶ್ವವಿಖ್ಯಾತ. ಅವರು ಯೋಗಕ್ಕೆ ಪ್ರೋತ್ಸಾಹ ನೀಡಿ ಪೋಷಿಸಿದ್ದಾರೆ. ಈ ಹಿನ್ನೆಲೆಯಲ್ಲೇ ಯೋಗ ದಿನಾಚರಣೆಗೆ ಅರಮನೆ ಆವರಣವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗಣ್ಯರ ಆಹ್ವಾನದ ಬಗ್ಗೆ ಇನ್ನೂ ಚರ್ಚೆ ಹಂತದಲ್ಲಿರುವಾಗಲೇ ಮಹಾರಾಜರನ್ನು ಕರೆದಿಲ್ಲ ಎಂಬ ಗಾಳಿಸುದ್ದಿ ಹಬ್ಬಿಸುವುದು ಸರಿಯಲ್ಲ. ದಯವಿಟ್ಟು ಯಾರೂ ಹೀಗೆ ಮಾಡಬೇಡಿ. ರಾಜಮಾತೆ ಪ್ರಮೋದಾದೇವಿ ಒಡೆಯರ್, ಮಹಾರಾಜ ಯದುವೀರ್, ಯತಿಗಳು ಸೇರಿದಂತೆ ಅನೇಕ ಗಣ್ಯರಿದ್ದಾರೆ. ಎಲ್ಲರ ಉಪಸ್ಥಿತಿಯಲ್ಲೇ ಉತ್ತಮ ಕಾರ್ಯಕ್ರಮ ನಡೆಸಬೇಕಿದೆ ಎಂದು ಹೇಳಿದರು. ಯೋಗ ದಿನಾಚರಣೆ ರಾಜಕೀಯ ಕಾರ್ಯಕ್ರಮವಲ್ಲ. ಎಲ್ಲಾ ಚುನಾಯಿತ ಜನಪ್ರತಿನಿಧಿಗಳಿಗೂ ಆಹ್ವಾನ ಇರಲಿದೆ. ಆ ವೇಳೆ ಅರ್ಧ ಗಂಟೆ ಸಭಾ ಕಾರ್ಯಕ್ರಮವೂ ನಡೆಯುವುದರಿಂದ ಅತೀಗಣ್ಯ ವ್ಯಕ್ತಿಗಳಿಗೆ(ವಿಐಪಿ) ಆಸನ ವ್ಯವಸ್ಥೆಯನ್ನೂ ಮಾಡಲಾಗುವುದು. ವಿವಿಧ ಕ್ಷೇತ್ರಗಳ ಸಾಧಕರು ಸೇರಿದಂತೆ ಎಲ್ಲಾ ಗಣ್ಯರನ್ನೂ ಆಹ್ವಾನಿಸಲು ಸಿದ್ಧತೆ ನಡೆಯುತ್ತಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ತಪ್ಪು ತಿಳುವಳಿಕೆ ಹರಡುವುದನ್ನು ನಿಲ್ಲಿಸಬೇಕೆಂದು ಮನವಿ ಮಾಡಿದರು.

ಸಮಾಜದಲ್ಲಿ ಸಾಮಾಜಿಕ ಮೌಲ್ಯ ಕುಸಿತ

ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿವಿ ಕುಲಪತಿ ಆತಂಕ

ಮೈಸೂರು, ಜೂ.14(ಎಸ್‌ಪಿಎನ್)– ವೈದ್ಯಕೀಯ, ಇಂಜಿನಿಯರ್ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮೌಲ್ಯ ಬಿಟ್ಟು, ಹಣದ ಹಿಂದೆ ಬಿದ್ದಿದ್ದಾರೆ. ಇದರಿಂದ ಸಾಮಾಜಿಕ ಮೌಲ್ಯ ಕುಸಿಯುತ್ತಿದೆ ಎಂದು ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಆತಂಕ ವ್ಯಕ್ತಪಡಿಸಿದರು.



ಮೈಸೂರು ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ರಂಗಭೂಮಿ ಮತ್ತು ಜಾನಪದ ಕಲಾಪ್ರಕಾರಗಳ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಜಾನಪದ ಹಾಗೂ ಇತರೆ ಕಲೆಗಳ ಪ್ರೋತ್ಸಾಹಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಅನುದಾನ ನೀಡುತ್ತಿವೆ. ಈ ಸೌಲಭ್ಯವನ್ನು ಪಡೆದುಕೊಳ್ಳುವ ವಿಧಾನ ಎಲ್ಲರೂ ತಿಳಿದುಕೊಳ್ಳಬೇಕು. ಅಲ್ಲದೆ, ಜಾನಪದ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಯುವಕರಿಗೆ ಖಾಸಗಿ ವಿದ್ಯಾಕ್ಷೇತ್ರದಲ್ಲಿ ವಿಫುಲ ಅವಕಾಶಗಳಿವೆ. ಇದನ್ನು ಉಪಯೋಗಿಸಿಕೊಳ್ಳುವ ಸಂದರ್ಭ ಸೃಷ್ಟಿಸಿಕೊಳ್ಳಬೇಕು ಎಂದು ತಿಳಿಸಿದರು.

ನೂತನ ಶಿಕ್ಷಣ ನೀತಿ ಪ್ರಕಾರ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಈಗಾಗಲೇ ಖಾಸಗಿ ಕ್ಷೇತ್ರದಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಹಾಗಾಗಿ ಇಂತಹ ಶಿಬಿರಗಳಲ್ಲಿ ರಂಗಭೂಮಿ ಮತ್ತು ಜಾನಪದ ಕಲೆಗಳ ಬಗ್ಗೆ ತರಬೇತಿ ಪಡೆದುಕೊಂಡರೆ ಸಾಕಷ್ಟು ಅವಕಾಶ ಸಿಗುತ್ತವೆ ಎಂದು ತಿಳಿಸಿದರು.

ರಂಗಭೂಮಿ ಮತ್ತು ಜಾನಪದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೂ ಹೆಚ್ಚಿನ ಆದ್ಯತೆ ಸಿಗುತ್ತವೆ. ಹಾಗಾಗಿ ಇಂತಹ ಶಿಬಿರಗಳಲ್ಲಿ ಯುವಕರು ತೊಡಗಿಸಿಕೊಳ್ಳಲಿ ಎಂದು ಸಲಹೆ ನೀಡಿದರಲ್ಲದೆ, ಕಳೆದ 8 ವರ್ಷಗಳಿಂದ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರ ಹಮ್ಮಿಕೊಂಡಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಮೈಸೂರು ವಿವಿ ಸಂಜೆ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಕೆ.ಸೌಭಾಗ್ಯವತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಜನಪದ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ನಂಜಯ್ಯ ಹೊಂಗನೂರು, ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ನವದೆಹಲಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ: ಸಂಸದ ಡಿ.ಕೆ. ಸುರೇಶ್ ತಳ್ಳಿದ ಪೊಲೀಸ್

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿಚಾರಣೆ ಎರಡನೇ ದಿನವಾದ ಇಂದು ಕೂಡಾ ಮುಂದುವರೆದಿದ್ದು, ಅವರನ್ನು ಭೇಟಿ ಮಾಡಲು ಹೊರಟ ಸಂಸದ ಡಿ.ಕೆ.ಸುರೇಶ್, ಮಾಜಿ ಸಚಿವ ದಿನೇಶ್ ಗುಂಡೂರಾವ್ ಮತ್ತಿತರ ಕಾಂಗ್ರೆಸ್ ಮುಖಂಡರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಾಂಗ್ರೆಸ್ ಕಚೇರಿಗೆ ಹೊರಟ ಈ ನಾಯಕರನ್ನು ಪೊಲೀಸರು ತಡೆದು ನಿಲ್ಲಿಸಿದ್ದಾರೆ. ಈ ವೇಳೆ ಡಿ.ಕೆ.ಸುರೇಶ್ ಹಾಗೂ ಪೊಲೀಸರೊಂದಿಗೆ ವಾಗ್ವಾದ, ಮಾತಿನ ಚಕಮಕಿ, ತಳ್ಳಾಟ, ನೂಕಾಟ ನಡೆದಿದೆ. ಪೊಲೀಸರೊಬ್ಬರು ಹಿಂಬದಿಯಿಂದ ತಳ್ಳಿದ್ದಾರೆ. ಬಳಿಕ ಬಸ್ಸಿನಲ್ಲಿ ಕರೆದುಕೊಂಡು ಹೋಗಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಕರ್ನಾಟಕ ಕಾಂಗ್ರೆಸ್, ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ಮತ್ತೊಮ್ಮೆ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವನ್ನು ನೆನಪಿಸುತ್ತಿದೆ. ಹೋರಾಡುತ್ತೇವೆ. ದೇಶವನ್ನು ಫ್ಯಾಸಿಸ್ಟ್ ಶಕ್ತಿಗಳಿಂದ ಮುಕ್ತಗೊಳಿಸುತ್ತೇವೆ. ಆ ಬದ್ಧತೆ ನಮಗಿದೆ ಎಂದು ಟ್ವೀಟ್‌ನಲ್ಲಿ ಹೇಳಿದೆ. ಜನಪ್ರತಿನಿಧಿಗಳೊಂದಿಗೆ ಪೊಲೀಸರ ಈ ನಡವಳಿಕೆ ಪ್ರಜಾಪ್ರಭುತ್ವವನ್ನು ಅಣಕಿಸುವಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಲಾಗಿದೆ.

ಲಿವ್–ಇನ್ ಸಂಬಂಧದಲ್ಲಿ ಜನಿಸಿದ ಮಗು ಆಸ್ತಿಗೆ ಅರ್ಹ

ಸುಪ್ರೀಂಕೋರ್ಟ್ ಮಹತ್ವದ ತೀರ್ಪು



ನವದೆಹಲಿ, ಜೂ.14– ಲಿವ್–ಇನ್ ರಿಲೇಶನ್‌ಶಿಪ್‌ಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದ್ದು, ಮದುವೆಯಿಲ್ಲದೆ ಹುಟ್ಟಿದ ಮಕ್ಕಳೂ ತಂದೆಯ ಆಸ್ತಿಗೆ ಹಕ್ಕುದಾರರು ಎಂದು ಹೇಳಿದೆ.

ಒಬ್ಬ ಮಹಿಳೆ ಮತ್ತು ಪುರುಷ ದೀರ್ಘಕಾಲ ಒಟ್ಟಿಗೆ ವಾಸಿಸುತ್ತಿದ್ದರೆ ಅದನ್ನು ಮದುವೆ ಎಂದು ಪರಿಗಣಿಸಲಾಗುವುದು ಮತ್ತು ಈ ಸಂಬಂಧದಿಂದ ಹುಟ್ಟುವ ಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಹಕ್ಕು ಸಿಗುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ತಂದೆ–ತಾಯಿ ಮದುವೆಯಾಗಿಲ್ಲ ಎಂಬ ಕಾರಣಕ್ಕೆ ಮಗ ತಂದೆಯ ಆಸ್ತಿಯಲ್ಲಿ ಪಾಲುದಾರ ಎಂದು ಪರಿಗಣಿಸದ ಕೇರಳ ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿದೆ. ಇಬ್ಬರೂ ಮದುವೆಯಾಗದೇ ಇರಬಹುದು, ಆದರೆ ಇಬ್ಬರೂ ಪತಿ–ಪತ್ನಿಯಂತೆ ಬಹಳ ಕಾಲ ಒಟ್ಟಿಗೆ ವಾಸಿಸಿದ್ದಾರೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ಹೀಗಿರುವಾಗ ಡಿಎನ್‌ಎ ಪರೀಕ್ಷೆಯಲ್ಲಿ ಮಗು ಇಬ್ಬರದ್ದು ಎಂಬುದು ಸಾಬೀತಾದರೆ ತಂದೆಯ ಆಸ್ತಿಯ ಮೇಲೆ ಮಗುವಿಗೆ ಸಂಪೂರ್ಣ ಹಕ್ಕಿದೆ ಎಂದು ಹೇಳಿದೆ.

ಕೇರಳ ಹೈಕೋರ್ಟ್: ಕೇರಳದ ವ್ಯಕ್ತಿಯೊಬ್ಬರು ತಮ್ಮ ತಂದೆಯ ಆಸ್ತಿಯಲ್ಲಿ ಪಾಲು ಪಡೆಯುವುದಕ್ಕಾಗಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು. ಅಕ್ರಮ ಮಗ ಎಂದು ಕರೆದು ತನಗೆ ಪಾಲು ನೀಡುತ್ತಿಲ್ಲ ಎಂದು ವಾದ ಮಾಡಲಾಗಿತ್ತು. ತೀರ್ಪು ಪ್ರಕಟಿಸುವ ಸಂದರ್ಭದಲ್ಲಿ ಕೇರಳ ಹೈಕೋರ್ಟ್, ಆಸ್ತಿಗೆ ಹಕ್ಕು ನೀಡುವ ವ್ಯಕ್ತಿ ಹಾಗೂ ಆತನ ತಾಯಿ ಮದುವೆಯಾಗಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಕುಟುಂಬದ ಆಸ್ತಿಗೆ ಅರ್ಹರು ಎಂದು ಪರಿಗಣಿಸಲಾಗುವುದಿಲ್ಲ ಎಂದು ಹೇಳಿತ್ತು.

ಲಿವ್ ಇನ್ ರಿಲೇಶನ್ ಬಗ್ಗೆ ಕಾನೂನು ಏನು ಹೇಳುತ್ತದೆ: 2010ರಲ್ಲಿ ಸುಪ್ರೀಂಕೋರ್ಟ್ ಲಿವ್ ಇನ್ ರಿಲೇಶನ್ ಶಿಪ್ ಅನ್ನು ಗುರುತಿಸಿತ್ತು. ಇದರೊಂದಿಗೆ, ಕೌಟುಂಬಿಕ ದೌರ್ಜನ್ಯ ಕಾಯಿದೆ 2005ರ ಸೆಕ್ಷನ್ 2 (ಎಫ್)ನಲ್ಲಿ ಲಿವ್ ಇನ್ ರಿಲೇಶನ್ ಅನ್ನು ಸಹ ಸೇರಿಸಲಾಗಿದೆ. ಅಂದರೆ, ಲಿವ್–ಇನ್‌ನಲ್ಲಿ ವಾಸಿಸುವ ದಂಪತಿಗಳು ಕೌಟುಂಬಿಕ ಹಿಂಸೆಯ ವರದಿಯನ್ನು ಸಹ ಸಲ್ಲಿಸಬಹುದು. ಲಿವ್ ಇನ್ ರಿಲೇಶನ್‌ಗಾಗಿ, ದಂಪತಿಗಳು ಪತಿ–ಪತ್ನಿಯಂತೆ ಒಟ್ಟಿಗೆ ಇರಬೇಕಾಗುತ್ತದೆ, ಆದರೆ ಇದಕ್ಕೆ ಯಾವುದೇ ಸಮಯದ ಮಿತಿಯಿಲ್ಲ ಎಂದು ಹೇಳಿದೆ.

ಮಾಜಿ ಕ್ರಿಕೆಟಿಗರು, ಅಂಪೈರ್‌ಗಳಿಗೆ ಪಿಂಚಣಿ ಹೆಚ್ಚಳ: ಬಿಸಿಸಿಐ

ನವದೆಹಲಿ, ಜೂ.14– ಐಪಿಎಲ್ ಪ್ರಸಾರ ಹಕ್ಕುಗಳ ಮಾರಾಟದಲ್ಲಿ ಭರ್ಜರಿ ಹಣ ಗಳಿಸಿದ ಕೆಲವೇ ಗಂಟೆಗಳಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ), ಮಾಜಿ ಕ್ರಿಕೆಟಿಗರು ಮತ್ತು ಅಂಪೈರ್‌ಗಳಿಗೆ ತಿಂಗಳ ಪಿಂಚಣಿಯನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿದ್ದು, ಪ್ರಥಮ ದರ್ಜೆ ಪಂದ್ಯವನ್ನಾಡಿದ ಮಾಜಿ ಆಟಗಾರರಿಗೆ ನೀಡುತ್ತಿದ್ದ ಪಿಂಚಣಿಯನ್ನು 15 ಸಾವಿರದಿಂದ 30 ಸಾವಿರ ರೂ.ಗೆ ಏರಿಕೆ ಮಾಡಿದೆ. ಅಂತೆಯೇ ಪ್ರತಿ ತಿಂಗಳು 37,500 ಪಿಂಚಣಿ ಪಡೆಯುತ್ತಿದ್ದ ಟೆಸ್ಟ್ ತಂಡದ ಮಾಜಿ ಆಟಗಾರರು ಇನ್ನು 60 ಸಾವಿರ ರೂ. ಹಾಗೂ 50 ಸಾವಿರ ರೂ. ಪಡೆಯುತ್ತಿದ್ದವರು 70 ರೂ. ಸಾವಿರ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇನ್ನು ರಾಷ್ಟ್ರೀಯ ಮಹಿಳಾ ತಂಡವನ್ನು ಪ್ರತಿನಿಧಿಸಿದ್ದ ಆಟಗಾರ್ತಿಯರು 30 ಸಾವಿರ ರೂ. ಬದಲು 52,500 ರೂ. ಪಡೆಯಲಿದ್ದಾರೆ. 2003ಕ್ಕೂ ಮುನ್ನ ನಿವೃತ್ತಿಯಾಗಿದ್ದ ಪ್ರಥಮ ದರ್ಜೆ ಕ್ರಿಕೆಟ್ ಆಟಗಾರರು 22,500ರ ಬದಲು 45 ಸಾವಿರ ರೂ. ಗಳಿಸಲಿದ್ದಾರೆ ಎಂದು ತಿಳಿದು ಬಂದಿದೆ. ಮಾಜಿ ಆಟಗಾರರು ಮತ್ತು ಅಂಪೈರ್‌ಗಳ ಪಿಂಚಣಿ ಹೆಚ್ಚಿಸಿರುವುದನ್ನು ಘೋಷಿಸಲು ಸಂತಸವಾಗುತ್ತಿದೆ. 900 ಆಟಗಾರರು ಇದರ ಲಾಭ ಪಡೆಯಲಿದ್ದಾರೆ. ಇದರಲ್ಲಿ ಶೇ.75ರಷ್ಟು ಮಂದಿಯ ಪಿಂಚಣಿಯನ್ನು ಶೇ.100ರಷ್ಟು ಹೆಚ್ಚಿಸಲಾಗಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಚಾಮುಲ್‌ನಲ್ಲಿ 'ಕೈ'ಗೆ ಅಧಿಕ ಸ್ಥಾನ; ಬಿಜೆಪಿಗೆ ಹಿನ್ನಡೆ


● ಕಾಂಗ್ರೆಸ್ ಬೆಂಬಲಿತರು 4 ಸ್ಥಾನ, ಬಿಜೆಪಿ ಬೆಂಬಲಿತರು 2, ಜೆಡಿಎಸ್ ಬೆಂಬಲಿತ 1 ಸ್ಥಾನ ● ಬಿಜೆಪಿ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ತಲಾ 1 ಸ್ಥಾನಗಳಲ್ಲಿ ಗೆಲುವು




ಎಂ.ಪಿ. ಸುನೀಲ್


ನಂಜುಂಡಪ್ರಸಾದ್


ಹೆಚ್.ಎಸ್. ಬಸವರಾಜು


ಎಸ್. ಮಹದೇವಸ್ವಾಮಿ


ನಂಜುಂಡಸ್ವಾಮಿ

ಚಾಮರಾಜನಗರ, ಜೂ.14(ಎಸ್‌ಎಸ್)–ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಚಾಮುಲ್) ಆಡಳಿತ ಮಂಡಳಿಯ 9 ನಿರ್ದೇಶಕ ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 4 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಪ್ರಾಬಲ್ಯ ಮೆರೆದಿದ್ದಾರೆ. ಬಿಜೆಪಿ ಬೆಂಬಲಿತರು 2 ಸ್ಥಾನ, ಜೆಡಿಎಸ್ ಬೆಂಬಲಿತ 1 ಸ್ಥಾನ, ಕಾಂಗ್ರೆಸ್ ಬಂಡಾಯ ಹಾಗೂ ಬಿಜೆಪಿ ಬಂಡಾಯ ಅಭ್ಯರ್ಥಿ ತಲಾ 1 ಸ್ಥಾನದಲ್ಲಿ ಗೆಲವು ಸಾಧಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾಗಿ ಜಿಲ್ಲಾ ಮಹಿಳಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಪುತ್ರಿ ಶೀಲಾ ಪುಟ್ಟರಂಗಶೆಟ್ಟಿ, ಕೊಳ್ಳೇಗಾಲ ತಾಲೂಕಿನಿಂದ ಸ್ಪರ್ಧಿಸಿದ್ದ ಎಂ.ನಂಜುಂಡಸ್ವಾಮಿ, ಗುಂಡ್ಲುಪೇಟೆ ತಾಲೂಕಿನಿಂದ ಸ್ಪರ್ಧಿಸಿದ್ದ ಚಾಮುಲ್ ಹಾಲಿ ಅಧ್ಯಕ್ಷ ಹೆಚ್.ಎಸ್. ನಂಜುಂಡಪ್ರಸಾದ್, ಹನೂರು ತಾಲೂಕಿನಿಂದ ಸ್ಪರ್ಧಿಸಿದ್ದ ಶಾಹುಲ್ ಅಹಮ್ಮದ್ ಜಯಗಳಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ಚಾಮರಾಜನಗರ ತಾಲೂಕಿನಿಂದ ಸ್ಪರ್ಧಿಸಿದ್ದ ವಿ.ಸಿ.ಹೊಸೂರಿನಿಂದ ಹೆಚ್.ಎಸ್.ಬಸವರಾಜು, ಯಳಂದೂರು ತಾಲೂಕಿನಿಂದ ಸ್ಪರ್ಧಿಸಿದ್ದ ವೈ.ಸಿ.ನಾಗೇಂದ್ರ ಗೆಲವು ಸಾಧಿಸಿದ್ದಾರೆ.

ಗೆಲುವು ಸಾಧಿಸಿದ ಶಾಸಕರ ಪುತ್ರಿ

ಚಾಮುಲ್ ಜಿಲ್ಲಾ ಮಹಿಳಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರಿ ಶೀಲಾ ಪುಟ್ಟರಂಗಶೆಟ್ಟಿ ಅವರು ಪ್ರಚಂಡ ಗೆಲುವು ಸಾಧಿಸಿದ್ದಾರೆ. ತಮ್ಮ ಪ್ರತಿಸ್ಪರ್ಧಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಬಿಜೆಪಿ ಬೆಂಬಲ ನೀಡಿದ್ದ ಚಾಮುಲ್ ಹಾಲಿ ನಿರ್ದೇಶಕಿ ಜಿ.ಪ್ರಮೋದಾ ಅವರನ್ನು 28 ಮತಗಳ ಭಾರೀ ಅಂತರದಿಂದ ಸೋಲಿಸಿದ್ದಾರೆ. ಈ ಮೂಲಕ ಚಾಮುಲ್‌ನ ಈ ಬಾರಿಯ ಏಕೈಕ ಮಹಿಳಾ ನಿರ್ದೇಶಕಿಯಾಗಿ ಆಯ್ಕೆಯಾದ ಹಿರಿಮೆಗೆ ಪಾತ್ರರಾಗಿದ್ದಾರೆ. ಶೀಲಾ ಪುಟ್ಟರಂಗಶೆಟ್ಟಿ ಅವರ ಸ್ಪರ್ಧೆಯಿಂದ ಈ ಕ್ಷೇತ್ರ ಎಲ್ಲರ ಗಮನ ಸೆಳೆದಿತ್ತು ಹಾಗೂ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತು


ಶೀಲಾ ಪುಟ್ಟರಂಗಶೆಟ್ಟಿ


ಸದಾಶಿವಮೂರ್ತಿ


ವೈ.ಸಿ. ನಾಗೇಂದ್ರ


ಶಾಹುಲ್ ಅಹಮ್ಮದ್

ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಹನೂರು ತಾಲೂಕಿನಿಂದ ಸ್ಪರ್ಧಿಸಿದ್ದ ಎಸ್.ಮಹದೇವಸ್ವಾಮಿ ಜಯಗಳಿಸಿದ್ದಾರೆ. ಇನ್ನು ಚಾಮರಾಜನಗರ ತಾಲೂಕಿನಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸದಾಶಿವಮೂರ್ತಿ, ಗುಂಡ್ಲುಪೇಟೆ ತಾಲೂಕಿನಿಂದ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿದ್ದ ಎಂ.ಪಿ.ಸುನೀಲ್ ಗೆಲ್ಲುವ ಮೂಲಕ ತಮ್ಮ ಪ್ರಾಬಲ್ಯ ತೋರಿದ್ದಾರೆ. ಈ ಮೂಲಕ ತಮಗೆ ಟಿಕೆಟ್ ನೀಡಲು ನಿರಾಕರಿಸಿದ ಪಕ್ಷಕ್ಕೆ ತಕ್ಕ ಪಾಠ ಕಲಿಸಿದ್ದಾರೆ.

ಚಾಮರಾಜನಗರ ತಾಲೂಕು, ಯಳಂದೂರು ತಾಲೂಕು ಹಾಗೂ ಕೊಳ್ಳೇಗಾಲ ತಾಲೂಕಿನಲ್ಲಿ ಕಾಂಗ್ರೆಸ್ ಮುಖಭಂಗ ಅನುಭವಿಸಿದರೆ, ಗುಂಡ್ಲುಪೇಟೆ ಹಾಗೂ ಹನೂರು ತಾಲೂಕಿನಲ್ಲಿ ಬಿಜೆಪಿ ಮುಖಭಂಗಕ್ಕೀಡಾಗಿದೆ.

ಮರು ಆಯ್ಕೆ: ಹೆಚ್‌ಎಸ್. ನಂಜುಂಡಪ್ರಸಾದ್, ಮಧುವನಹಳ್ಳಿ ಎಂ.ನಂಜುಂಡಸ್ವಾಮಿ ಮರು ಆಯ್ಕೆಯಾಗಿದ್ದಾರೆ. ಹಾಲಿ ನಿರ್ದೇಶಕರಾಗಿದ್ದ ಸಿ.ಎಸ್. ಗುರುಮಲ್ಲಪ್ಪ, ಕಿಲಗೆರೆ ಬಸವರಾಜು, ಮಲೆಯೂರು ರವಿಶಂಕರ್, ಕಣ್ಣೇಗಾಲ ಡಿ.ಮಾದಪ್ಪ(ಸ್ವಾಮಿ), ಜಿ.ಪ್ರಮೋದಾ ಸೋಲು ಅನುಭವಿಸಿದ್ದಾರೆ.

ಮೈಸೂರಿನಿಂದ ಚಾಮುಲ್‌ಗೆ ಆಯ್ಕೆ: ಚಾಮುಲ್ ಸ್ಥಾಪನೆ ಆಗುವ ಮುನ್ನ ಚಾಮರಾಜನಗರ ಜಿಲ್ಲೆ ಮೈಸೂರು ಜಿಲ್ಲೆಯ ಮೈಮುಲ್‌ಗೆ ಒಳಪಟ್ಟಿತ್ತು. ಮೈಮುಲ್ ನಿರ್ದೇಶಕರಾಗಿದ್ದ ಜಿಲ್ಲೆಯ ನಾಲ್ವರು ಚಾಮುಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಇವರಲ್ಲಿ ಹೆಚ್.ಎಸ್.ಬಸವರಾಜು, ಎಸ್. ಮಹದೇವಸ್ವಾಮಿ(ಉದ್ದನೂರು ಪ್ರಸಾದ್) ಗೆಲವು ಸಾಧಿಸುವ ಮೂಲಕ ಮೈಮುಲ್‌ನಿಂದ ಚಾಮುಲ್‌ಗೆ ಆಯ್ಕೆ ಆಗಿದ್ದಾರೆ. ಸಿ.ಎಸ್. ಗುರುಮಲ್ಲಪ್ಪ ಹಾಗೂ ಕೋಡಿಮೋಳೆ ರಾಜಶೇಖರ್ ಸೋಲು ಅನುಭವಿಸಿದ್ದಾರೆ.

ಕ್ಷೇತ್ರವಾರು ಅಭ್ಯರ್ಥಿಗಳ ಮತ ಗಳಿಕೆ ವಿವರ

ಜಿಲ್ಲೆಯ ಮಹಿಳಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶೀಲಾ ಪುಟ್ಟರಂಗಶೆಟ್ಟಿ–56, ಜಿ.ಪ್ರಮೋದಾ–28 ಪಡೆದರೆ, ಚಾಮರಾಜನಗರ ತಾಲೂಕು ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಎಸ್.ಬಸವರಾಜು–53, ಸದಾಶಿವಮೂರ್ತಿ–40, ಕೆ.ಆರ್.ಬಸವರಾಜು–37, ಎಂ.ಎಸ್.ರವಿಶಂಕರ್–35, ಬಿ.ಕೆ. ರವಿಕುಮಾರ್–26, ಆಲೂರು ಸಿ.ರಾಜಶೇಖರ್–22, ಕೆ.ಎಲ್.ರವಿಕುಮಾರ್–5, ಕೋಡಿಮೋಳೆ ರಾಜಶೇಖರ್– 3 ಮತ ಗಳಿಸಿದ್ದಾರೆ.

ಗುಂಡ್ಲುಪೇಟೆ ತಾಲೂಕು ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಎಸ್. ನಂಜುಂಡಪ್ರಸಾದ್–62, ಎಂ.ಪಿ. ಸುನೀಲ್–44, ಡಿ.ಮಾದಪ್ಪ (ಕಣ್ಣೇಗಾಲ ಸ್ವಾಮಿ)–42, ಎಂ.ಸುಜೇಂದ್ರ(ಸುಜಿ)–42, ಹೆಚ್.ಎನ್. ನಟೇಶ್ 41 ಮತ ಪಡೆದಿದ್ದಾರೆ.

ಕೊಳ್ಳೇಗಾಲ ತಾಲೂಕು ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಂ.ನಂಜುಂಡಸ್ವಾಮಿ–26, ಎಂ.ಪುಟ್ಟಣ್ಣ–20 ಮತ ಪಡೆದರೆ, ಹನೂರು ತಾಲೂಕು ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್.ಮಹದೇವಸ್ವಾಮಿ–46, ಶಾಹುಲ್ ಅಹಮ್ಮದ್(ತಾರೀಖ್)–40, ಸಿ.ಎಸ್.ಗುರುಮಲ್ಲಪ್ಪ–36, ಬಸವರಾಜು–11, ಎಂ.ಮಹದೇವಪ್ರಭು–6, ಸಿ.ಸೋಮಶೇಖರ್–4 ಮತ ಪಡೆದಿದ್ದಾರೆ. ಯಳಂದೂರು ತಾಲೂಕಿನ ಆಯ್ಕೆ ಬಯಸಿ ಸ್ಪರ್ಧಿಸಿದ್ದ ವೈ.ಸಿ.ನಾಗೇಂದ್ರ–7, ಜೆ.ಯೋಗೇಶ್–6 ಮತ ಗಳಿಸಿದ್ದಾರೆ.

ಶೇ.100 ಮತದಾನ

ಚಾಮರಾಜನಗರ: ಚಾಮುಲ್ ಆಡಳಿತ ಮಂಡಳಿಯ 9 ನಿರ್ದೇಶಕ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಶೇ.100 ರಷ್ಟು ಮತದಾನ ನಡೆಯಿತು.

ಜಿಲ್ಲಾ ಮಹಿಳಾ ಕ್ಷೇತ್ರದ 84 ಮತದಾರರು ಸೇರಿದಂತೆ ಜಿಲ್ಲೆಯಲ್ಲಿ 5 ತಾಲೂಕಿನ ಒಟ್ಟು 449 ಮತದಾರರು ಮತ ಚಲಾಯಿಸಲು ಅರ್ಹರಾಗಿದ್ದರು. ಈ ಎಲ್ಲಾ 449 ಮತದಾರರು ಕುದೇರಿನಲ್ಲಿರುವ ಚಾಮುಲ್‌ಗೆ ಆಗಮಿಸಿ ಮತ ಚಲಾಯಿಸಿದರು. ಈ ಪೈಕಿ ಚಾಮರಾಜನಗರ ತಾಲೂಕಿನ ಎಲ್ಲಾ 116 ಮತದಾರರು ಮತ ಚಲಾಯಿಸಿದರು. ಇದರಲ್ಲಿ 2 ಮತಗಳು ತಿರಸ್ಕೃತವಾದವು. ಎಂದು ಜಿಲ್ಲಾ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಕೆ.ಎ. ರಾಜೇಂದ್ರ ಪ್ರಸಾದ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಉಳಿದಂತೆ ಎಲ್ಲಾ ಮತಗಳು ಸಿಂಧುವಾಗಿವೆ ಎಂದು ಅವರು ಹೇಳಿದರು.

ಚಾಮರಾಜನಗರ ತಾಲೂಕಿನ 2 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 1 ಸ್ಥಾನದಲ್ಲಿ ಬಿಜೆಪಿ ಬೆಂಬಲಿತ, ಮತ್ತೊಂದು ಸ್ಥಾನದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಗೆದ್ದಿದ್ದಾರೆ. ಹನೂರು ತಾಲೂಕಿನ 2 ಸ್ಥಾನದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ತಲಾ ಒಂದೊಂದು ಸ್ಥಾನದಲ್ಲಿ ಜಯ ಗಳಿಸಿವೆ.

ಗುಂಡ್ಲುಪೇಟೆ ತಾಲೂಕಿನ 2 ಸ್ಥಾನಗಳ ಪೈಕಿ 1 ಸ್ಥಾನದಲ್ಲಿ ಕಾಂಗ್ರೆಸ್ ಬೆಂಬಲಿತ ಮತ್ತೊಂದು ಸ್ಥಾನದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಇನ್ನುಳಿದಂತೆ ಯಳಂದೂರು ತಾಲೂಕಿನ 1 ಸ್ಥಾನದಲ್ಲಿ ಬಿಜೆಪಿ ಬೆಂಬಲಿತ, ಕೊಳ್ಳೇಗಾಲ ತಾಲೂಕಿನ 1 ಸ್ಥಾನದಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯ ಗಳಿಸಿದ್ದಾರೆ.

ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ

ಚಾಮರಾಜನಗರ, ಜೂ.14(ಎಸ್‌ಎಸ್)–ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಯುವಕನೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ರೈಲು ನಿಲ್ದಾಣದ ಬಳಿ ನಡೆದಿದೆ.

ಚಾಮರಾಜನಗರ ತಾಲೂಕಿನ ಉತ್ತುವಳ್ಳಿ ಗ್ರಾಮದ ಗೋವಿಂದರಾಜು (32) ಆತ್ಮಹತ್ಯೆ ಮಾಡಿಕೊಂಡವರು. ಮೃತ ಗೋವಿಂದರಾಜು ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದು, ಇದರಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾರೆ. ಬೆಂಗಳೂರು, ಮೈಸೂರು, ಚಾಮರಾಜನಗರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರ ಬಗ್ಗೆ ಕುಟುಂಬದವರು ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ. ನಿಲ್ದಾಣದ ಸಮೀಪ ಗೋವಿಂದರಾಜು ಅವರ ತಲೆ ಮತ್ತು ಕೈ ದೇಹದಿಂದ ಬೇರ್ಪಟ್ಟ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ಈ ಸಂಬಂಧ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕುಟುಂಬದವರಿಗೆ ದೇಹ ಹಸ್ತಾಂತರಿಸಲಾಯಿತು. ಅಂತ್ಯಕ್ರಿಯೆ ನೆರವೇರಿಸಲಾಗಿದೆ.


ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಪೊಲೀಸ್ ಠಾಣೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳ್‌ಶೆಟ್ಟಿ ಹಾಗೂ ಸಿಬ್ಬಂದಿ ಹಾಗೂ ಸಸಿ ನೆಟ್ಟರು. ಫೋಟೋ: ಕಿರಣ್ ಬೇಗೂರು.

ಮಾದಕ ವ್ಯಸನದಿಂದ ದೂರವಿದ್ದರೆ ಬದುಕು

ಹನೂರು, ಜೂ.14–ಮಾದಕ ವ್ಯಸನದಿಂದ ಕುಟುಂಬಗಳು ಬೀದಿ ಪಾಲಾಗುವುದಲ್ಲದೆ, ಅಪರಾಧ ಚಟುವಟಿಕೆಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಾದಕ ವ್ಯಸನದಿಂದ ದೂರವಿರಬೇಕೆಂದು ಮಲೆ ಮಹದೇಶ್ವರಬೆಟ್ಟ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸಿದ್ದರಾಜು ತಿಳಿಸಿದರು.

ಬೆಟ್ಟದ ಮಹದೇಶ್ವರ ಕಾಲೇಜಿನಲ್ಲಿ 2022ರ ಮಾದಕ ವ್ಯಸನ ಮತ್ತು ಅಕ್ರಮ ಕಳ್ಳಸಾಗಾಣಿಕೆ ವಿರುದ್ಧ ಅಂತಾರಾಷ್ಟ್ರೀಯ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾದಕ ದ್ರವ್ಯಗಳ ಸಾಗಾಣಿಕೆ ಕೂಡ ಅಪರಾಧವಾಗಿದ್ದು, ಕಾನೂನಿನಡಿ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದರು.



ಬೆಟ್ಟ ಠಾಣೆಯ ರಾಜಪ್ಪ ಮಾತನಾಡಿ, ಮಾದಕ ವ್ಯಸನಕ್ಕೆ ತುತ್ತಾಗಿ ಅನೇಕ ಕುಟುಂಬಗಳು ತೊಂದರೆಗೆ ಸಿಲುಕಿವೆ. ಮನೆ, ಆಸ್ತಿ ಕಳೆದುಕೊಂಡು ಕೊನೆಗೆ ಪ್ರಾಣವನ್ನು ಕಳೆದುಕೊಂಡಿರುವ ಉದಾಹರಣೆಗಳಿವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಇಂತಹ ದುಶ್ಚಟಗಳಿಗೆ ಬಲಿಯಾಗಬಾರದು ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲರಾದ ಮಹದೇವಪ್ರಭು ಮಾತನಾಡಿದರು. ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಬೆಟ್ಟ ಠಾಣೆಯ ಸಿಬ್ಬಂದಿ ಮಂಜು, ಶಶಿಕುಮಾರ್, ಲಕ್ಷ್ಮಿ, ಕಾಲೇಜು ಉಪನ್ಯಾಸಕರು, ವಿದ್ಯಾರ್ಥಿಗಳಿದ್ದರು.

ಇಂದು ವಾರ್ಷಿಕ ವಿಶೇಷ ಶಿಬಿರದ ಸಮಾರೋಪ

ಮಡಿಕೇರಿ, ಜೂ.14– ಮಂಗಳೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ 2021–22 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಜೂ.15 ರಂದು ಮಧ್ಯಾಹ್ನ 3 ಗಂಟೆಗೆ ನಗರಸಭಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಲಿದೆ.

ಕರ್ನಾಟಕ ರಾಜ್ಯ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿಯ ಅಧ್ಯಕ್ಷ ರವಿಕುಶಾಲಪ್ಪ, ಸ.ಪ್ರ.ದ. ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಡಿ.ನಿರ್ಮಲ, ನಗರಸಭೆ ಪೌರಾಯುಕ್ತ ರಾಮದಾಸ್, ನಗರಸಭೆ ಹಿ.ಪ್ರಾ.ಶಾಲೆಯ ಮುಖ್ಯ ಶಿಕ್ಷಕಿ ಸರೋಜಿನಿ ಇತರರು ಪಾಲ್ಗೊಳ್ಳಲಿದ್ದಾರೆ.

ಜೂ.18, ಚೆಟ್ಟಳ್ಳಿಯಲ್ಲಿ ಡಿಸಿ ಗ್ರಾಮ ವಾಸ್ತವ್ಯ

ಮಡಿಕೇರಿ, ಜೂ.14– ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ ಗ್ರಾಮ ವಾಸ್ತವ್ಯ ಕಾರ್ಯಕ್ರಮವು ಜೂ.18 ರಂದು ಬೆಳಗ್ಗೆ 10 ಗಂಟೆಗೆ ಚೆಟ್ಟಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನರೇಂದ್ರ ಮೋದಿ ರೈತ ಸಹಕಾರ ಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಸೋಮವಾರಪೇಟೆ: ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಕೊಡ್ಲಿಪೇಟೆ ಹೋಬಳಿಯ ದೊಡ್ಡಭಂಡಾರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಜೂ. 18ರ ಶನಿವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ತಹಶೀಲ್ದಾರ್ ಗೋವಿಂದರಾಜು ತಿಳಿಸಿದ್ದಾರೆ.

ಜೂ.20, ಮಾಜಿ ಸೈನಿಕರ ಸಭೆ

ನಾಪೋಕ್ಲು, ಜೂ.14– ಮಾಜಿ ಸೈನಿಕರ ಸಂಘದ ವತಿಯಿಂದ ಜೂ.20ರಂದು ಬೆಳಗ್ಗೆ 10.30 ಗಂಟೆಗೆ ನಾಪೋಕ್ಲು ಮಹಿಳಾ ಸಮಾಜದಲ್ಲಿ ಸಭೆ ನಡೆಯಲಿದೆ. ಪೊಲೀಸ್ ಇಲಾಖೆಯಿಂದ ಸಭೆ ನಡೆಸಲು ಸೂಚನೆ ಬಂದ ಕಾರಣ ಆ ದಿನ ಮಾಜಿ ಸೈನಿಕರ ಮತ್ತು ವಿಧವೆಯರ, ಮಕ್ಕಳ ಸಮಸ್ಯೆ ಕುರಿತು ಚರ್ಚೆ ನಡೆಸಲಿದ್ದು, ನಾಪೋಕ್ಲು ವಲಯಕ್ಕೆ ಸೇರಿದ ಎಲ್ಲಾ ಮಾಜಿ ಸೈನಿಕರು ಮತ್ತು ವಿಧವೆಯರು ತಪ್ಪದೇ ಸಭೆಗೆ ಹಾಜರಾಗುವಂತೆ ಮಾಜಿ ಸೈನಿಕರ ಸಂಘದ ಆಡಳಿತ ಮಂಡಳಿ ತಿಳಿಸಿದೆ.

ಸಮುದಾಯದ ಬೆಳವಣಿಗೆಗೆ ಶ್ರಮಿಸಲು ಒಕ್ಕಲಿಗರಿಗೆ ಕರೆ

ಸೋಮವಾರಪೇಟೆ, ಜೂ.14– ಒಕ್ಕಲಿಗ ಜನಾಂಗದ ಉಪಜಾತಿಗಳು ಸಂಕುಚಿತ ಮನೋಭಾವ ಬದಿಗೊತ್ತಿ ಒಕ್ಕಲಿಗ ಸಮಾಜ ಒಂದೇ ಎನ್ನುವ ದೃಢಸಂಕಲ್ಪದೊಂದಿಗೆ ಸಮುದಾಯದ ಬೆಳವಣಿಗೆಗೆ ಶ್ರಮಿಸಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಇಲ್ಲಿನ ಒಕ್ಕಲಿಗರ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಸೋಮವಾರಪೇಟೆ ತಾಲೂಕು ಒಕ್ಕಲಿಗರ ಸಂಘದ ಸುವರ್ಣ ಮಹೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಸಮುದಾಯದ ಮಹಿಳೆಯರನ್ನು ಕೇವಲ ಅಡುಗೆ ಮನೆಗೆ ಸೀಮಿತಗೊಳಿಸಬಾರದು. ನಾವು ನಮ್ಮ ಜನಾಂಗದ ಮಕ್ಕಳನ್ನು ಸಮುದಾಯದ ಶಕ್ತಿಗಳನ್ನಾಗಿ ಬೆಳೆಸಬೇಕು. ಅವರು ಆಸ್ತಿ ಅಂತಸ್ತುಗಳ ಗುಲಾಮರಾಗಬಾರದು. ಉತ್ತಮ ಸಂಸ್ಕಾರವನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಸುವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಲಾದ ದ್ವಾರವನ್ನು ಉದ್ಘಾಟಿಸಿದ ಸಂಸದ ಪ್ರತಾಪ್‌ಸಿಂಹ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಒಕ್ಕಲಿಗ ಸಮುದಾಯದ ನಾಯಕರಿಗೆ ಹೆಚ್ಚಿನ ಅವಕಾಶಗಳನ್ನು ನೀಡಿದೆ. ರಾಜ್ಯದಲ್ಲಿ ಹೆಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ, ಕುಮಾರಸ್ವಾಮಿ, ಸದಾನಂದಗೌಡ ಸೇರಿದಂತೆ ಇತರ ರಾಜಕೀಯ ಧುರೀಣರು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಪ್ರಸ್ತುತ ಸರಕಾರದಲ್ಲಿ ಪ್ರಬಲ ಖಾತೆಯನ್ನು ಹೊಂದಿರುವ ಆರ್. ಅಶೋಕ್ ಮತ್ತು ಉಪ ಮುಖ್ಯಮಂತ್ರಿ ಅಶ್ವಥನಾರಾಯಣ ಕೂಡ ಉತ್ತಮ ಕೆಲಸ ಮಾಡುತ್ತಿದ್ದಾರೆ. ಪಠ್ಯಪುಸ್ತಕ ಪರಿಷ್ಕರಣ ಸಮಿತಿಯ ವಿಚಾರದಲ್ಲಿ ಯಾವುದೇ ಗೊಂದಲ ಬೇಡ. ಕುವೆಂಪು ರಚಿತ ಪಾಠಕ್ಕೆ ಆದ್ಯತೆ ನೀಡಲಾಗಿದೆ. ಗದ್ಯ, ಪದ್ಯ, ಕವನ ಯಾವುದಕ್ಕೂ ತೊಂದರೆಯಾಗಿಲ್ಲ ಎಂದರು.


ಸೋಮವಾರಪೇಟೆ ತಾಲೂಕು ಒಕ್ಕಲಿಗರ ಸಂಘದ ಸುವರ್ಣ ಮಹೋತ್ಸವವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ವಿಶ್ವಮಾನವ ಕುವೆಂಪು ಆಂಗ್ಲಮಾಧ್ಯಮ ಶಾಲಾ ಕೊಠಡಿಗಳನ್ನು ಉದ್ಘಾಟಿಸಿದ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಶೈಕ್ಷಣಿಕ, ಆರ್ಥಿಕವಾಗಿ ಸಮಾಜವನ್ನು ಕಟ್ಟುವ ಕೆಲಸ ಆಯಾ ಸಮುದಾಯದಿಂದ ಆಗಬೇಕಾಗಿದೆ. ಸಮಾಜದ ವಿಚಾರ ಬಂದಾಗ ಯಾವುದೇ ನಾಯಕರು ಪಕ್ಷಾತೀತವಾದ ಕೆಲಸವನ್ನು ಮಾಡಬೇಕು. ಒಕ್ಕಲಿಗರ ಅಭಿವೃದ್ಧಿ ನಿಗಮದ ಮೂಲಕ ವಿಶ್ವಮಾನವ ಕುವೆಂಪು ಶಾಲೆಗೆ ವಸತಿ ನಿಲಯವನ್ನು ಮಂಜೂರು ಮಾಡಲು ಸರಕಾರದ ಮಟ್ಟದಲ್ಲಿ ಪ್ರಯತ್ನಿಸಿದ್ದೇನೆ ಎಂದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಈ ಹಿಂದೆ ಸಮಾಜದ ಆಡಳಿತ ಮಂಡಳಿಯಲ್ಲಿ ಒಕ್ಕೊರಲ ಆಯ್ಕೆ ನಡೆಯುತ್ತಿತ್ತು. ಆದರೆ, ಇತ್ತೀಚೆಗೆ ಪ್ರತಿಯೊಂದು ಸಮುದಾಯದಲ್ಲೂ ಚುನಾವಣೆಯ ಮೂಲಕ ಆಯ್ಕೆ ನಡೆಯುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಎಲ್ಲಾ ಸಮುದಾಯದಲ್ಲೂ ಬಡವರಿದ್ದಾರೆ. ಇಂತಹವರನ್ನು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮೇಲಕ್ಕೆತ್ತುವ ಕೆಲಸ ಸಮಾಜದಿಂದಾಗಬೇಕೆಂದರು.

ಒಕ್ಕಲಿಗರ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಸುರಭಿ ರಘು ಮಾತನಾಡಿ, ಒಕ್ಕಲಿಗ ಜನಾಂಗದ ಶ್ರೇಯೋಭಿವೃದ್ಧಿಗಾಗಿ ನಿಗಮವು ಕಾರ್ಯೋನ್ಮುಖವಾಗಿದ್ದು, ಸಮಾಜದ ವಿದ್ಯಾರ್ಥಿಗಳಿಗೆ ವಸತಿ ನಿಲಯ, ಸ್ವಾವಲಂಬಿ ಜೀವನಕ್ಕೆ ವಾಹನ ಖರೀದಿಗೆ ಸಾಲ, ಹೆಣ್ಣು ಮಕ್ಕಳ ವಿದ್ಯಾಭ್ಯಾಸ, ಗಂಗಾಜಲ ಯೋಜನೆಯಲ್ಲಿ ಕೊಳವೆ ಬಾವಿ ಸಂಪರ್ಕ ಸೇರಿದಂತೆ ಎಲ್ಲ ಸಹಾಯವನ್ನು ನೀಡಲಾಗುವುದು ಎಂದು ಹೇಳಿದರು.

ಅಧ್ಯಕ್ಷತೆಯನ್ನು ಒಕ್ಕಲಿಗರ ಸಮಾಜದ ಅಧ್ಯಕ್ಷ ಎ.ಆರ್. ಮುತ್ತಣ್ಣ ವಹಿಸಿದ್ದರು. ವೇದಿಕೆಯಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ದಾನಿಗಳಾದ ಬಿ.ಈ. ರಾಮಚಂದ್ರ, ಮಾಜಿ ಸಚಿವ ಬಿ.ಎ. ಜೀವಿಜಯ, ವಿಧಾನಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ, ಕಾಂಗ್ರೆಸ್ ಮುಖಂಡ ಡಾ. ಮಂಥರ್ ಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಹರಪಳ್ಳಿ ರವೀಂದ್ರ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಚಂದ್ರಕಲಾ ಪ್ರಸನ್ನ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ. ಚಂಗಪ್ಪ, ತಾಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಸಿ.ಕೆ. ರಾಘವ, ಸ್ಥಳ ದಾನಿಗಳಾದ ಸಿ.ಕೆ. ಸುದೇವ ಮತ್ತಿತರರು ಇದ್ದರು.

ಕಾರ್ಯಕ್ರಮಕ್ಕೂ ಮುನ್ನ ಇಲ್ಲಿನ ವಿವೇಕಾನಂದ ವೃತ್ತದಿಂದ ಸುಗ್ಗಿಕುಣಿತ, ಸಾಂಪ್ರದಾಯಕ ಉಡುಗೆಯನ್ನು ತೊಟ್ಟ ಮಹಿಳೆಯರಿಂದ ಪೂರ್ಣಕುಂಭ ಸ್ವಾಗತದ ಮೆರವಣಿಗೆ ನಡೆಯಿತು. ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಗೌರವಿಸಲಾಯಿತು.

ಕುಶಾಲನಗರ: ಶಾಲಾ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ



ಕುಶಾಲನಗರ, ಜೂ.14– ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಕರ್ನಾಟಕ ಕಾವಲುಪಡೆ ಮತ್ತು ಇಕೋ ಕ್ಲಬ್ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಶಾಲಾ ಆವರಣದಲ್ಲಿ ಗಿಡನೆಟ್ಟು ನೀರು ಹಾಕಿದ ವಲಯ ಅರಣ್ಯಾಧಿಕಾರಿ ಶಿವರಾಮ್, ವಿದ್ಯಾರ್ಥಿಗಳು ತಮ್ಮ ಪರಿಸರದ ಸುತ್ತಮುತ್ತ ಗಿಡಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕರ್ನಾಟಕ ಕಾವಲುಪಡೆ ಅಧ್ಯಕ್ಷ ಎಂ.ಕೃಷ್ಣ ಮಾತನಾಡಿದರು. ಮುಖ್ಯ ಶಿಕ್ಷಕಿ ಪುಷ್ಪ ಮಾತನಾಡಿ, ಮಕ್ಕಳು ಸ್ವಚ್ಛತೆ ಹಾಗೂ ಪರಿಸರ ಕಾಳಜಿ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭ ಉಪ ವಲಯ ಅರಣ್ಯಾಧಿಕಾರಿಗಳಾದ ವಿಲಾಸ್, ಅನಿಲ್ ಡಿಸೋಜ, ಸಿಬ್ಬಂದಿ ನವೀನ್, ಸಹ ಶಿಕ್ಷಕರಾದ ಬಸವರಾಜ್, ಶಿವಣ್ಣ, ನವೀನ್ ತುಳಸಿ, ವೇಣುಗೋಪಾಲ್, ರಶ್ಮಿ ಪ್ರಭು ಇದ್ದರು.

ಶಾಲಾ ಸಂಸತ್ ಚುನಾವಣೆ

ಸೋಮವಾರಪೇಟೆ, ಜೂ.14– ಇಲ್ಲಿಗೆ ಸಮೀಪದ ನೇರುಗಳಲೆ ಪ್ರೌಢಶಾಲೆಯಲ್ಲಿ ಮತದಾರರ ಸಾಕ್ಷರತಾ ಕ್ಲಬ್ ವತಿಯಿಂದ ಶಾಲಾ ಸಂಸತ್ತು ಚುನಾವಣೆ ನಡೆಯಿತು.

ಸಾರ್ವತ್ರಿಕ ಚುನಾವಣೆಯಲ್ಲಿ ಹೇಗೆ ವಯಸ್ಕರು ಮತದಾನ ಮಾಡುತ್ತಾರೋ ಹಾಗೆಯೇ ಮತದಾನ ಮಾಡಿಸಿದ್ದು ವಿದ್ಯಾರ್ಥಿಗಳಿಗೆ ಚುನಾವಣೆಯ ಪರಿಚಯ ಮಾಡಿಕೊಳ್ಳಲು ನೆರವಾಯಿತು. ಗುರುತಿನ ಪತ್ರಕ್ಕಾಗಿ ಎಲ್ಲಾ ವಿದ್ಯಾರ್ಥಿಗಳು ಆಧಾರ್‌ಕಾರ್ಡ್ ತಂದಿದ್ದು ವಿಶೇಷವಾಗಿತ್ತು ಎರಡು ಮೊಬೈಲ್ ಎಲೆಕ್ಟ್ರಾನಿಕ್ ಮತಯಂತ್ರಗಳ ಮೂಲಕ ವಿದ್ಯಾರ್ಥಿಗಳಿಗೆ ಮತದಾನ ಮಾಡಿಸಲಾಯಿತು. ಸಂದರ್ಭ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯವರು ಉಪಸ್ಥಿತರಿದ್ದರು.

ಹೈಕೋರ್ಟ್ ಹೆಚ್ಚುವರಿ ನ್ಯಾಯಾಧೀಶರಾಗಿ ಕೊಡಗಿನ ಸಿ.ಎಂ. ಪೂಣಚ್ಚ ಪ್ರಮಾಣವಚನ ಸ್ವೀಕಾರ

ಮಡಿಕೇರಿ, ಜೂ.14– ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಾಧೀಶರಾಗಿ ನಿಯುಕ್ತಿಗೊಂಡಿರುವ ಕೊಡಗಿನ ಚೆಪ್ಪುಡೀರ ಎಂ.ಪೂಣಚ್ಚ ಅವರು ಪ್ರಮಾಣ ವಚನ ಸ್ವೀಕರಿಸಿದರು.



ಕೋರ್ಟ್ ಹಾಲ್ 1ರಲ್ಲಿ ನಡೆದ ಸಮಾರಂಭದಲ್ಲಿ ಪೂಣಚ್ಚ ಅವರಿಗೆ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅಶ್ವಥಿ ಅವರು ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ವಿವಿಧ ನ್ಯಾಯಾಧೀಶರುಗಳು ಇನ್ನಿತರ ಪ್ರಮುಖರು ಪಾಲ್ಗೊಂಡಿದ್ದರು. ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶರಾಗಿ ಪೂಣಚ್ಚ ಅವರನ್ನು ನೇಮಿಸುವಂತೆ ಸುಪ್ರೀಂಕೋರ್ಟ್ ಕೊಲಿಜಿಯಂ ಶಿಫಾರಸ್ಸು ಮಾಡಿದ್ದು, ಜೂ.8 ಕೇಂದ್ರ ಸರ್ಕಾರದ ಮೂಲಕ ಅಧಿಕೃತ ಆದೇಶವಾಗಿತ್ತು. ಇವರು ತಿತಿಮತಿ ಸನಿಹದ ನೊಕ್ಯ–ಸಿದ್ದಾಪುರ ಗ್ರಾಮದವರಾಗಿದ್ದಾರೆ.

ಯಡವನಾಡು ಅರಣ್ಯದಲ್ಲಿ ಬೀಜೋತ್ಸವ ಕಾರ್ಯಕ್ರಮ

ಸೋಮವಾರಪೇಟೆ, ಜೂ.14– ಕರ್ನಾಟಕ ಅರಣ್ಯ ಇಲಾಖೆ ಕೊಡಗು ವೃತ್ತ, ಜಿಲ್ಲಾ ಸಾಮಾಜಿಕ ಅರಣ್ಯ ವಿಭಾಗ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕೊಡಗು ಜಿಲ್ಲಾ ಶಾಖೆ, ಇಕೋ ಕ್ಲಬ್ ಜಿಲ್ಲಾ ಘಟಕದಿಂದ ಇಲ್ಲಿಗೆ ಸಮೀಪದ ಯಡವನಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಾಲು ಮರದ ತಿಮ್ಮಕ್ಕ ಇಕೋ ಕ್ಲಬ್ ಹಾಗೂ ಗ್ರಾಮ ಅರಣ್ಯ ಸಮಿತಿ ಆಶ್ರಯದಲ್ಲಿ ಬೀಜೋತ್ಸವ ಕಾರ್ಯಕ್ರಮ ನಡೆಯಿತು.

ಯಡವನಾಡು ಅರಣ್ಯ ಪ್ರದೇಶದಲ್ಲಿ ಬೀಜ ಬಿತ್ತೋಣ, ಅರಣ್ಯ ಬೆಳೆಸೋಣ ಘೋಷಣೆಯಡಿ ಒಂದು ವಾರ ಕಾಲ ಹಮ್ಮಿಕೊಳ್ಳಲಾಗಿದ್ದ ಬಿತ್ತೋತ್ಸವ ಅಭಿಯಾನದಲ್ಲಿ ಶಾಲಾ ಮಕ್ಕಳು, ಶಿಕ್ಷಕರು, ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಸ್ವಯಂಸೇವಕರು ಬಿತ್ತನೆ ಬೀಜ ಬಿತ್ತಿದರು. ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವ ಕುರಿತು ವಿವರಿಸಿದರು.

ಮಡಿಕೇರಿ ಸಾಮಾಜಿಕ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ ಎಚ್.ಪೂರ್ಣಿಮಾ, ಸಾಮಾಜಿಕ ವಲಯ ಅರಣ್ಯಾಧಿಕಾರಿ ಟಿ.ಎಂ.ರವೀಂದ್ರ, ಶಾಲೆಯ ಮುಖ್ಯ ಶಿಕ್ಷಕಿ ಎಸ್.ಮಮತ, ಇಕೋ ಕ್ಲಬ್ ಉಸ್ತುವಾರಿ ಟಿ.ಕೆ.ಬಸವರಾಜ, ಕಾವಲು ಪಡೆ ಜಿಲ್ಲಾಧ್ಯಕ್ಷ ಕೃಷ್ಣ, ಆಶ್ರಮ ಶಾಲೆಯ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.


ವಿರಾಜಪೇಟೆ ಸಮೀಪ ಬಿ.ಶೆಟ್ಟಿಗೇರಿ ಗ್ರಾಪಂನ ಕುಟ್ಟಂದಿ ಕೆ.ಬಿ.ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಮಾಜ ಸೇವಕ ಕದ್ದಣಿಯಂಡ ಹರೀಶ್ ಬೋಪಣ್ಣ 500 ನೋಟ್ ಪುಸ್ತಕವನ್ನು ವಿತರಿಸಿದರು. ಗ್ರಾಪಂ ಸದಸ್ಯ ಕೊಲ್ಲೀರ ಬೋಪಣ್ಣ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕಡೇಮಾಡ ಪೊನ್ನಪ್ಪ, ನಿರ್ದೇಶಕರಾದ ಉಮೇಶ್ ಕೇಚಮಯ್ಯ, ಡೇವಿಡ್, ದಿನೇಶ್, ಚೇಂದಂಡ ಜಗನ್, ಶಾಲಾ ಮುಖ್ಯೋಪಾಧ್ಯಾಯಿನಿ ದೀಪ ಮುಂತಾದವರು ಉಪಸ್ಥಿತರಿದ್ದರು.

ಮೂರ್ನಾಡಿನಲ್ಲಿ ರಕ್ತದಾನ ದಿನಾಚರಣೆ

ನಾಪೋಕ್ಲು, ಜೂ.14– ಮೂರ್ನಾಡಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ರಕ್ತದಾನ ದಿನ ಆಚರಿಸಲಾಯಿತು.



ಕಾಲೇಜಿನ ವಾಣಿಜ್ಯ ಉಪನ್ಯಾಸಕ ನಾಟೋಳಂಡ ನವೀನ್ ದಿನದ ಮಹತ್ವವನ್ನು ತಿಳಿಸಿ, ಇಂದು ಪ್ರತಿನಿತ್ಯ 11 ಮಿಲಿಯನ್ ಯೂನಿಟ್ ರಕ್ತ ಸಂಗ್ರಹವಾಗುತ್ತಿದೆ. ಆದರೆ 15 ಮಿಲಿಯನ್ ಯುನಿಟ್ ರಕ್ತ ಬೇಕಾಗುತ್ತದೆ ಎಂದು ತಿಳಿಸಿದರು. ಪ್ರತಿ ಆರೋಗ್ಯವಂತ ವ್ಯಕ್ತಿ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ಹೆಣ್ಣು ಮಕ್ಕಳು ಪ್ರತಿ 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ಈ ರಕ್ತವು 24 ರಿಂದ 48 ಗಂಟೆಗಳ ಒಳಗೆ ಪುನಃ ರಕ್ತದಾನ ಮಾಡಿದವರ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ತಾವುಗಳು ಕೂಡ ಅವಶ್ಯಕತೆ ಇರುವವರಿಗೆ ರಕ್ತವನ್ನು ನೀಡಿ ಮಾನವೀಯತೆಯನ್ನು ಮೆರೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಪಟ್ಟಡ ಪೂವಣ್ಣ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಒಂದನೇ ಪುಟದಿಂದ

ಇಂದು ಮತ ಎಣಿಕೆ

ತಲುಪದಿದ್ದಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆ ಆರಂಭಿಸಿ ಕಡಿಮೆ ಮತ ಪಡೆದಿರುವ ಅಭ್ಯರ್ಥಿಗಳನ್ನು ಎಲಿಮಿನೇಟ್ ಮಾಡಿ ಅವರ ಮತಗಳನ್ನು ಕೊರತೆ ಇರುವ ಅಭ್ಯರ್ಥಿಗಳಿಗೆ ಸೇರಿಸುತ್ತಾ ಹೋಗಿ ಎರಡನೇ ಪ್ರಾಶಸ್ತ್ಯದ ಮತಗಳಲ್ಲಿ ಖೋಟಾ ತಲುಪಿದ ಅಭ್ಯರ್ಥಿ ವಿಜೇತರೆಂದು ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ತಿಳಿಸಿದರು.

ಮತ ಎಣಿಕೆ ಕಾರ್ಯಕ್ಕೆ ಮಹಾರಾಣಿ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ 28 ಟೇಬಲ್‌ಗಳನ್ನು ಅಳವಡಿಸಲಾಗಿದ್ದು, ಪ್ರತೀ ಟೇಬಲ್‌ಗೆ ಒಬ್ಬ ಮೇಲ್ವಿಚಾರಕ, ಇಬ್ಬರು ಮತ ಎಣಿಕೆ ಸಹಾಯಕರಂತೆ ಒಟ್ಟು 90 ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಅಭ್ಯರ್ಥಿಗಳ ಪರವಾಗಿ ಒಬ್ಬರಂತೆ ಮತ ಎಣಿಕೆ ಟೇಬಲ್‌ಗಳಿಗೆ ಏಜೆಂಟರನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ. ಮತ ಎಣಿಕೆ ಕೇಂದ್ರದಲ್ಲಿ ಸಿಸಿ ಕ್ಯಾಮರಾ ಜೊತೆಗೆ ಎಣಿಕೆ ಪ್ರಕ್ರಿಯೆಯನ್ನು ವೀಡಿಯೋ ಮಾಡಲು ವ್ಯವಸ್ಥೆ ಮಾಡಲಾಗಿದೆ. ಸ್ಥಳದಲ್ಲಿ ಅಗ್ನಿಶಾಮಕ ದಳದ ವಾಹನ, ಸಿಬ್ಬಂದಿ, ಆಂಬುಲೆನ್ಸ್‌ನೊಂದಿಗೆ ಆರೋಗ್ಯ ಸಿಬ್ಬಂದಿಗಳನ್ನೂ ನಿಯೋಜಿಸಲಾಗಿದೆ. ಕೇಂದ್ರದ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದು, ಮತ ಎಣಿಕೆ ಅಧಿಕಾರಿ, ಸಿಬ್ಬಂದಿ, ಅಭ್ಯರ್ಥಿಗಳು, ಏಜೆಂಟರು, ಪೊಲೀಸರು, ಮಾಧ್ಯಮ ಪ್ರತಿನಿಧಿಗಳನ್ನು ಹೊರತುಪಡಿಸಿ ಬೇರೆ ಯಾರೂ ಕೇಂದ್ರಕ್ಕೆ ಪ್ರವೇಶಿಸದಂತೆ ಎಚ್ಚರ ವಹಿಸಲಾಗಿದೆ. ಮತ ಎಣಿಕೆ ಕೇಂದ್ರಕ್ಕೆ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಮೂವರು ಎಸಿಪಿಗಳು, 8 ಮಂದಿ ಇನ್ಸ್‌ಪೆಕ್ಟರ್‌ಗಳು, 12 ಸಬ್ ಇನ್ಸ್‌ಪೆಕ್ಟರ್ ಗಳು, 15 ಎಎಸ್‌ಐಗಳು, 120 ಮಂದಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗುತ್ತಿದೆ. ಚುನಾವಣಾ ವೀಕ್ಷಕರಾದ ಪೊನ್ನುರಾಜ್ ಅವರು ಮತ ಎಣಿಕಾ ಕೇಂದ್ರದಲ್ಲಿ ಉಪಸ್ಥಿತರಿದ್ದು, ಪರಿವೀಕ್ಷಣೆ ನಡೆಸಲಿದ್ದು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೂ ಸಹಾಯಕ ಚುನಾವಣಾಧಿಕಾರಿಗಳಾಗಿ ಹಾಜರಿದ್ದು, ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಡಾ.ಜಿ.ಸಿ.ಪ್ರಕಾಶ್ ತಿಳಿಸಿದರು. ಮತ ಪೆಟ್ಟಿಗೆಗಳನ್ನು ಸ್ಟ್ರಾಂಗ್ ರೂಂನಲ್ಲಿ ಭದ್ರಪಡಿಸಿದ್ದು, ದಿನದ 24 ಗಂಟೆಯೂ ಶಸ್ತ್ರ ಸಜ್ಜಿತ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಸ್ಥಳದಲ್ಲಿ ಕುಡಿಯುವ ನೀರು, ಊಟ, ತಿಂಡಿ ವ್ಯವಸ್ಥೆ ಕಲ್ಪಿಸಿ ಸುಲಲಿತ ಮತ ಎಣಿಕೆಗೆ ಅಗತ್ಯ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪರೋಕ್ಷ ಪ್ರಚಾರ!

ಸ್ಪಷ್ಟವಾಗಿದ್ದರೂ, ಬಿಜೆಪಿ ವರಿಷ್ಠರ ಕಾರ್ಯತಂತ್ರದಿಂದ ಕಮ್ಯುನಿಸ್ಟ್ ಪಕ್ಷದ ಬಹುತೇಕ ಕಾರ್ಯಕರ್ತರು ಕಮಲ ಪಾಳೆಯದತ್ತ ವಾಲಿಕೊಂಡರು. ಇದರ ಪರಿಣಾಮವಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಸಫಲವಾಗದೇ ಇದ್ದರೂ ಗಣನೀಯ ಸಂಖ್ಯೆಯ ಸೀಟುಗಳನ್ನು ಗಳಿಸಿ ತೃಣಮೂಲ ಕಾಂಗ್ರೆಸ್ ಪಕ್ಷದ ನೇರ ಎದುರಾಳಿಯಾಗಿ ಹೊರಹೊಮ್ಮಿತು. ತದನಂತರ ಹೈದರಾಬಾದ್ ಪ್ರತಿಷ್ಠಿತ ನಗರ ಪಾಲಿಕೆಯ ಚುಕ್ಕಾಣಿ ಹಿಡಿಯಲು ಹೋರಾಟ ನಡೆಸಿ, ಅಧಿಕಾರ ಹಿಡಿಯಲು ಸಾಧ್ಯವಾಗದಿದ್ದರೂ, ಅಲ್ಲಿನ ಟಿಎಸ್‌ಆರ್ ಪಕ್ಷದ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಸ್ಥಾನಗಳನ್ನು ಗಳಿಸಿತ್ತು. ಪಶ್ಚಿಮ ಬಂಗಾಳದಲ್ಲಿ ಪಕ್ಷದ ಬಲವರ್ಧನೆಗೆ ಮಾಡಿದ ತಯಾರಿಯನ್ನೇ ಕರ್ನಾಟಕದಲ್ಲೂ ಅನುಸರಿಸಲು ನಿರ್ಧರಿಸಲಾಗಿದ್ದು, ಈ ತಯಾರಿಯಿಂದ ಪಶ್ಚಿಮಬಂಗಾಳದಲ್ಲಿ ಸಿಕ್ಕಿದ್ದಕ್ಕಿಂತ ದೊಡ್ಡ ಮಟ್ಟದ ಯಶಸ್ಸು ಸಿಗುತ್ತದೆ ಎಂದು ಬಿಜೆಪಿ ವರಿಷ್ಠರು ಭಾವಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ನೆಲ ಕಚ್ಚಿದ್ದ ಪಕ್ಷ ದೊಡ್ಡ ಮಟ್ಟದಲ್ಲಿ ಬೆಳೆದು ನಿಲ್ಲಲು ಸಹಾಯಕವಾಯಿತು. ಹೀಗಿರುವಾಗ ಅಧಿಕಾರ ಇರುವ ಕರ್ನಾಟಕದಲ್ಲಿ ಅದಕ್ಕಿಂತ ದೊಡ್ಡ ಯಶಸ್ಸು ಸಿಗುವುದು ಸಹಜ. ಆ ಮೂಲಕ 2023ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯುವುದು ನಿಶ್ಚಿತ ಎಂಬುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಕರ್ನಾಟಕದ ನೆಲೆಯಲ್ಲಿ ಪ್ರಮುಖರಾಗಿರುವ ವಿವಿಧ ಸಮುದಾಯಗಳ ನಾಯಕರು ಮತ್ತು ಸ್ವಾಮೀಜಿಗಳನ್ನು ಮೋದಿ ಟೀಮ್ ಇನ್ನು ಮುಂದೆ ನಿರಂತರವಾಗಿ ಭೇಟಿ ಮಾಡಲಿದ್ದು, ಆ ಮೂಲಕ ಕರ್ನಾಟಕದ ಮತಬ್ಯಾಂಕ್ ಸ್ವರೂಪ ಬಿಜೆಪಿಗೆ ಅನು ಕೂಲವಾಗುವಂತೆ ನೋಡಿಕೊಳ್ಳಲಿ ಎಂದು ಪ್ರಧಾನಿ ಮೋದಿ ಬಯಸಿದ್ದಾರೆ. ಅದರನುಸಾರ, ಇನ್ನು ಮುಂದೆ ಬಿಜೆಪಿಯ ಕೇಂದ್ರ ನಾಯಕರ ಕರ್ನಾಟಕ ದಂಡಯಾತ್ರೆ ನಡೆಯಲಿದ್ದು, ಈಗ ಪ್ರಧಾನಿ ನರೇಂದ್ರ ಮೋದಿಯವರ ರಾಜ್ಯ ಭೇಟಿಯ ಹಿಂದಿರುವುದು ಇದೇ ಉದ್ದೇಶ ಎಂದಿವೆ. ಪ್ರಧಾನಿ ಭೇಟಿಗೂ ಮುನ್ನ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ತಮ್ಮ ಭೇಟಿಯ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಪಾಲ್ಗೊಂಡರೆ ಚಿತ್ರದುರ್ಗದಲ್ಲಿ ಮಠಾಧೀಶರುಗಳನ್ನು ಭೇಟಿ ಮಾಡುವ ಕಾರ್ಯಕ್ರಮವಿದೆ. ಹೀಗೆ ಜಾತಿ ಸಂಘಟನೆಯ ಜೊತೆಗೆ ಮಠಾಧೀಶರು ಮತ್ತು ರಾಜ್ಯದಲ್ಲಿರುವ ಚಿಂತಕರ ಸಹಕಾರ ಮತ್ತು ಅವರ ಆಶೀರ್ವಾದಕ್ಕೆ ಬಿಜೆಪಿ ಮುಂದಾಗಿದೆ.

ಬಿಎಸ್‌ಪಿ ಸದಸ್ಯರಿಗೆ ಹಿನ್ನಡೆ

ವಾರ್ಡ್–13ರ ಪವಿತ್ರ ರಮೇಶ್, ವಾರ್ಡ್–7ರ ನಾಸೀರ್ ಷರೀಫ್, ವಾರ್ಡ್–25ರ ರಾಮಕೃಷ್ಣ, ವಾರ್ಡ್–6ರ ಗಂಗಮ್ಮ ವರದರಾಜು, ವಾರ್ಡ್–2ರ ನಾಗಮಣಿ, ವಾರ್ಡ್–21ರ ಶಂಕನಪುರ ಪ್ರಕಾಶ್ ಅನರ್ಹರಾಗಿದ್ದು, ಇವರು ಬಿಎಸ್‌ಪಿಯಿಂದ ಉಚ್ಚಾಟಿತರಾದ ಶಾಸಕ ಎನ್.ಮಹೇಶ್ ಜೊತೆ ಗುರುತಿಸಿಕೊಂಡಿದ್ದರು. ಇನ್ನಿಬ್ಬರು ಬಿಎಸ್‌ಪಿ ಸದಸ್ಯರಾದ ಜಯಮೇರಿ ಹಾಗೂ ಜಯರಾಜು ಪಕ್ಷದಲ್ಲೇ ಉಳಿದಿದ್ದರು.

ಶಾಸಕರ ಜೊತೆಗಿದ್ದ 7 ಮಂದಿ ಸದಸ್ಯರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಅನ್ಯಪಕ್ಷದೊಂದಿಗೆ ಜೊತೆ ಕೈಜೋಡಿಸಿದ್ದರು. 2020ರ ಅ.30ರಲ್ಲಿ ನಡೆದ ನಗರಸಭೆ ಚುನಾವಣೆಯಲ್ಲಿ ಬಿಜೆಪಿ ಜೊತೆ ಕೈಜೋಡಿಸಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ ಹಂಚಿಕೆ ಮಾಡಿಕೊಂಡು ಬಿಎಸ್‌ಪಿಯಿಂದ ಸ್ಪರ್ಧಿಸಿದ್ದ ಬಿಎಸ್‌ಪಿಯ ಜಯಮೇರಿ ಅವರಿಗೆ ಮತ ನೀಡದೇ ವಿಪ್ ಉಲ್ಲಂಘಿಸಿದ್ದರು. ಈ ಹಿನ್ನೆಲೆಯಲ್ಲಿ ಜಯಮೇರಿ ಅವರು ಜಿಲ್ಲಾಧಿಕಾರಿಗಳಿಗೆ ದಾಖಲೆ ಸಮೇತ ದೂರು ಸಲ್ಲಿಸಿದ್ದರು.

ಅಂದಿನ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ, ಪ್ರಕರಣದ ವಿಚಾರಣೆ ನಡೆಸಿ 2021ರ ಸೆ.6ರಲ್ಲಿ ಮಹತ್ವದ ಆದೇಶ ನೀಡುವ ಮೂಲಕ ಪಕ್ಷ ನೀಡಿದ್ದ ವಿಪ್ ಉಲ್ಲಂಘಿಸಿದ್ದ 7 ಮಂದಿಯ ಸದಸ್ಯತ್ವದಿಂದ ಅನರ್ಹಗೊಳಿಸಿ ಆದೇಶಿಸಿದ್ದರು. ಈ ಸಂಬಂಧ ದೂರುದಾರರಾದ ಜಯಮೇರಿ ಅವರು ಸೆ.7ರಲ್ಲಿಯೇ ಹೈಕೋರ್ಟ್‌ಗೆ ಕೇವಿಯಟ್ ಸಲ್ಲಿಸಿ, ಅನರ್ಹತೆ ಪ್ರಶ್ನಿಸಿ ಸದಸ್ಯರು ಸಲ್ಲಿಸುವ ತಡೆಯಾಜ್ಞೆ ಪುರಸ್ಕರಿಸದಂತೆ ಮನವಿ ಮಾಡಿದ್ದರು. ಈ ಬೆನ್ನಲ್ಲೇ ಅನರ್ಹಗೊಂಡ 7 ಮಂದಿ ಸದಸ್ಯರು ಸಹ 2021ರ ಸೆ.10ರಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ತಮ್ಮ ಅನರ್ಹತೆ ಆದೇಶಕ್ಕೆ ತಡೆಯಾಜ್ಞೆ ಕೋರಿದ್ದರೂ ಪ್ರಯೋಜನವಾಗಲಿಲ್ಲ. ವಿಚಾರಣೆ ನಡೆದ ಬಳಿಕ ಹೈಕೋರ್ಟ್ ಏಕಸದಸ್ಯ ಪೀಠ 2021ರ ಸೆ.27ರ ಜಿಲ್ಲಾಧಿಕಾರಿ ಆದೇಶವನ್ನೇ ಹೈಕೋಟ್ ಎತ್ತಿ ಹಿಡಿದಿತ್ತು. ಅನರ್ಹರು ಅರ್ಜಿ ಸಲ್ಲಿಸುವ ಮುನ್ನವೇ ಅನರ್ಹತೆಯ ಆದೇಶಕ್ಕೆ ತಡೆಯಾಜ್ಞೆ ನೀಡದಂತೆ ಜಯಮೇರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಪರಿಣಾಮ ತಡೆಯಾಜ್ಞೆ ತರುವಲ್ಲಿ 7 ಮಂದಿ ಅನರ್ಹ ಸದಸ್ಯರಿಗೆ ಹಿನ್ನಡೆ ಉಂಟಾಗಿತ್ತು. ಇಷ್ಟಕ್ಕೆ ಸುಮ್ಮನಾಗದ ಅನರ್ಹರು ಹೈಕೋರ್ಟ್‌ನ ಏಕ ಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ, ದ್ವಿಸದಸ್ಯ ಪೀಠಕ್ಕೆ 2021ರ ಅ.17ರಂದು ಮೇಲ್ಮನವಿ ಸಲ್ಲಿಸಿದರು. ಅರ್ಜಿ ವಿಚಾರಣೆ ಬಳಿಕ ದ್ವಿಸದಸ್ಯ ಪೀಠವೂ ಜಿಲ್ಲಾಧಿಕಾರಿ ಹಾಗೂ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶವನ್ನೇ ಎತ್ತಿ ಹಿಡಿದು, ಸದ್ಯ ಈ ಮಹತ್ವದ ಆದೇಶ ನೀಡಿದೆ. 31 ಸದಸ್ಯ ಬಲದ ಕೊಳ್ಳೇಗಾಲ ನಗರಸಭೆಯಲ್ಲಿ ಬಿಎಸ್‌ಪಿಯಿಂದ ಗೆದ್ದಿದ್ದ 7 ಮಂದಿ ಅನರ್ಹಗೊಂಡ ಬಳಿಕ, ಸದಸ್ಯ ಬಲ 24 ಸ್ಥಾನಗಳಿಗೆ ಕುಸಿದಿದ್ದು, 11 ಸ್ಥಾನವನ್ನು ಕಾಂಗ್ರೆಸ್ ಹೊಂದಿದೆ. ಬಿಜೆಪಿ 7 ಸದಸ್ಯರನ್ನು ಹೊಂದಿದೆ. ಬಿಎಸ್‌ಪಿ 2 ಹಾಗೂ ನಾಲ್ವರು ಪಕ್ಷೇತರರಿದ್ದಾರೆ. ಹೈಕೋರ್ಟ್ ಆದೇಶದಿಂದಾಗಿ 7 ಮಂದಿ ಸದಸ್ಯತ್ವ ಕಳೆದುಕೊಳ್ಳುವಂತಾಗಿದ್ದು, ಈ 7 ಮಂದಿಯೂ ಸುಪ್ರೀಂ ಕೋರ್ಟ್‌ಗೆ ತೆರಳುತ್ತಾರಾ? ಇಲ್ಲ... ಜಿಲ್ಲಾಡಳಿತ, ಚುನಾವಣಾ ಆಯೋಗ ತೆರವಾದ 7 ಸ್ಥಾನಕ್ಕೆ ಚುನಾವಣೆ ನಡೆಸುತ್ತದೆಯೋ ಕಾದು ನೋಡಬೇಕಿದೆ.

ಮೇಕೆದಾಟು ಯೋಜನೆ ಅನುಷ್ಠಾನ

ನೀರನ್ನು ಹರಿಸುತ್ತಿದ್ದೇವೆ. ಅವರ ಪಾಲಿನ ಒಂದು ಹನಿ ನೀರನ್ನು ನಾವು ಬಳಕೆ ಮಾಡಿ ಕೊಂಡಿಲ್ಲ. ನಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳಲು ಇವರಿಗಿರುವ ಕಷ್ಟವೇನು ಎಂದು ಪ್ರಶ್ನಿಸಿದ್ದಾರೆ. ನಮ್ಮ ನೀರನ್ನು ನಮ್ಮ ಭಾಗದಲ್ಲೇ ಹಿಡಿದಿಟ್ಟುಕೊಂಡು, ಕುಡಿಯುವ ನೀರಿನ ಯೋಜನೆಗೆ ಬಳಕೆ ಮಾಡಿಕೊಳ್ಳುತ್ತೇವೆ. ಇದಕ್ಕೆ ಕೇಂದ್ರ ಜಲ ಸಂಪನ್ಮೂಲ ಇಲಾಖೆ ರಾಜ್ಯ ಸರ್ಕಾರದ ಡಿಪಿಆರ್‌ಗೆ ಪರಿಶೀಲಿಸಿ, ಕಾವೇರಿ ಪ್ರಾಧಿಕಾರಕ್ಕೆ ನೀಡಿದೆ. ಒಕ್ಕೂಟದ ವ್ಯವಸ್ಥೆಯಲ್ಲಿ ತಮಿಳುನಾಡು ಸರ್ಕಾರ ಇಂತಹ ನಿಲುವು ಕೈಗೊಂಡಿರುವುದು ಸರಿಯಲ್ಲ. ರಾಷ್ಟ್ರದ 30 ರಾಜ್ಯದ ಜನ, ವಿವಿಧ ದೇಶದ ಜನ ಇಲ್ಲಿ ವಾಸವಾಗಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಪತ್ರ ಬರೆಯುವಾಗ ಒಕ್ಕೂಟದ ವ್ಯವಸ್ಥೆ ವಿರುದ್ಧ ನಿಂತಿದ್ದಾರೆ. ನಮ್ಮ ನಿಲುವು ಸ್ಪಷ್ಟವಾಗಿದೆ. ಕೇಂದ್ರ ಜಲಶಕ್ತಿ ಕೂಡ ಸಿಡಬ್ಲ್ಯೂಸಿಗೆ ಸ್ಪಷ್ಟವಾಗಿ ಹೇಳಿದೆ. ಈ ಬಗ್ಗೆ ಚರ್ಚೆ ಆಗಬೇಕು ಅಂತ ಕೇಂದ್ರ ಸರ್ಕಾರಕ್ಕೆ ಮತ್ತು ಸಿಡಬ್ಲ್ಯೂಸಿ ಗಮನಕ್ಕೆ ತಂದಿದ್ದೇವೆ. ಜೂನ್ 17ರಂದು ಸಭೆ ಇತ್ತು. ಪ್ರಧಾನಿ ಪ್ರವಾಸ ಇರುವುದರಿಂದ ಆಚೀಚೆ ಆಗಿ 23ಕ್ಕೆ ಹೋಗಬಹುದು ಎಂದರು.

ಬಸ್ ದರ ಏರಿಕೆಗೆ ಚಿಂತನೆ

ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದೆ ಎಂದು ಹೇಳಿದ್ದಾರೆ. ಕೆಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಮಾತನಾಡಿ, ಮೂರು ವರ್ಷಗಳ ಹಿಂದೆ ಪ್ರಯಾಣ ದರವನ್ನು ಹೆಚ್ಚಿಸಿದಾಗ ನಿಗಮದ ಶೇ.32 ಆದಾಯವನ್ನು ಇಂಧನ ಖರೀದಿಸಲು ಬಳಸಲಾಗುತ್ತಿತ್ತು. ಇದೀಗ ಶೇ.60ರಷ್ಟು ಆದಾಯವನ್ನು ಬಳಕೆ ಮಾಡುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿಸಿದ್ದಾರೆ. ವಿಧಾನಸಭಾ ಚುನಾವಣೆಗೆ ಇನ್ನು ಕೆಲವೇ ತಿಂಗಳುಗಳು ಬಾಕಿ ಇರುವುದರಿಂದ ನಿಗಮದ ಈ ಮನವಿಯನ್ನು ಸರ್ಕಾರ ತಿರಸ್ಕರಿಸುವ ಸಾಧ್ಯತೆಗಳಿವೆ ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ. ಈ ನಡುವೆ ಈ ಸಂಬಂಧ ಸಾರಿಗೆ ಸಚಿವ ಶ್ರೀರಾಮುಲು ಅವರನ್ನು ಸಂಪರ್ಕಿಸಿ ಪ್ರತಿಕ್ರಿಯೆ ಪಡೆಯಲು ಯತ್ನ ನಡೆಸಲಾಗಿದ್ದು, ಸಚಿವರು ಸಂಪರ್ಕಕ್ಕೆ ಸಿಕ್ಕಿಲ್ಲ. ಮುಂದಿನ 3 ತಿಂಗಳುಗಳಲ್ಲಿ ಕೆಎಸ್‌ಆರ್ ಟಿಸಿಗೆ 50 ಎಲೆಕ್ಟ್ರಿಕ್ ಬಸ್‌ಗಳು ಸೇರ್ಪಡೆಯಾಗಲಿದ್ದು, ಈ ಪೈಕಿ 1 ಬಸ್ ಅನ್ನು ಮುಂದಿನ ತಿಂಗಳು ಕೆಲವು ವಾರಗಳ ಕಾಲ ಪ್ರಯೋಗಿಕವಾಗಿ ಓಡಿಸಲಾಗುತ್ತದೆ ಎನ್ನಲಾಗಿದೆ.

ಮೈಸೂರಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

ಬಾಲಕಾರ್ಮಿಕ ಪದ್ಧತಿಗೆ ಬಡತನ, ಅನಕ್ಷರತೆ ಕಾರಣ

- ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್ ಅಭಿಮತ
- ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣದ ಮೂಲಕ ಈ ಪಿಡುಗು ನಿವಾರಣೆ

ಮೈಸೂರು,ಜೂ.14(ಪಿಎಂ)– ಬಡತನ ಮತ್ತು ಅನಕ್ಷರತೆ ಹೊಂದಿರುವ ಕುಟುಂಬದ ಮಕ್ಕಳು ಬಾಲ ಕಾರ್ಮಿಕ ಪದ್ಧತಿಯೊಳಗೆ ಸಿಲುಕುವುದೇ ಹೆಚ್ಚಿದ್ದು, ಇಂತಹ ಕುಟುಂಬಗಳ ಪುನಶ್ಚೇತನದ ಮೂಲಕ ಬಾಲಕಾರ್ಮಿಕ ಪದ್ಧತಿ ನಿವಾರಣೆ ಸಾಧ್ಯವಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್.ರಘುನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಮಕ್ಕಳ ಸಹಾಯವಾಣಿ 1098ರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಗೆ ಮಕ್ಕಳು ಸಿಲುಕಬಾರದು ಎಂದರೆ ಮೊದಲು ಅವರಿಗೆ ಶಿಕ್ಷಣ ನೀಡಬೇಕು. ಶಿಕ್ಷಣ ಕೊಟ್ಟರೂ ಬಾಲಕಾರ್ಮಿಕ ಪದ್ಧತಿ ಮುಂದುವರೆಯಲು ಕಾರಣ ಬಡತನ. ಮನೆಯಲ್ಲಿ ಕಿತ್ತು ತಿನ್ನುವ ಬಡತನ ಇದ್ದಾಗ ಉಚಿತ ಶಿಕ್ಷಣ ನೀಡಿದರೂ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಎಷ್ಟೋ ಕುಟುಂಬಗಳಲ್ಲಿ ಮಕ್ಕಳ ಆದಾಯದಿಂದಲೇ ಜೀವನ ಸಾಗಿಸುವುದೂ ಇರುತ್ತದೆ. ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿರುವ ಕುಟುಂಬಗಳನ್ನು ಗುರುತಿಸಿ ಮೊದಲು ಅಂತಹ ಕುಟುಂಬಗಳಿಗೆ ಪುನಶ್ಚೇತನ ನೀಡಬೇಕಾಗುತ್ತದೆ. ಇದು ಸಾಧ್ಯವಾದರೆ, ಮಕ್ಕಳು ಬಾಲಕಾರ್ಮಿಕ ಪದ್ಧತಿಯೊಳಗೆ ಸಿಲುಕುವುದು ತಪ್ಪುತ್ತದೆ ಎಂದು ತಿಳಿಸಿದರು.

ಮಕ್ಕಳು ಕೆಲಸ ಮಾಡಿದರೆ ಸಮಾಜ ಮತ್ತು ಸರ್ಕಾರಕ್ಕೇನು ತೊಂದರೆ ಎನ್ನಿಸಬಹುದು. ಆದರೆ ಕಾರ್ಮಿಕರಾಗಿ ದುಡಿಯುವುದರಿಂದ ಮಕ್ಕಳ ಬಾಲ್ಯ ಹಾಳಾಗುವುದಲ್ಲದೆ, ಲೈಂಗಿಕ ಕಿರುಕುಳ ಸೇರಿದಂತೆ ಅನೇಕ ರೀತಿಯ ಶೋಷಣೆಗಳಿಗೂ ಅವರು ತುತ್ತಾಗಬೇಕಾಗುತ್ತದೆ ಎಂದರು.

ಹೋಟೆಲ್ ಉದ್ಯಮ, ಗಾರ್ಮೆಂಟ್ಸ್, ವಿವಿಧ ರೀತಿಯ ಕಾರ್ಖಾನೆಗಳಲ್ಲಿ ಮಕ್ಕಳಿಂದ ದುಡಿಸಿಕೊಳ್ಳುವುದು ಆಗಾಗ್ಗೆ ವರದಿ ಆಗುತ್ತಿರುತ್ತದೆ. ಬಡ ಕುಟುಂಬದ ಮಕ್ಕಳಿಗೆ ಕಡಿಮೆ ಸಂಬಳ ನೀಡಿ ಹೆಚ್ಚು ದುಡಿಸಿಕೊಳ್ಳಬಹುದು ಎಂಬುದು ಇದಕ್ಕೆ ಕಾರಣ. ಮಕ್ಕಳಲ್ಲಿ ಪ್ರತಿಭಟನಾ ಮನೋಭಾವ ಇರುವುದಿಲ್ಲ. ಹೆಚ್ಚು ಗಂಟೆಗಳ ಕಾಲ ದುಡಿಸಿಕೊಳ್ಳಬಹುದು ಎಂಬ ಲೆಕ್ಕಾಚಾರದಲ್ಲಿ ಮಕ್ಕಳಿಂದ ದುಡಿಸಿಕೊಳ್ಳಲಾಗುತ್ತದೆ. ಆದರೆ ಕಾನೂನಿನಲ್ಲ ಇದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದರು.

ಶಿಕ್ಷಣ ಎನ್ನುವುದು ಈ ಮೊದಲು ಮೂಲಭೂತ ಹಕ್ಕುಗಳಡಿ ಇರಲಿಲ್ಲ. ಸುಪ್ರಿಂ ಕೋರ್ಟ್ ತೀರ್ಪುಗಳ ಪ್ರಕಾರವಾಗಿ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿ, ಸಂವಿಧಾನದಲ್ಲಿ ಅಳವಡಿಸಲಾಯಿತು. ಕಡ್ಡಾಯ ಶಿಕ್ಷಣ ನೀಡಬೇಕಿರುವುದು ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ಹೊಣೆಯಾಗಿರುತ್ತದೆ. ಸಾಕಷ್ಟು ವಿದ್ಯಾಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ನೀಡಲು ವ್ಯವಸ್ಥೆ ಇದೆ. ಆದರೂ ಇಂದಿಗೂ ಸಾಕಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿರುವುದಿದೆ. ವಿಶೇಷವಾಗಿ ಬುಡಕಟ್ಟು ಜನಾಂಗಕ್ಕೆ ಸೇರಿದ ಮಕ್ಕಳು ಶಾಲೆಯಿಂದ ಹೊರಗೆ ಉಳಿಯುವುದು ಹೆಚ್ಚಿದೆ ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಂಬಂಧ ಪ್ರತಿಜ್ಞಾವಿಧಿ ಬೋಧಿಸಿದ ಸಹಾಯಕ ಕಾರ್ಮಿಕ ಆಯುಕ್ತರಾದ ನಾಜಿಯಾ ಸುಲ್ತಾನ ಮಾತನಾಡಿ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕಾನೂನು ಸೇರಿದಂತೆ ವಿವಿಧ ವ್ಯವಸ್ಥೆ ಇವೆ. ಆದರೂ ಸಂಪೂರ್ಣ ನಿರ್ಮೂಲನೆ ಸಾಧ್ಯವಾಗದೇ ಇರುವುದು ದುಃಖಕರ ಸಂಗತಿ ಎಂದು ವಿಷಾದಿಸಿದರು.

ಸಮಾಜದ ಪ್ರತಿಯೊಬ್ಬರು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಂಬಂಧ ತಮ್ಮ ಪಾತ್ರದ ಬಗ್ಗೆ ಅರಿತುಕೊಳ್ಳಬೇಕು. ಆ ಮೂಲಕ ಅಧಿಕಾರಿಗಳಿಗೆ ಸಹಕಾರ ನೀಡಬೇಕು. ಮಕ್ಕಳ ಉತ್ತಮ ಭವಿಷ್ಯದಿಂದ ಮಾತ್ರವೇ ಮುಂದಿನ ಭಾರತದ ಅಭಿವೃದ್ಧಿ ಸಾಧ್ಯ ಎಂಬುದನ್ನು ನಾವು ಮನಗಾಣಬೇಕಿದೆ ಎಂದರು.

ಇದಕ್ಕೂ ಮುನ್ನ ಜಿಲ್ಲಾಧಿಕಾರಿ ಕಚೇರಿ ಎದುರಿನಿಂದ ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮಾರ್ಗವಾಗಿ ಕಲಾಮಂದಿರದವರೆಗೆ ಜಾಗೃತಿ ಜಾಥಾ ನಡೆಸಲಾಯಿತು. ವಿವಿಧ ಶಾಲಾ ಮಕ್ಕಳು, ಆಶಾ–ಅಂಗನವಾಡಿ ಕಾರ್ಯಕರ್ತೆಯರು, ಪೋಷಕರು ಸೇರಿದಂತೆ ವಿವಿಧ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು. ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ, ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್, ಹಿರಿಯ ಸಾಹಿತಿ ಬನ್ನೂರು ಕೆ.ರಾಜು, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮತ್ತಿತರರು ಹಾಜರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್ ಮಾತನಾಡಿದರು.

ಜಗತ್ತಿನ ಒಟ್ಟು ಬಾಲಕಾರ್ಮಿಕರಲ್ಲಿ ಭಾರತ ಪಾತ್ರ ಶೇ.20...

ಜಗತ್ತಿನ ಒಟ್ಟು ಬಾಲಕಾರ್ಮಿಕರ ಸಂಖ್ಯೆಯಲ್ಲಿ ಭಾರತವು ಶೇ.20ರಷ್ಟು ಬಾಲಕಾರ್ಮಿಕರನ್ನು ಹೊಂದಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಯ ಈ ಸಂದರ್ಭದಲ್ಲಿ ಇಷ್ಟು ಸಂಖ್ಯೆ ಬಾಲ ಕಾರ್ಮಿಕರು ಇರುವುದು ದುರ್ದೈವದ ಸಂಗತಿ. ಮಕ್ಕಳ ಬಾಲ್ಯ ಕಸಿಯುವುದು, ಅವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವುದು ರಾಷ್ಟ್ರೀಯ ಉತ್ಪಾದಕತೆ ಸಾಮರ್ಥ್ಯ ಕುಸಿಯುವಂತೆ ಮಾಡಲಿದೆ.

-ದೇವರಾಜ ಭೂತೆ,
ಹಿರಿಯ ಸಿವಿಲ್ ನ್ಯಾಯಾಧೀಶ

ಬಾಲಕಾರ್ಮಿಕ ಪದ್ಧತಿ ಇಡೀ ವಿಶ್ವವನ್ನೇ ಕಾಡುತ್ತಿರುವ ಸಮಸ್ಯೆ. ಇದರ ನಿರ್ಮೂಲನೆಗೆ ಜೂ.12 ಅನ್ನು ಪ್ರತಿ ವರ್ಷ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವಾಗಿ ಆಚರಿಸಲಾಗುತ್ತಿದೆ. ಮೈಸೂರು ಸಂಸ್ಥಾನದಲ್ಲಿ ಬಾಲಕಾರ್ಮಿಕ ಪದ್ಧತಿ ತಡೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಹ ಕ್ರಮ ವಹಿಸಿದ್ದರು. 12ನೇ ಶತಮಾನದಲ್ಲಿಯೇ ಬಸವಣ್ಣನವರೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯತ್ತ ಹೆಜ್ಜೆ ಇಟ್ಟಿದ್ದರು.

-ಬನ್ನೂರು ಕೆ.ರಾಜು, ಹಿರಿಯ ಸಾಹಿತಿ

ಮೈಸೂರು ಜಿಲ್ಲೆಯಲ್ಲಿ 40 ಸರ್ಕಾರಿ ಪ್ರಾಥಮಿಕ ಶಾಲೆಗಳು

ಮಾಡೆಲ್ ಸ್ಕೂಲ್ ಆಗಿ ಪರಿವರ್ತನೆ

ಮೈಸೂರು,ಜೂ.14(ಪಿಎಂ)– ಜಿಲ್ಲೆಯಲ್ಲಿ 40 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮಾಡೆಲ್ ಸ್ಕೂಲ್ ಆಗಿ ರೂಪಿಸಲು ಯೋಜನೆ ರೂಪಿಸಲಾಗಿದೆ. ಇಂತಹ ಶಾಲೆಗಳಲ್ಲಿ ಎಲ್ಲಾ ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳು ಒಂದೇ ಸೂರಿನಡಿ ದೊರೆಯಲಿವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಸರ್ಕಾರಿ ಶಾಲೆಗಳ ಪ್ರವೇಶಾತಿಗೆ ಶಿಫಾರಸ್ಸು ಮಾಡುವಂತಹ ಸನ್ನಿವೇಶ ಇಂದು ಸೃಷ್ಟಿಯಾಗಿದೆ. ಸರ್ಕಾರಿ ಶಾಲೆಗಳ ಬಗ್ಗೆ ಜನರ ಮನೋಭಾವ ಬದಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎಂದು ಹೇಳಿದರು.

ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ಸಂಪೂರ್ಣ ತಡೆಗಟ್ಟಿದರೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯವಿದೆ. ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ 4 ಲಕ್ಷದ 32 ಸಾವಿರ ಮಕ್ಕಳು ಎಲ್‌ಕೆಜಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ 800 ಮಕ್ಕಳು ಮಧ್ಯದಲ್ಲಿ ಶಾಲೆ ಬಿಟ್ಟಿದ್ದಾರೆಂಬುದು ಸರ್ವೇ ಮೂಲಕ ಗೊತ್ತಾಯಿತು. ಆ ಪ್ರಕಾರ ಇಂತಹ ಮಕ್ಕಳ ಮನೆಗಳಿಗೆ ಭೇಟಿ ನೀಡಿ, ಅವರ ಮನವೊಲಿಸಿದ ಪ್ರಯತ್ನದಿಂದ 600 ಮಕ್ಕಳನ್ನು ಶಾಲೆಗೆ ಮರಳಿ ಕರೆತರುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ತಿಳಿಸಿದರು.

ತಾಜ್ ಗ್ರೂಪ್‌ಗೆ ಲಲಿತಮಹಲ್ ಹಸ್ತಾಂತರ ವಿಚಾರ

ಸಂಪುಟ ಉಪ ಸಮಿತಿ ವರದಿ ಬಳಿಕ ತೀರ್ಮಾನ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ವಿವರಣೆ

ಮೈಸೂರು, ಜೂ.14(ಆರ್‌ಕೆಬಿ)– ಮೈಸೂರಿನ ಹೋಟೆಲ್ ಲಲಿತಮಹಲ್ ಅನ್ನು ತಾಜ್ ಗ್ರೂಪ್‌ಗೆ ಹಸ್ತಾಂತರ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಸಂಪುಟ ಉಪ ಸಮಿತಿ ರಚಿಸಲಾಗಿದ್ದು, ವರದಿ ಬಂದ ಬಳಿಕ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಹಕಾರ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಲಲಿತಮಹಲ್ ಹೋಟೆಲ್ ಅನ್ನು ತಾಜ್ ಗ್ರೂಪ್ ಸುಪರ್ದಿಗೆ ನೀಡುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ಸಂಬಂಧ ರಚಿಸಲಾಗಿರುವ ಸಂಪುಟ ಉಪಸಮಿತಿಯಲ್ಲಿ ಆನಂದ್‌ಸಿಂಗ್, ನಾರಾಯಣಗೌಡ ಇದ್ದಾರೆ. ಹೋಟೆಲ್ ನಿರ್ವಹಣೆಯನ್ನು ಜಂಗಲ್ ಲಾಡ್ಜ್ ರೆಸಾರ್ಟ್‌ಗೆ ಕೊಡಲಾಗಿದ್ದು ಅದರಲ್ಲಿಯೇ ಮುಂದುವರಿಸಬೇಕಾ, ಬೇರೆಯವರಿಗೆ ನೀಡಬೇಕಾ ಎಂಬುದರ ಬಗ್ಗೆ ಸಂಪುಟ ಉಪಸಮಿತಿ ವರದಿ ನೀಡಲಿದೆ ಎಂದು ಹೇಳಿದರು.

ಸಿ.ಪಿ.ಯೋಗೇಶ್ವರ್ ಸಚಿವರಾಗಿದ್ದ ಸಂದರ್ಭದಲ್ಲೂ ಈ ವಿಚಾರ ಬಂದಿತ್ತು. ಆಗ ಇಲ್ಲಿನ ಜನಪ್ರತಿನಿಧಿಗಳು ವಿರೋಧ ವ್ಯಕ್ತಪಡಿಸಿದ್ದರು. ಆಗ ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ತಡೆ ಹಿಡಿಯಲಾಗಿತ್ತು ಎಂದ ಸಚಿವರು, ಲಲಿತ ಮಹಲ್ ಹೋಟೆಲ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಪ್ರವಾಸಿಗರ ಆಕರ್ಷಣೆಯಾಗಿರುವುದರಿಂದ ಮತ್ತಷ್ಟು ಅಭಿವೃದ್ಧಿ ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದರು.



ಪ್ರವಾಸಿಗರು, ಸಾರ್ವಜನಿಕರು ಇಲ್ಲಿನ ನಿರ್ವಹಣೆ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಸಂಪುಟದಲ್ಲಿ ಚರ್ಚಿಸಿದರು. ಸಂಪುಟ ಉಪಸಮಿತಿ ವರದಿ ನೀಡಿದ ಬಳಿಕ ಸಂಪುಟದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕ ಎಸ್.ಎ. ರಾಮದಾಸ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಎಸಿಪಿ ಗೀತಾ ಪ್ರಸನ್ನ ಇನ್ನಿತರರು ಉಪಸ್ಥಿತರಿದ್ದರು.

ಇಡಿ ತನಿಖೆಗೆ ಒಳಪಡುವವರು ಕಾನೂನಿಗೆ ಬದ್ಧವಾಗಿದ್ದರೆ ಹೆದರುವ ಅಗತ್ಯವೇನಿದೆ?

ಮೈಸೂರಲ್ಲಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರಶ್ನೆ

ಮೈಸೂರು, ಜೂ.14(ಆರ್‌ಕೆಬಿ)– ಇಡಿ ತನಿಖೆಗೆ ಒಳಪಡುವವರು ಕಾನೂನು ಬದ್ಧವಾಗಿದ್ದರೆ ಹೆದರುವ ಅಗತ್ಯವಿಲ್ಲ. ಆಗ ಇಡಿ ಏನೂ ಮಾಡಲು ಸಾಧ್ಯವಿಲ್ಲ. ಎಷ್ಟೋ ಜನರಿಗೆ ನೋಟಿಸ್ ಕೊಟ್ಟಿದೆ, ದಾಳಿ ಮಾಡಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರಿಗೆ ಇ.ಡಿ. ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ದೇಶದಾದ್ಯಂತ ಕಾಂಗ್ರೆಸ್ ಪ್ರತಿಭಟನೆ ಮಾಡಿದ ಬಗ್ಗೆ ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಅಕ್ರಮ ಮಾಡಿದವರಿಗೆ ಭಯ ಇರುತ್ತದೆ. ಸರಿಯಿದ್ದರೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಸೇರಿದಂತೆ ಯಾರಿಗೂ ತೊಂದರೆ ಆಗಲ್ಲ. ಇದರಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ. ಕರ್ನಾಟಕದಲ್ಲಿ ಎಷ್ಟು ಜನರ ವಿಚಾರಣೆ ಮಾಡಿಲ್ಲವೇ? ಎಂದು ಪ್ರಶ್ನಿಸಿದರು. ಈ ವಿಷಯ ಕುರಿತು ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು, ಕಾಂಗ್ರೆಸ್‌ನವರು ಈ ಹಂತದಲ್ಲಿ ಪ್ರತಿಭಟನೆ ಮಾಡುವ ಅವಶ್ಯಕತೆ ಇಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಪ್ರತಿಭಟನೆ ಮಾಡುತ್ತಿದ್ದಾರೇನೋ? ನಿಮ್ಮ ಪರವಾಗಿ ನಾವಿದ್ದೇವೆ ಎಂದು ತೋರಿಸಲು ಪ್ರತಿಭಟನೆ ನಡೆಸುತ್ತಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದರು.

ಪ್ರತಿಭಟನೆ ಉದ್ದೇಶ ಅವರಲ್ಲೂ ಅಕ್ರಮ ಇರಬಹುದು ಎನಿಸುತ್ತಿದೆ. ಹಾಗಾಗಿಯೇ ಅವರಿಗೆ ಕಾಂಗ್ರೆಸ್ ಬೆಂಬಲವಾಗಿ ನಿಂತಿದೆ. ಇಡಿ ತನಿಖೆಯಲ್ಲಿ ಎಲ್ಲವೂ ಹೊರಗೆ ಬರುತ್ತದೆ. ಇದರಲ್ಲಿ ಯಾವುದೇ ಮುಚ್ಚು ಮರೆ ಇಲ್ಲ ಎಂದು ಹೇಳಿದರು.

ಜೂ.20ರಂದು ಸರ್ಕಾರಿ ಸೌಲಭ್ಯಗಳ ಫಲಾನುಭವಿಗಳೊಂದಿಗೆ ಮೋದಿ ಸಂವಾದ

ಮೈಸೂರು, ಜೂ.14(ಆರ್‌ಕೆ)–ಜೂನ್ 20 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಯೋಜನೆ ಫಲಾನುಭವಿಗಳೊಂದಿಗೆ ಸಂವಾದ ನಡೆಸುವರು ಎಂದು ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ.ಪ್ರಕಾಶ್ ತಿಳಿಸಿದ್ದಾರೆ. ಮೈಸೂರಿನ ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಅಂದು ಮಧ್ಯಾಹ್ನ 3.30 ಗಂಟೆಗೆ ನಡೆಯಲಿರುವ ಸಂವಾದ ಕಾರ್ಯಕ್ರಮಕ್ಕೆ ಬೇರೆ ಬೇರೆ ಇಲಾಖೆಗಳಿಂದ ಸೌಲಭ್ಯ ಪಡೆದಿರುವ ಆಯ್ದ ಫಲಾನುಭವಿಗಳನ್ನು ಕರೆತರುವಂತೆ ಸೂಚಿಸಿದರು.

ಆಹಾರ, ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳಲ್ಲಿ ಒದಗಿಸಿರುವ ಸರ್ಕಾರಿ ಸೌಲಭ್ಯಗಳನ್ನು ಪಡೆದವರನ್ನು ಗುರ್ತಿಸಿ ಆಯಾ ಇಲಾಖೆ ಅಧಿಕಾರಿಗಳು ಮೈಸೂರಿಗೆ ಕರೆತಂದು ಕಾರ್ಯಕ್ರಮ ಮುಗಿದ ಬಳಿಕ ಮರಳಿ ಅವರನ್ನು ಸುರಕ್ಷಿತವಾಗಿ ಕರೆದೊಯ್ಯಲು ವ್ಯವಸ್ಥೆ ಮಾಡಬೇಕೆಂದು ಅವರು ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಮಂಡ್ಯದ ಜಿಲ್ಲಾಧಿಕಾರಿ ಅಶ್ವತಿ, ಚಾಮರಾಜನಗರದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಹಾಸನದ ಜಿಲ್ಲಾಧಿಕಾರಿ ಗಿರೀಶ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಖಾಲಿ ಇರುವ ವಿಭಾಗಕ್ಕೆ ಪ್ರವೇಶಾವಕಾಶ

ಮೈಸೂರು, ಜೂ.14–2022–23ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಾಗಿರುವ ಸ್ಥಾನಗಳು ಕೆಲವು ವಿಭಾಗಗಳಲ್ಲಿ ಖಾಲಿ ಇದ್ದು, ಅರ್ಹ ಆಸಕ್ತ ಅಭ್ಯರ್ಥಿಗಳು ಪ್ರಾಂಶುಪಾಲರನ್ನು ಭೇಟಿ ಮಾಡಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಪ್ರಾಂಶುಪಾಲರು, ಜೆಎಸ್‌ಎಸ್ ಪಾಲಿಟೆಕ್ನಿಕ್, ಮೈಸೂರು (ದೂ: 0821–2548318/9686677237) ಇವರನ್ನು ಸಂಪರ್ಕಿಸಬಹುದು.

ಜಗಜ್ಯೋತಿ ಬಸವಣ್ಣನ ವಚನ ಬರೀ ಓದಿಗೆ ಸೀಮಿತವಾಯ್ತು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವಿದ್ಯಾಶಂಕರ್ ವಿಷಾದ | ಬಸವ ಜಯಂತಿ, ಬಸವ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು,ಜೂ.14(ಎಂಟಿವೈ)– ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಬಸವಣ್ಣನವರ ವಚನಗಳು ಕೇವಲ ಓದಿಗೆ ಮಾತ್ರ ಸೀಮಿತವಾಗಿದೆಯೇನೋ ಎಂಬ ಅನುಮಾನ ಮೂಡುತ್ತಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ವಿದ್ಯಾಶಂಕರ್ ವಿಷಾದಿಸಿದ್ದಾರೆ.

ಮೈಸೂರಿನ ಅಗ್ರಹಾರದ ಶಂಕರಮಠದ ರಸ್ತೆಯಲ್ಲಿರುವ ಹೊಸಮಠದ ನಟರಾಜ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಮೈಸೂರು ಶರಣ ಮಂಡಳಿ ಹಾಗೂ ನಟರಾಜ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನಡೆದ 'ಬಸವ ಜಯಂತಿ–2022' ಹಾಗೂ 'ಬಸವರತ್ನ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಬಹುತೇಕ ಸಮಸ್ಯೆಗಳಿಗೆ ಬಸವಣ್ಣನವರ ವಚನಗಳೇ ಪರಿಹಾರವಾಗಿದ್ದವು. ಆದರೆ ಇದೀಗ ಸಣ್ಣ ಸಮಸ್ಯೆಗಳು ದೊಡ್ಡದಾಗಿ ಬೆಳೆಯುತ್ತಿವೆ. ಪ್ರತಿದಿನ ಬೆಳಗ್ಗೆ ದಿನಪತ್ರಿಕೆ ನೋಡಿದರೆ ಹಲವು ವಿದ್ಯಮಾನಗಳನ್ನು ಗಮನಿಸಬಹುದಾಗಿದೆ. ಸಣ್ಣ ಪುಟ್ಟ ಸಮಸ್ಯೆಗಳೂ ವೈಭವೀಕರಣಗೊಳ್ಳುತ್ತಿವೆ. ಇದನ್ನೆಲ್ಲಾ ನೋಡಿದಾಗ ಬಸವಣ್ಣನವರ ವಚನಗಳು ಕೇವಲ ಓದುವುದಕ್ಕಾಗಿ ಮಾತ್ರ ಇವೆ ಅನ್ನಿಸುತ್ತಿವೆ. ವಚನಗಳಲ್ಲಿರುವ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಯಾವುದೇ ಸಮಸ್ಯೆಗಳು ಉದ್ಭವವಾಗುವುದಿಲ್ಲ. ಆದರೆ ಎಲ್ಲರೂ ಬಾಯಿ ಮಾತಿಗೆ ಬಸವಣ್ಣನವರ ವಿಚಾರಧಾರೆಗಳ ಬಗ್ಗೆ ಮಾತನಾಡುತ್ತಿದ್ದಾರೆ ಎನ್ನಿಸುತ್ತದೆ ಎಂದರು.



ಈ ಹಿಂದೆ ಒಳ್ಳೆ ಕೆಲಸ ಮಾಡುವವರನ್ನು ಹೊಗಳುತ್ತಿದ್ದರು. ಅವರಿಗೆ ಪ್ರೋತ್ಸಾಹ ನುಡಿಗಳನ್ನಾಡಿ ಇನ್ನಷ್ಟು ಉತ್ತಮ ಸೇವೆ ಮಾಡಲು ಪ್ರೇರೇಪಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಒಳ್ಳೆ ಕೆಲಸ ಮಾಡುತ್ತಿರುವವರನ್ನು ಹೊಗಳುವುದೇ ಕಡಿಮೆ. ಅದರಲ್ಲೂ ಸಣ್ಣಪುಟ್ಟ ಕಾರಣ, ಗಾಳಿಸುದ್ದಿಯಿಂದಾಗಿ ಸತ್ಯಾಸತ್ಯತೆ ಪರಾಮರ್ಶಿಸದೇ ತೆಗಳುವ ಹಾಗೂ ತೇಜೋವಧೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇಂತಹ ಬೆಳವಣಿಗೆ ನಿಲ್ಲಬೇಕು ಎಂದು ಅಭಿಪ್ರಾಯಪಟ್ಟರು.

ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆದು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ಡಾ.ಅಂಬೇಡ್ಕರ್ ಅವರು ಸಂವಿಧಾನ ಬರೆಯುವಾಗ ಹೆಣ್ಣು ಮಕ್ಕಳ ಸಬಲೀಕರಣವಾದರೆ ದೇಶ ಅತ್ಯಂತ ಹೆಚ್ಚು ಬಲಿಷ್ಠಗೊಳ್ಳುತ್ತದೆ ಎಂದು ತಿಳಿಸಿದ್ದರು. ಇಂದು ಡಾ.ಅಂಬೇಡ್ಕರ್ ಅವರ ಮಾತಿನಂತೆ ಹೆಣ್ಣು ಮಕ್ಕಳು ಸಾಧನೆಯ ಶಿಖರ ಏರುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ವಾಸು ಮಾತನಾಡಿ, ಮೈಸೂರು ಶರಣ ಮಂಡಳಿ ಪ್ರತಿ ವರ್ಷವೂ 'ಬಸವ ಜಯಂತಿ'ಯನ್ನು ಆಚರಿಸುವ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ಅವರಿಗೆ 'ಬಸವರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಶರಣರ ವಿಚಾರಧಾರೆಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಎನ್.ಕೃಷ್ಣಸ್ವಾಮಿ, ಸಿ.ಎಂ.ಜಗದೀಶ್, ವೈ.ಎಂ.ಶಂಕರೇಗೌಡ, ಲಯನ್ ಶೃಂಗಾರ ಸಂಜೀವ್ ಶೆಟ್ಟಿ ಅವರಿಗೆ 'ಬಸವ ರತ್ನ' ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗ್ರಾಮಾಂತರ ಘಟಕದ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಪ್ರಾಚ್ಯ ವಸ್ತು ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಮೂಗೂರು ನಂಜುಂಡಸ್ವಾಮಿ ಸೇರಿದಂತೆ ನಟರಾಜ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗಿಯಾಗಿದ್ದರು.

ಮೈಸೂರು ಮಿತ್ರ

ಸರಗೂರಿನಲ್ಲಿ ಸಂಭ್ರಮದ ಸತ್ಯಪ್ಪ ಕೊಂಡೋತ್ಸವ

ಸರಗೂರು, ಜೂ.14(ನಾಗೇಶ್)– ಪಟ್ಟಣದಲ್ಲಿ ಮಂಗಳವಾರ ಸತ್ಯಪ್ಪ ಕೊಂಡೋತ್ಸವ ಸಂಭ್ರಮದಿಂದ ನೆರವೇರಿತು.



ಇಲ್ಲಿನ ವೀರಶೈವ ಲಿಂಗಾಯಿತರ ಕಾಳಮಂಟೇಶ್ವರ ದೇವಸ್ಥಾನ ಮುಂಭಾಗ ಸ್ಥಾಪಿತವಾಗಿರುವ ಸತ್ಯಪ್ಪನವರ ದೇವಾಲಯ ವನ್ನು ತಳಿರು–ತೋರಣ, ರಂಗೋಲಿ ಹಾಗೂ ವಿದ್ಯುತ್ ದ್ವೀಪಗಳಿಂದ ಸಿಂಗಾರಗೊಳಿಸಲಾಗಿತ್ತು.

ಬೆಳಗ್ಗಿನಿಂದಲೇ ಹೋಮ, ಹವನ ನೆರವೇರಿಸಲಾಯಿತು. ಬಳಿಕ, ಗಣಪತಿ ಹೋಮ, ಪುಣ್ಯಾ, ಕಳಶ ಪ್ರತಿಷ್ಠಾಪನೆ, ಕುಂಕುಮಾರ್ಚನೆ ಸೇರಿ ವಿವಿಧ ಪೂಜಾ ಕೈಂಕರ್ಯ ನೆರವೇರಿದವು. ನಂತರ ಕಪಿಲಾ ನದಿಗೆ ತೆರಳಿ ಗಂಗಾ ಪೂಜೆ ನಡೆಸಿ ಶ್ರೀಪಾರ್ವತಿ ಸಮೇತ ಶ್ರೀಚಂದ್ರಮೌಳೇಶ್ವರ ಉತ್ಸವ ಮೂರ್ತಿಯನ್ನು ಪೂರ್ಣಕುಂಭ ಕಳಶದೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮಂಗಳವಾದ್ಯ, ಸತ್ತಿಗೆ, ವೀರಗಾಸೆ ಕುಣಿತ ಹಾಗೂ ಕಲಾತಂಡಗಳ ಜೊತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಉತ್ಸವವು ದೇವಾಲಯಕ್ಕೆ ತಲುಪಿದ ನಂತರ ಕೊಂಡೋತ್ಸವ ನಡೆಯಿತು. ನಂತರ ಸತ್ಯಪ್ಪ ದೇವರಿಗೆ ಮಹಾ ಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ದೇವಸ್ಥಾನದ ಪ್ರಧಾನ ಶಿವಾರ್ಚಕರಾದ ರವಿಶಾಸ್ತ್ರಿ, ಮಹದೇವಣ್ಣ ನೇತೃತ್ವದಲ್ಲಿ ಪೂಜಾ ಕೈಂಕರ್ಯ ನಡೆಯಿತು. ಈ ವೇಳೆ ಗಾಣಿಗ ಸಮಾಜದ ಅಧ್ಯಕ್ಷ ವೆಂಕಟರಮಣಶೆಟ್ಟರು, ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್‌ಕುಮಾರ್, ಶ್ರೀಕಂಠಸ್ವಾಮಿ, ಮುಖಂಡರಾದ ಸೋಮಶೆಟ್ಟರು, ಶಿವಣ್ಣ, ನಂಜುಂಡ, ವೆಂಕಟೇಶ್, ಹುಚ್ಚಪ್ಪ, ಜಯರಾಮ್, ನಾಗರಾಜು, ಮಹದೇವಣ್ಣ, ಕೆಂಡಗಣ್ಣಶೆಟ್ಟರು, ಮಾದೇವ, ಚಂದ್ರು, ಬಸವರಾಜು, ಚಿಕ್ಕಣ್ಣ ಇನ್ನಿತರರಿದ್ದರು

ಬಸ್ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ

ನಂಜನಗೂಡು, ಜೂ.14(ಸುದರ್ಶನ್)– ತಾಲೂಕಿನ ವೆಂಕಟಾಚಲಪುರ, ಹಾದನೂರು, ಒಡೆಯನಪುರ ಗ್ರಾಮಕ್ಕೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಶಾಲಾ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಮಂಗಳವಾರ ಪ್ರತಿಭಟನೆ ನಡೆಸಿದರು.

ವೆಂಕಟಾಚಲಪುರ ಗ್ರಾಮದ ರಸ್ತೆಯಲ್ಲಿ ಸಮಾವೇಶಗೊಂಡ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬಸ್ ಸೌಲಭ್ಯ ಕಲ್ಪಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ವೆಂಕಟಾಚಲಪುರ, ಹಾದನೂರು, ಒಡೆಯನಪುರ ಗ್ರಾಮದಿಂದ ಹೆಡಿಯಾಲ ಗ್ರಾಮಕ್ಕೆ ಸೂಕ್ತ ಬಸ್ ಸೌಲಭ್ಯವಿಲ್ಲ. ಇದರಿಂದ ಈ ಗ್ರಾಮಗಳಿಂದ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿದಿನ 4ರಿಂದ 5 ಕಿ.ಮೀ. ನಡೆದುಕೊಂಡೆ ಹೋಗಬೇಕಿದೆ ಎಂದು ದೂರಿದರು.

ಈ ಹಿಂದೆ ಚಿಕ್ಕಬುರಗಿ ಮತ್ತು ಬಂಕಹಳ್ಳಿ ಮಾರ್ಗವಾಗಿ ತೆರಳುತ್ತಿದ್ದ ಬಸ್ ಅನ್ನು ದಿಢೀರ್ ನಿಲ್ಲಿಸಲಾಗಿದೆ. ಇದರಿಂದ ಪ್ರತಿನಿತ್ಯ ನಾವು 6 ಕೆ.ಜಿ. ತೂಕದ ಪುಸ್ತಕದ ಬ್ಯಾಗ್ ಅನ್ನು ಶಾಲೆಗೆ ಹೋಗಿ–ಬರಲು 8 ಕಿ.ಮೀ. ನಡೆಯಬೇಕಿದೆ. ಇದು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಕೂಡಲೇ ಸಾರಿಗೆ ಇಲಾಖೆ ಬಸ್ ಸೌಲಭ್ಯ ಕಲ್ಪಿಸಬೇಕು. ಇಲ್ಲದಿದ್ದರೇ ಗ್ರಾಮದ ಎಲ್ಲಾ ವಿದ್ಯಾರ್ಥಿಗಳು ಶಾಲೆ ತೊರೆಯಬೇಕಾಗುತ್ತದೆ ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದರು.

ಈ ರಸ್ತೆಯಲ್ಲಿ ಕಾಡು ಪ್ರಾಣಿಗಳ ಹಾವಳಿಯೂ ಇದ್ದು, ಮಕ್ಕಳಿಗೆ ಏನಾದರೂ ತೊಂದರೆಯಾದರೆ ಯಾರು ಜವಾಬ್ದಾರರು, ಕೂಡಲೇ ಬಸ್ ಸೌಲಭ್ಯ ಕಲ್ಪಿಸದಿದ್ದರೇ, ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಸದಸ್ಯರಾದ ಬಂಗಾರ, ಶಿವರಾಜು, ಮುಖಂಡ ವೆಂಕಟೇಶ್, ವಿದ್ಯಾರ್ಥಿಗಳಾದ ಸಂಗೀತ, ಐಶ್ವರ್ಯ, ಅನು, ಗೀತಾ, ಕೀರ್ತಿ ಸೇರಿದಂತೆ ಇತರರು ಹಾಜರಿದ್ದರು.

ನಕಲಿ ಕೊಟ್ಟು, ಅಸಲಿ ಚಿನ್ನ ಎಗುರಿಸಿದ ಖದೀಮರ ಬಂಧನ

ಹುಣಸೂರು, ಜೂ.14(ಕೆಕೆ)– ನನ್ನ ಪತ್ನಿ ಅನಾರೋಗ್ಯದಲ್ಲಿದ್ದಾಳೆ. ಅವಳಿಗೆ ಚಿಕಿತ್ಸೆ ಕೊಡಿಸಲು ಹಣದ ಅವಶ್ಯಕತೆ ಇದೆ ಎಂದು ಹೇಳಿ ಮಹಿಳೆಯೊಬ್ಬರಿಗೆ ನಕಲಿ ಚಿನ್ನದ ಸರ ನೀಡಿ, ಅವರಿಂದ ಅಸಲಿ ಚಿನ್ನದ ಸರ, ಓಲೆ, ಹಣವನ್ನು ಎಗುರಿಸಿದ ಖದೀಮರನ್ನು ಹುಣಸೂರು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದಾವಣಗೆರೆ ಮೂಲದ ಆನಂದ(50) ಹಾಗೂ ಸುಶೀಲಮ್ಮ(45) ಬಂಧಿತರು. ಹುಣಸೂರು ತಾಲೂಕಿನ ತಿಪ್ಪಲಾಪುರ ಗ್ರಾಮದ ಸುಶೀಲಮ್ಮ (50) ಚಿನ್ನ ಕಳೆದುಕೊಂಡ ಮಹಿಳೆ.

ಏನಿದು ಪ್ರಕರಣ?: ಮೇ 12ರಂದು ಬೆಳಗ್ಗೆ 11.30ರ ಸುಮಾರಿನಲ್ಲಿ ಪಟ್ಟಣದ ಬಜಾರ್ ರಸ್ತೆಯಲ್ಲಿರುವ ಮಾರುಕಟ್ಟೆಗೆ ಸುಶೀಲಮ್ಮ ಒಬ್ಬರೇ ನಡೆದುಕೊಂಡು ಹೋಗುತ್ತಿದ್ದಾಗ, ಅವರನ್ನು ಆನಂದ ಹಾಗೂ ಸುಶೀಲಮ್ಮ ದಂಪತಿ ತಡೆದಿದ್ದಾರೆ. ಬಳಿಕ, ತಮ್ಮ ಬಳಿಯಿದ್ದ ನಕಲಿ ಚಿನ್ನದ ಸರವನ್ನು ಅವರಿಗೆ ತೋರಿಸಿ, ನನ್ನ ಪತ್ನಿಗೆ ಅನಾರೋಗ್ಯವಾಗಿದ್ದು, ಆಕೆಗೆ ಚಿಕಿತ್ಸೆ ಕೊಡಿಸಲು ನನ್ನ ಬಳಿ ಹಣವಿಲ್ಲ. ಹಾಗಾಗಿ, ಈ ಸರವನ್ನು ನೀವು ಇಟ್ಟುಕೊಂಡು ಹಣ ನೀಡುವಂತೆ ಕೇಳಿಕೊಂಡಿದ್ದಾರೆ ಎನ್ನಲಾಗಿದೆ.

ಈ ವೇಳೆ ಸುಶೀಲಮ್ಮ ನನ್ನ ಬಳಿ ನಿಮ್ಮ ಸರವನ್ನು ಕೊಂಡುಕೊಳ್ಳುವಷ್ಟು ಹಣವಿಲ್ಲ ಎಂದಾಗ, ನಿಮ್ಮ ಬಳಿಯಿರುವ 10 ಗ್ರಾಂ ತೂಕದ ಸರ, ಓಲೆ, ಮಾಟಿ ಹಾಗೂ 5 ಸಾವಿರ ನಗದು ನೀಡಿ ಎಂದು ಕೇಳಿಕೊಂಡು ಆಕೆಯನ್ನು ನಂಬಿಸಿ, ಅವರಿಂದ ಅಸಲಿ ಒಡವೆ ಹಾಗೂ ನಗದನ್ನು ಪಡೆದು ಪರಾರಿಯಾಗಿದ್ದಾರೆ. ಬಳಿಕ, ಮನೆಗೆ ಬಂದ ಸುಶೀಲಮ್ಮ ಸರವನ್ನು ಪರೀಕ್ಷಿಸಿದಾಗ ಅದು ನಕಲಿಯೆಂದು ತಿಳಿದು ವಿಚಾರವನ್ನು ಮನೆಯವರಿಗೆ ತಿಳಿಸಿದ್ದಾರೆ. ನಂತರ ಈ ಸಂಬಂಧ ಹುಣಸೂರು ಪಟ್ಟಣ ಠಾಣೆಯಲ್ಲಿ ದೂರು ನೀಡಿದ್ದಾರೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಹುಣಸೂರು ಉಪ ವಿಭಾಗದ ಡಿವೈಎಸ್‌ಪಿ ರವಿಪ್ರಸಾದ್, ಪಟ್ಟಣ ಠಾಣೆಯ ಇನ್‌ಸ್ಪೆಕ್ಟರ್ ಎಲ್.ಶ್ರೀನಿವಾಸ್ ನೇತೃತ್ವದಲ್ಲಿ ಅಪರಾಧ ಪತ್ತೆ ತಂಡ ರಚಿಸಿ ಕಾರ್ಯಾಚರಣೆ ನಡೆಸಿ ಜೂ.13ರಂದು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರಿಂದ ಚಿನ್ನದ ಓಲೆ, ಮಾಟಿ ವಶಪಡಿಸಿಕೊಂಡಿದ್ದಾರೆ.

ಆರೋಪಿ ಆನಂದನ ವಿರುದ್ಧ ಈ ಹಿಂದೆ ದಾವಣಗೆರೆ, ತುಮಕೂರು, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇಂಥಹುದೇ ಪ್ರಕರಣಗಳು ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಹುಣಸೂರು ಪಟ್ಟಣ ಠಾಣೆಯ ಗುಪ್ತ ಮಾಹಿತಿ ಸಿಬ್ಬಂದಿ ಪ್ರಸಾದ್, ಅಪರಾಧ ಪತ್ತೆ ದಳದ ಸಿಬ್ಬಂದಿ ಪ್ರಭಾಕರ್, ಇರ್ಫಾನ್, ಎಎಸ್‌ಐ ಪುಟ್ಟನಾಯಕ, ಭರತೇಶ್, ವೆಂಕಟೇಶ್ ಪ್ರಸಾದ್, ಮಹಿಳಾ ಸಿಬ್ಬಂದಿ ಲಕ್ಷ್ಮೀ ಹಾಗೂ ಜಗದೀಶ್ ಪಾಲ್ಗೊಂಡಿದ್ದರು.

ದೇವಸ್ಥಾನದ ಕಿಟಕಿ ಸರಳು ಕತ್ತರಿಸಿ ಕಳವು

ತಿ.ನರಸೀಪುರ, ಜೂ.14(ಎಸ್‌ಕೆ)– ದೇವಸ್ಥಾನದ ಕಿಟಕಿ ಸರಳನ್ನು ಕತ್ತರಿಸಿ ಒಳ ನುಗ್ಗಿದ ಖದೀಮರು ಹುಂಡಿ ಹಾಗೂ ಚಿನ್ನಾಭರಣ ಕಳವು ಮಾಡಿರುವ ಘಟನೆ ಸಮೀಪದ ಹಳೇ ತಿರುಮಕೂಡಲಿನ ಶ್ರೀಚೌಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಬೆಳಗ್ಗೆ ಹುಣ್ಣಿಮೆ ಪೂಜೆಗೆಂದು ಅರ್ಚಕರು ದೇವಾಲಯಕ್ಕೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದ್ದು, ಖದೀಮರು ದೇವಾಲಯದ ಒಳಗ್ಗಿದ್ದ 2 ಹುಂಡಿ ಹಾಗೂ ಚಿನ್ನಾಭರಣ ದೋಚಿಕೊಂಡು ಹೋಗಿದ್ದಾರೆ. ಕಪಿಲಾ ನದಿಯ ದಡದಲ್ಲಿ ಹುಂಡಿಯನ್ನು ಒಡೆದು ಅದರಲ್ಲಿದ್ದ ನಗದು ತೆಗೆದುಕೊಂಡು ಹುಂಡಿಯನ್ನು ಅಲ್ಲೇ ಬಿಸಾಡಿದ್ದಾರೆ. ಈ ಹಿಂದೆಯೂ ಮೂರು ಬಾರಿ ದೇವಾಲಯದಲ್ಲಿ ಕಳ್ಳತನವಾಗಿತ್ತು. ಈ ಸಂಬಂಧ ನರಸೀಪುರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಎಸ್‌ಐ ಕೃಷ್ಣಕಾಂತ್ ಕೋಳಿ, ಶ್ವಾನ ದಳದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಲೈಟರ್ ಖರೀದಿ ವಿಚಾರಕ್ಕೆ ಗಲಾಟೆ: ದಂಪತಿ ಮೇಲೆ ಹಲ್ಲೆ

ತಿ.ನರಸೀಪುರ, ಜೂ.14(ಎಸ್‌ಕೆ)– ಲೈಟರ್ ಖರೀದಿ ವಿಚಾರಕ್ಕೆ ಸಂಬಂಧಿಸಿದಂತೆ ಪುಂಡರ ಗುಂಪೊಂದು ದಂಪತಿಗಳ ಮೇಲೆ ಹಲ್ಲೆ ನಡೆಸಿರುವ ಘಟನೆ ಪಟ್ಟಣದಲ್ಲಿ ಶನಿವಾರ ಬೆಳಗ್ಗೆ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಪಟ್ಟಣದ ಮುರುಗನ್ ಚಿತ್ರಮಂದಿರದ ಪಕ್ಕದಲ್ಲಿರುವ ತಿಬ್ಬಾದೇವಿ ಟೀ ಅಂಗಡಿಯ ಮಾಲೀಕ ರಮೇಶ್ ಹಾಗೂ ಇವರ ಪತ್ನಿ ಶೋಭಾ ಅವರ ಮೇಲೆ ಹಲ್ಲೆ ನಡೆದಿದ್ದು, ಈ ಸಂಬಂಧ ಭರತ್ ಹಾಗೂ ಸ್ನೇಕ್ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿ, ತನಿಖೆ ನಡೆಸುತ್ತಿದ್ದಾರೆ.

ಘಟನೆಯ ವಿವರ: ರಮೇಶ್ ಅವರು ಪಟ್ಟಣದಲ್ಲಿ ಟೀ ಅಂಗಡಿಯನ್ನು ಇಟ್ಟುಕೊಂಡಿದ್ದು, ಜೂ.10, ಶುಕ್ರವಾರ ರಾತ್ರಿ 10ಗಂಟೆಯ ಸುಮಾರಿನಲ್ಲಿ ಇಬ್ಬರು ಯುವಕರು ಅಂಗಡಿಗೆ ಬಂದು ಲೈಟರ್ ಕೇಳಿದರೆ, ಆಗ ರಮೇಶ್ ಒಂದು ಲೈಟರ್‌ಗೆ 20ರೂ. ಎಂದು ಹೇಳಿದಾಗ, ಮೈಸೂರಿನಲ್ಲಿ ಒಂದು ಲೈಟರ್‌ಗೆ 15ರೂ. ಇದೆ. ನೀನು ಹೆಚ್ಚಿನ ಬೆಲೆಯನ್ನು ಕೇಳುತ್ತೀಯಾ ಎಂದು ಅಂಗಡಿ ಮಾಲೀಕ ರಮೇಶ್‌ನನ್ನು ಅವಾಚ್ಯ ಶಬ್ಧಗಳಿಂದ ಬೈದು ಹೋಗಿದ್ದಾರೆ. ಮತ್ತೆ ಮಾರನೇ ದಿನ ಬೆಳಗ್ಗೆ (ಶನಿವಾರ) 7–8ಜನರೊಂದಿಗೆ ಅಂಗಡಿಗೆ ಬಂದ ಪುಂಡರು, ರಮೇಶ್ ಹಾಗೂ ಆತನ ಪತ್ನಿಯ ಮೇಲೆ ಹಲ್ಲೆ ನಡೆಸಿ, ಅಂಗಡಿ ಸಾಮಗ್ರಿಗಳನ್ನು ಧ್ವಂಸಗೊಳಿಸಿದ್ದಾರೆ ಎಂದು ಪೊಲೀಸರಿಗೆ ರಮೇಶ್ ದೂರು ನೀಡಿದ್ದಾರೆ. ಘಟನೆಯಿಂದ ತೀವ್ರ ಗಾಯಗೊಂಡಿದ್ದ ದಂಪತಿಯನ್ನು ಸ್ಥಳೀಯರು ಪಟ್ಟಣದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಟಿ.ನರಸೀಪುರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣ ಸಂಬಂಧ ಪೊಲೀಸರು ಇಬ್ಬರನ್ನು ಬಂಧಿಸಿ, ಉಳಿದವರ ಪತ್ತೆಗೆ ಬಲೆ ಬೀಸಿದ್ದಾರೆ.

ಹುಣ್ಣಿಮೆ ಪೂಜೆ: ನಂ.ಗೂಡಿಗೆ ಹರಿದು ಬಂದ ಭಕ್ತ ಸಾಗರ

ನಂಜನಗೂಡು, ಜೂ.14(ಸುದರ್ಶನ್)– ಹುಣ್ಣಿಮೆಯ ಅಂಗವಾಗಿ ಮಂಗಳವಾರ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯ ದರ್ಶನಕ್ಕೆ ಭಕ್ತರ ಸಾಗರ ಹರಿದು ಬಂದಿತು. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆಯಿಂದ ಭಕ್ತರು ಬೆಳಗ್ಗೆಯೇ ದೇವಸ್ಥಾನಕ್ಕೆ ಬಂದು ಕಪಿಲಾ ನದಿಯಲ್ಲಿ ಸ್ನಾನ ಮಾಡಿ, ಶ್ರೀಕಂಠೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿದರು. ಕೆಲವು ಭಕ್ತರು ಉರುಳು ಸೇವೆ, ಮುಡಿ ಸೇವೆ ಸಲ್ಲಿಸಿದರು. ಮಹಿಳೆಯರು ಪಂಚ ಮುಡಿ ಕೊಟ್ಟು ತಮ್ಮ ಹರಕೆ ತೀರಿಸಿದರು. ಭಕ್ತರಿಗಾಗಿ ಅಧಿಕಾರಿಗಳು ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.



ಶಾಂತವೀರಮ್ಮ ದೇವಸ್ಥಾನದಲ್ಲಿ ಶಾಸಕರಿಂದ ಪೂಜೆ



ಬೆಟ್ಟದಪುರ, ಜೂ.14(ಶಿವದೇವ್)– ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮ ದೇವತೆ ಶಾಂತವೀರಮ್ಮ ಅವರ ದೇವಸ್ಥಾನಕ್ಕೆ ಮಂಗಳವಾರ ಶಾಸಕ ಕೆ.ಮಹದೇವ್ ಹಾಗೂ ಅವರ ಪತ್ನಿ ಸುಭದ್ರಮ್ಮ ಭೇಟಿ ನೀಡಿ, ದುರ್ಗಾ ಪೂಜೆ, ಹೋಮ ನೆರವೇರಿಸಿದರು.

ಈ ವೇಳೆ ಶಾಸಕರು ಮಾತನಾಡಿ, ಗ್ರಾಮದಲ್ಲಿ ಶಾಂತಿ ಮತ್ತು ನೆಮ್ಮದಿ ನೀಡಲಿ ಎಂದು ಗ್ರಾಮ ದೇವತೆಗೆ ಪೂಜೆ ಸಲ್ಲಿಸಲಾಗುತ್ತಿದೆ ಎಂದರು. ದುರ್ಗಾ ಹೋಮವನ್ನು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಭಾಶಂಕರ್ ಹಾಗೂ ತಂಡದವರು ನೆರವೇರಿಸಿದರು.

ಗ್ರಾಮದ ಮುಖಂಡರಾದ ಪಟೇಲ್ ನಟೇಶ್, ಸುರೇಶ್, ದೇವರಾಜು, ತಿಮ್ಮಪ್ಪ ಶಿವದೇವ್, ಲಾರಿ ನಾರಾಯಣ, ಗುತ್ತಿಗೆದಾರ ಲೋಕೇಶ್, ರಾಜು, ನಾರಾಯಣ್‌ಗೌಡ, ರಂಗೇಗೌಡ, ಚಿಕ್ಕಣ್ಣಾಚಾರ್, ರಘುಗೌಡ, ನಾಗರಾಜಶೆಟ್ಟಿ, ರಾಜೇಂದ್ರ, ಮಹದೇವಪ್ಪ, ಶಂಕರ, ಶ್ಯಾಮ್, ನಾಗೇಶ, ಸೋಮಶೇಖರ ಹಾಜರಿದ್ದರು. ಬಳಿಕ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ವೈಭವದಿಂದ ನಡೆದ ಡೋರ್ನಹಳ್ಳಿ ಜಾತ್ರೆ

ಕೆ.ಆರ್.ನಗರ, ಜೂ.14 (ಕೆಟಿಆರ್)– ತಾಲೂಕಿನ ಇತಿಹಾಸ ಪ್ರಸಿದ್ಧ ಡೋರ್ನಹಳ್ಳಿಯ ಸಂತ ಅಂತೋಣಿಯವರ ವಾರ್ಷಿಕೋತ್ಸವ ಹಾಗೂ ಜಾತ್ರಾ ಮಹೋತ್ಸವವು ಸೋಮವಾರ ಕ್ರೈಸ್ತ ಧಾರ್ಮಿಕ ವಿಧಿ ವಿಧಾನದಂತೆ ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ 10 ಗಂಟೆಗೆ ಮೈಸೂರು ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷ ಡಾ.ಕೆ.ಅಂಟೋನಿ ವಿಲಿಯಂ ಅವರಿಂದ ಹಬ್ಬಕ್ಕೆ ಬಲಿಪೂಜೆಯೊಂದಿಗೆ ಚಾಲನೆ ನೀಡಲಾಯಿತು. 11.30ಕ್ಕೆ ಊಟಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಅಮಲ್‌ರಾಜ್ ಅವರಿಂದ ತಮಿಳು ಬಲಿಪೂಜೆ ನಡೆಯಿತು. ಆ ನಂತರ ಪಾಮುವನಿಗಿನಿಯ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷ ಡಾ.ರೊಜಾರಿಯೋ ಮಿನೇಜಸ್ ಅವರ ಆಂಗ್ಲ ಬಲಿಪೂಜೆ ಮತ್ತು ಕರ್ನಾಟಕ ಪ್ರಾಂತೀಯ ಧರ್ಮಾಧ್ಯಕ್ಷರ ಆಯೋಗದ ಕಾರ್ಯದರ್ಶಿ ಗುರುಜಯ ನಾದನ್ ಅವರ ಕನ್ನಡ ಬಲಿಪೂಜೆಯೊಂದಿಗೆ ಜಾತ್ರೆ ಮತ್ತು ಬಸಿಲಿಕಾದ ಧಾರ್ಮಿಕ ಕಾರ್ಯಕ್ರಮ ಸಮಾಪ್ತಿಗೊಂಡಿತ್ತು.

ಸಂಜೆ 7 ಗಂಟೆಗೆ ಚರ್ಚ್‌ನ ಮುಂಭಾಗದಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ಸಂತ ಅಂತೋಣಿಯವರ ಶೃಂಗಾರ ಭರಿತ ವೈಭವದ ತೇರಿನ ಮೆರವಣಿಗೆಗೆ ಚಾಲನೆ ನೀಡಲಾಯಿತು. ಭಕ್ತರು ಉಪ್ಪು, ಮೆಣಸು ಎರಚಿ ತಮ್ಮ ಇಷ್ಟಾರ್ಥ ದೈವ ಸಂತ ಅಂತೋಣಿ ದೇವರಿಗೆ ಹರಕೆ, ಕಾಣಿಕೆ ಸಲ್ಲಿಸಿದರು.



ವಾರ್ಷಿಕ ಜಾತ್ರಾ ಮಹೋತ್ಸವದ ನೇತೃತ್ವವನ್ನು ಡೋರ್ನಹಳ್ಳಿ ಸಂತ ಅಂತೋಣಿಯವರ ಬಸಿಲಿಕಾದ ಎನ್.ಟಿ.ಜೋಸೆಫ್ ಮತ್ತು ಆಡಳಿತಾಧಿಕಾರಿ ಐಸಾಕ್‌ರತ್ನಾಕರ್ ವಹಿಸಿದ್ದರು. ಜಾತ್ರಾ ಮಹೋತ್ಸವದಲ್ಲಿ ಲಾಳಂದೇವನಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಮ್ಮ ಸಿದ್ದಪ್ಪ, ಸದಸ್ಯರಾದ ಬಾಲಾಜಿ, ಗಣೇಶ್, ಚೌರಪ್ಪ ಎಂ.ಸುನಿಲ್, ಮಾಜಿ ಸದಸ್ಯ ಹೊಸಹಳ್ಳಿ ಪುಟ್ಟರಾಜು, ಮುಖಂಡ ಶಂಕರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಅರ್ಹರಿಗೆ ಸರ್ಕಾರದ ಯೋಜನೆ ತಲುಪಿಸಲು ಸಹಕರಿಸಿ



ಭೇರ್ಯ, ಜೂ.14– ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು 2020–21ನೇ ಸಾಲಿನ ಅಭಿವೃದ್ಧಿ ಕಾರ್ಯಕ್ರಮದಡಿ ಜನಪರ ಕೆಲಸ ಮಾಡಿದ್ದೇನೆ ಎಂದು ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ ರಮೇಶ್ ಹೇಳಿದರು.

ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದಿಂದ ಬಂದ ಜನಪರ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಎಲ್ಲರೂ ಸಹಕರಿಸಿ ಎಂದು ಮನವಿ ಮಾಡಿದರು.

ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳ ಕೆರೆ ಕಟ್ಟೆಗಳ ಅಭಿವೃದ್ಧಿಗೆ ಅಂದಾಜು 45 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಕೆರೆಗಳ ಅಭಿವೃದ್ಧಿ ಮಾಡಲಾಗಿದ್ದು, ಇದರ ಜೊತೆಗೆ ಪಂಚಾಯಿತಿಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ರಾಜೀವ್ ಗಾಂಧಿ ಸೇವಾ ಕೇಂದ್ರದ ಯೋಜನೆಯಡಿ 15 ಲಕ್ಷ ಮೀಸಲಿಡಲಾಗಿದೆ ಎಂದು ತಿಳಿಸಿದರು.

ಈ ವೇಳೆ ತಾಲೂಕು ನೋಡಲ್ ಅಧಿಕಾರಿ ಧರಣೇಶ್, ಗ್ರಾಪಂ ಉಪಾಧ್ಯಕ್ಷೆ ಶೈಲಜಾ ಯೋಗೇಶ್, ಸದಸ್ಯರಾದ ಪ್ರದೀಪ್, ಜಯರಾಮ್, ಎಸ್.ಆರ್.ಮಂಜುಳಾ, ಗೋಪಾಲ್, ಮಹದೇವ್, ಲತಾ ಲೋಕೇಶ್, ರೇಣುಕಾ ರಾಮಕೃಷ್ಣ, ಆರ್.ಮಂಜುಳಾ, ಸಾಮಾಜಿಕ ಲೆಕ್ಕಪರಿಶೋಧನಾಧಿಕಾರಿ ಗೌರೀಶ್, ಪಿಡಿಓ ಮಹದೇವ್, ತಾಂತ್ರಿಕಾಧಿಕಾರಿ ಶೃತಿ, ಸಿಬ್ಬಂದಿ ನೇತ್ರಾವತಿ ಇತರರು ಹಾಜರಿದ್ದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ತಿ.ನರಸೀಪುರ, ಜೂ.14(ಎಸ್‌ಕೆ)– ಪಟ್ಟಣದ ಸರ್ಕಾರಿ ಆಸ್ಪತ್ರೆ ರಸ್ತೆಯ ರೆಡ್ಡಿ ಕಾಲೋನಿ ಪಕ್ಕದಲ್ಲಿರುವ ಬೃಂದಾ ಆಸ್ಪತ್ರೆಯಲ್ಲಿ ಜೂ.15ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮೈಸೂರಿನ ಕೆವಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಬೃಂದಾ ಆಸ್ಪತ್ರೆಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಔಷಧಿಗಳ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೃಂದಾ ಆಸ್ಪತ್ರೆಯ 2ನೇ ವಾರ್ಷಿಕೋತ್ಸವದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ತಾಲೂಕಿನ ಜನತೆ ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ಎಸ್.ಗುರು ತಿಳಿಸಿದರು.

ಬಿಜೆಪಿ ಎಸ್‌ಸಿ ಮೋರ್ಚಾದ ಕ್ಷೇತ್ರಾಧ್ಯಕ್ಷ ಸೋಸಲೆ ಶಿವಕುಮಾರ್ ಮಾತನಾಡಿ, ಶಿಬಿರದಲ್ಲಿ ಅರವಳಿಕೆ ತಜ್ಞ ಡಾ.ಪುನೀತ್‌ರಾಟೆ, ಕೀಲು ಮತ್ತು ಮೂಳೆ ರೋಗ ತಜ್ಞ ಡಾ.ಮಹದೇವಪ್ರಸಾದ್,



ಜನರಲ್ ಫಿಜಿಷಿಯನ್ ಡಾ.ಪ್ರದೀಪ್, ಪ್ರಸೂತಿ ತಜ್ಞೆ ಡಾ.ಕವಿತಾ ಶಶಿಧರ್, ಆರ್ಥೋ ಸ್ಪೈನ್ ಸರ್ಜನ್ ಡಾ.ನಂದೀಶ್‌ಕುಮಾರ್, ಗ್ಯಾಸ್ಟ್ರೋ ಸರ್ಜನ್ ಡಾ.ಬಿ.ದೀಪಕ್, ಡಾ.ಚಂದ್ರಕಾಂತ್, ಡಾ.ಬಿ.ಸೋಹನ್ ಪಾಲ್ಗೊಳ್ಳಲಿದ್ದು, ಸಾರ್ವಜನಿಕರು ತಪಾಸಣೆಗೆ ಒಳಗಾಗಿ ವೈದ್ಯರ ಸಲಹೆ ಪಡೆದುಕೊಳ್ಳಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಜನರಲ್ ಫಿಜಿಷಿಯನ್ ಡಾ.ಪ್ರದೀಪ್, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಆರ್.ಮಣಿಕಂಠ ರಾಜುಗೌಡ, ಕಾರ್ಮಿಕ ಸಂಘದ ಕಾರ್ಯದರ್ಶಿ ಚೇತನ್, ಜಿ.ರಾಘು ಇದ್ದರು.

ಮದ್ಯವರ್ಜನ ಶಿಬಿರದಿಂದ ಅಪರಾಧ ಪ್ರಕರಣ ಕಡಿಮೆ



ಹೆಚ್.ಡಿ.ಕೋಟೆ, ಜೂ.14(ಮಂಜು)– ಮದ್ಯವರ್ಜನ ಶಿಬಿರ ನಡೆಸುವುದರಿಂದ ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಕಡಿಮೆ ಆಗಲಿದೆ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ಆನಂದ್ ತಿಳಿಸಿದರು.

ತಾಲೂಕಿನ ಹ್ಯಾಂಡ್ ಪೋಸ್ಟ್‌ನ ಸಿದ್ದೇಗೌಡ ಕಲ್ಯಾಣ ಮಂಟಪದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹಾಗೂ ವಿವಿಧ ಸಂಘ ಸಂಸ್ಥೆಯಿಂದ ನಡೆದ ಮದ್ಯವರ್ಜನ ಶಿಬಿರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮದ್ಯ ವ್ಯಸನಕ್ಕೆ ದಾಸರಾಗುವ ಮೂಲಕ ಸಮಾಜದಲ್ಲಿ ಅಶಾಂತಿ ಉಂಟಾಗುತ್ತಿದೆ. ಇದರಿಂದಲೂ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮದ್ಯವರ್ಜನ ಶಿಬಿರಗಳಲ್ಲಿ ಭಾಗವಹಿಸಿರುವ ನೀವು ಕೀಳರಿಮೆ ಬಿಟ್ಟು ಶಿಬಿರದ ಪ್ರಯೋಜನ ಪಡೆದು ವ್ಯಸನ ಮುಕ್ತರಾಗಬೇಕು ಎಂದರು.

ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಜಿಲ್ಲಾ ಯೋಜನಾ ನಿರ್ದೇಶಕ ಲಕ್ಷ್ಮಣ್ ಮಾತನಾಡಿದರು. ಅಧ್ಯಕ್ಷತೆಯನ್ನು ಪುರಸಭಾ ಸದಸ್ಯ ಹಾಗೂ ಮದ್ಯವರ್ಜನ ಶಿಬಿರದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪ್ರೇಮ್‌ಸಾಗರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ತಾಲೂಕು ಯೋಜನಾ ಅಧಿಕಾರಿ ಎಂ.ಶಶಿಧರ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ನಾಟಿ ವೈದ್ಯ ಜಕ್ಕಹಳ್ಳಿ ಶಿವರಾಜಪ್ಪ, ಸಬ್‌ಇನ್‌ಸ್ಪೆಕ್ಟರ್ ರಸುಲ್ಲಾ ವಾಲೇಕರ್, ತಾಲೂಕು ಮಹಿಳಾ ಒಕ್ಕೂಟ ಅಧ್ಯಕ್ಷೆ ಶೈಲಾ, ಸುಧಾ, ಮಣಿ, ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ಜನಜಾಗೃತಿ ಜಿಲ್ಲಾ ಯೋಜನಾ ಅಧಿಕಾರಿ ಭಾಸ್ಕರ್, ಶಿಬಿರ ಅಧಿಕಾರಿ ದಿವಾಕರ್ ಪೂಜಾರಿ, ಆರೋಗ್ಯ ಸಹಾಯಕಿ ನೇತ್ರಾವತಿ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಅಶ್ವಿನಿ, ವಲಯ ಮೇಲ್ವಿಚಾರಕ ವಸಂತ್‌ಕುಮಾರ್, ಪವಿತ್ರ, ಕೃಷ್ಣಮೂರ್ತಿ, ಭಾರತಿ, ಚಿಕ್ಕಣ್ಣ, ಜಯಮ್ಮ, ಇಂದ್ರಮ್ಮ, ಪ್ರಕಾಶ್, ಮಹದೇವೆಗೌಡ, ಈರೇಗೌಡ ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್(3ಡಿ)(ಇಂ): ಬೆ.9.55ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, **777 ಚಾರ್ಲಿ (ಕ)**: ಮ.12.55ಕ್ಕೆ, ರಾ.7ಕ್ಕೆ.
ಸ್ಕ್ರೀನ್ 2	ಡಿಯರ್ ಫ್ರೆಂಡ್ (ಮ): ಬೆ.9.55ಕ್ಕೆ, ವಿಕ್ರಂ (ತ): ಮ.12.20ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.3.30ಕ್ಕೆ, ಸಂ.6.50ಕ್ಕೆ, **777 ಚಾರ್ಲಿ (ಕ)**: ರಾ.10.10ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.9.30ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ಶ್ರೀ ಅಲ್ಲಮ್ಮಪ್ರಭು (ಕ): ಮ.12.45ಕ್ಕೆ, ಅಂಟೆ ಸುಂದರಾನಿಕಿ (ತೆ): ರಾ.10.10ಕ್ಕೆ.
ಸ್ಕ್ರೀನ್ 4	**777 ಚಾರ್ಲಿ (ಕ)**: ಬೆ.9.35ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, ಜುರಾಸಿಕ್ ವರ್ಲ್ಡ್ (3ಡಿ)(ಇಂ): ಮ.1ಕ್ಕೆ, ರಾ.7.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್ (3ಡಿ)(ಇಂ): ಬೆ.9.30ಕ್ಕೆ, ಮ.12.35ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**777 ಚಾರ್ಲಿ (ಕ)**: ಬೆ.9.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಬೂಲ್ ಬುಲಾಯ್ಯ 2 (ಹಿಂ): ಮ.12.40ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.11ಕ್ಕೆ, ಸಂ.6.10ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.2.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಅಂಟೆ ಸುಂದರಾನಿಕಿ (ತೆ): ಬೆ.9.40ಕ್ಕೆ, **777 ಚಾರ್ಲಿ (ಕ)**: ಮ.1.05ಕ್ಕೆ, ಸಂ.4.25ಕ್ಕೆ, ಡಿಯರ್ ಫ್ರೆಂಡ್ (ಮ): ರಾ.7.45ಕ್ಕೆ, ವಿಕ್ರಂ (ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, **F3** (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಾರ್ಲಿ–777 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಚಾರ್ಲಿ–777 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಡಾನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಮ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಅವತಾರ ಪುರುಷ (ಕ)	4 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸುಗಳು



5 ನೇ ದಿನ, ಬುಧವಾರ 15–06–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ)

I. ರಿನೋವ್ಡ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಶಿವಾಲಿಕ್ ಸೌಂಡ್ 2. ಸೈಂಟ್ ಲೂಸಿಯಾ 3. ಗ್ರಾಂಡ್ ಚೆವೆಲರ್

II. ಆಲ್ ಬೆರೆಟ್ಟೋ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. –ಮ.3.00ಕ್ಕೆ
1. ಸ್ಯಾಂಟೊರಿನಿ 2. ಡಿಲಾರ್ಡ್ 3. ಓ ಕನ್ನಯ್ಯ

III. ಕಪಿಲಾ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1 ಅಮೇಜಿಂಗ್ ಸಫಾರಿ 2 ಡಿ ದುರ್ಗ 3. ಕ್ಯಾಲಿಫೋರ್ನಿಯ ಗೋಲ್ಡ್

IV. ಕಾವೇರಿ ಮಿಲಿಯನ್ 2022 –1400 ಮೀ. 4 ವರ್ಷದ (ಟರ್ಮ್ಸ್). ಸಂಜೆ.4.00ಕ್ಕೆ
1. ಪ್ರೈಸ್‌ಲೆಸ್ ಗೋಲ್ಡ್ 2. ಮೈ ಒಪಿನಿಯನ್ 3. ಬೆಲ್ಲಾಟಾರ್


V. ಹೆಗ್ಗಡದೇವನಕೋಟೆ ಪ್ಲೇಟ್ –1200 ಮೀ. ರೇಟೆಡ್ 60 ರಿಂದ 85. ಸಂ.4.30ಕ್ಕೆ
1. ಟ್ರೇಸರ್ ಬುಲೆಟ್ 2. ಕೋರ್ಟ್ ಜಸ್ಟರ್ 3. ಅಭಿನಂದನ್

VI. ಒಬ್ಲಿಗಾಡೋ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಡ್ರುಸ್ಸಿಲ್ಲಾ 2. ಡಿ ಬ್ರದರ್ 3. ಥಿಯಾಮಾರಿಯಾ

ದಿನದ ಅತ್ಯುತ್ತಮ	: ಪ್ರೈಸ್‌ಲೆಸ್ ಗೋಲ್ಡ್
ಡಬ್ಬಲ್	: ಟ್ರೇಸರ್ ಬುಲೆಟ್, ಡ್ರುಸ್ಸಿಲ್ಲಾ
ಜಾಕ್‌ಪಾಟ್	: 2, 3, 4, 5 ಮತ್ತು 6
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
ಎಕ್ಸ್‌ಆಕ್ಸ್	: 5 ಮತ್ತು 6

ಟಿಪ್‌ಸ್ಟರ್ ಪಿಜಿಸಿ

ನಾಗೇಂದ್ರಪ್ಪ ನಿಧನ



ಹೆಚ್.ಡಿ.ಕೋಟೆ, ಜೂ.14– ಪಟ್ಟಣದ ವೆಂಕಟೇಶ್ವರ ಹೋಟೆಲ್ ಮಾಲೀಕರಾದ ನಾಗೇಂದ್ರಪ್ಪ(72) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

'ಕೌಟಿಲ್ಯನ ಅರ್ಥಶಾಸ್ತ್ರ: ಎ ಟೈಮ್‌ಲೆಸ್ ಸ್ಟ್ರಾಟಜಿ ಫಾರ್ ಸ್ಟೇಟ್ ಕ್ರಾಫ್ಟ್' ಉಪನ್ಯಾಸ





ಮೈಸೂರು,ಜೂ 14(ಜಿಎ)– ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮೈಸೂರು ಕೇಂದ್ರದ ವತಿಯಿಂದ ನಗರದ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ. ಭಟ್ ಸಭಾಂಗಣದಲ್ಲಿ 'ಕೌಟಿಲ್ಯನ ಅರ್ಥಶಾಸ್ತ್ರ: ಎ ಟೈಮ್‌ಲೆಸ್ ಸ್ಟ್ರಾಟಜಿ ಫಾರ್ ಸ್ಟೇಟ್ ಕ್ರಾಫ್ಟ್' ಎಂಬ ವಿಷಯ ಕುರಿತು ತಾಂತ್ರಿಕ ಉಪನ್ಯಾಸವನ್ನು ಮಂಗಳವಾರ ಸಂಜೆ ಆಯೋಜಿಸಲಾಗಿತ್ತು.

ಉಪನ್ಯಾಸ ಕಾರ್ಯಕ್ರಮದಲ್ಲಿ ಇಂಡಿಯನ್ ಏರ್‌ಫೋರ್ಸ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ. ವಿನಯ್ ವಿಠಲ್ ಅವರು 'ಕೌಟಿಲ್ಯನ ಅರ್ಥಶಾಸ್ತ್ರ : ಎ ಟೈಮ್‌ಲೆಸ್ ಸ್ಟ್ರಾಟಜಿ ಫಾರ್ ಸ್ಟೇಟ್ ಕ್ರಾಫ್ಟ್' ಎಂಬ ವಿಷಯದ ಕುರಿತು ಪವರ್ ಪಾಯಿಂಟ್ ಮೂಲಕ ಉಪನ್ಯಾಸ ನೀಡಿದರು.

ನಮ್ಮ ತಂದೆ ಮೂಲತಃ ಮೈಸೂರಿನವರು, ಆದರೆ ಅವರ ಕೆಲಸ ನಿಮಿತ್ತ ನಾವು ದೂರದ ದೆಹಲಿಗೆ ಹೋಗ ಬೇಕಾಯಿತು. ಅಲ್ಲಿಗೆ ತೆರಳಿದ ಮೇಲೆ ನಾನು ಮೊಟ್ಟ ಮೊದಲ ಬಾರಿ ಗಣರಾಜ್ಯೋತ್ಸವ ಪಥಸಂಚಲನವನ್ನು ನೋಡಿದೆ. ಅಲ್ಲಿ ಇಂಡಿಯನ್ ಏರ್‌ಫೋರ್ಸ್ ಶಕ್ತಿ ಪ್ರದರ್ಶನ ನೋಡಿದ ನನಗೆ ಇಂಡಿಯನ್ ಏರ್‌ಫೋರ್ಸ್ ಸೇರಬೇಕು, ಎಂಬ ಆಸೆಯುಂಟಾಯಿತು ಎಂದರು.

ಯಾವುದೇ ಕ್ಷೇತ್ರಕ್ಕೆ ಹೋದರು ಹೆಚ್ಚು ಓದಬೇಕು. ಆದರೆ ಇಂಡಿಯನ್ ಏರ್ ಫೋರ್ಸ್ ಸೇರಿದರೆ ಹೆಚ್ಚು ಓದುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿದು ಅಲ್ಲಿಗೆ ಸೇರಿಕೊಂಡೆ ಆದರೆ ಅಲ್ಲಿಯೂ ಪ್ರತಿ ವರ್ಷ ಎರಡು ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಿತ್ತು. ಅದಕ್ಕಾಗಿ ನಾನು ಪ್ರತಿ ನಿತ್ಯ 300 ಪುಟಗಳ ಪುಸ್ತಕಗಳನ್ನು ಓದುತ್ತಿದ್ದೆ ಎಂದು ಅವರು ಸ್ಮರಿಸಿಕೊಂಡರು.

ನಮ್ಮ ದೇಶದಲ್ಲಿ ಶೇ.95ರಷ್ಟು ಜನ ಕೌಟಿಲ್ಯ ಮತ್ತು ಅರ್ಥಶಾಸ್ತ್ರದ ಬಗ್ಗೆ ಮಾತನಾಡುತ್ತಾರೆ. ಆದರೆ ಚರ್ಚೆಗೆ ಮುನ್ನವೆ ಅದನ್ನು ಅಲ್ಲಿಗೆ ನಿಲ್ಲಿಸುತ್ತಾರೆ. ಆದರೆ ಕೌಟಿಲ್ಯನ ಅರ್ಥಶಾಸ್ತ್ರವು ಪ್ರಾಚೀನ ಭಾರತೀಯ ಸಂಕಲನದ ರಾಜಕೀಯ ಬುದ್ಧಿವಂತಿಕೆ, ಸಿದ್ಧಾಂತ ಮತ್ತು ಸ್ಟೇಟ್ ಕ್ರಾಫ್ಟ್ ಕಲೆಯ ಒಳನೋಟವನ್ನು ಒದಗಿಸುತ್ತದೆ ಎಂದ ಅವರು ಟೈಮ್ ಲೆಸ್ ಪರಿಕಲ್ಪನೆಗಳ ಸಂಗ್ರಹವನ್ನು ರೂಪಿಸುವ ಪ್ರಮುಖ ರಾಜಕೀಯ ಮತ್ತು ಕಾರ್ಯತಂತ್ರದ ಗ್ರಂಥಗಳಲ್ಲಿ ಒಂದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮೈಸೂರು ಕೇಂದ್ರದ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಸಂಚಾಲಕ ಅನಿಲ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯರನ್ನು ಸಿಎಂ ಮಾಡಲು ಜೆಡಿಎಸ್ ಬಿಟ್ಟಿದ್ದೆ



ಬೆಂಗಳೂರು: ಸಿದ್ದರಾಮಯ್ಯ ಅವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಲು ನಾನು ಜೆಡಿಎಸ್ ಬಿಟ್ಟು ಬಂದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಇಂದಿಲ್ಲಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಬಗ್ಗೆ ನಾವು ಜಾತಿ ನಿಂದನೆ ಮಾಡಿಲ್ಲ. ನಮ್ಮ ಪಕ್ಷದ ಕಾರ್ಯಕರ್ತರು ಯಾರಾದರೂ ಜಾತಿ ನಿಂದನೆ ಮಾಡಿದರೆ ನಾನು ಕ್ಷಮೆ ಕೇಳುತ್ತೇನೆ. ಹಾಲಮತದ ಸಮಾಜದ ವಿರುದ್ಧ ನಾವು ಯಾರೂ ಮಾತಾಡಿಲ್ಲ. ಸಿದ್ದರಾಮಯ್ಯ ಸಿಎಂ ಮಾಡಲು ಜೆಡಿಎಸ್ ಬಿಟ್ಟು ಬಂದೆ. ಬಾದಾಮಿಯಲ್ಲಿ ಗೆಲ್ಲಿಸಿದ್ದು ನಾನು. ಹೀಗಿರುವಾಗ ನಾನು ಯಾಕೆ ಅವರ ಜಾತಿ ಬಗ್ಗೆ ಮಾತಾಡಲಿ. ನಮ್ಮ ಸಮಾಜ ಸಣ್ಣ ಸಮಾಜ. ಸಿದ್ದರಾಮಯ್ಯ ಭಾಷೆಯಲ್ಲಿ ಉತ್ತರ ಕೊಡಲು ನಮಗೆ ಆಗಲ್ಲ. ರಾಜ್ಯಸಭೆ ಸೋಲು ನಮಗೆ ಸಿಕ್ಕಿರೋ ಜಯ. ಬಿಜೆಪಿ ಬಿ ಟೀಂ ಯಾರು ಅಂತ ಈಗ ಎಲ್ಲರಿಗೂ ಗೊತ್ತಾಗಿದೆ. ನಮ್ಮ ಕೆಲಸ ನಾವು ಮುಂದೆ ಮಾಡ್ತೀವಿ ಎಂದರು.

ಬಿಜೆಪಿಯಿಂದ ಪಠ್ಯ ಪುಸ್ತಕ ತಿರುಚೋ ಕೆಲಸ ಆಗಿದೆ. ಬಸವಣ್ಣರ ಪಠ್ಯಕ್ಕೆ ಎಲ್ಲಾ ಸ್ವಾಮೀಜಿಗಳು ವಿರೋಧ ಮಾಡಿದ್ದಾರೆ. ಸಾಣೇಹಳ್ಳಿ ಶ್ರೀಗಳನ್ನೇ ಸಮಿತಿ ಅಧ್ಯಕ್ಷರಾಗಿ ಬಸವಣ್ಣ ಪಠ್ಯ ರೆಡಿ ಮಾಡಿಸಿ. ಅವರೇ ಬಸವಣ್ಣ ಪುಸ್ತಕ ರೆಡಿ ಮಾಡಲಿ. ಬಿಜೆಪಿ ಇತಿಹಾಸ ತಿರುಚೋ ಕೆಲಸ ಮಾಡುತ್ತಿದೆ ಎಂದರು. ಕಾಂಗ್ರೆಸ್‌ನವರು ಯಾಕೆ ಇಡಿ ದಾಳಿ ಬಗ್ಗೆ ಪ್ರತಿಭಟನೆ ಮಾಡುತ್ತಿದ್ದಾರೆ. ಇಲ್ಲಿ ನಮ್ಮ ಶಾಸಕರಿಂದ ಅಡ್ಡ ಮತದಾನ ಮಾಡಿಸಿಕೊಂಡಿದ್ದಾರೆ. ಇದು ಮಾತ್ರ ಸರಿನಾ, ಇಲ್ಲಿ ಅಡ್ಡಮತದಾನ ಮಾಡಿಸಿ, ಅಲ್ಲಿ ಇಡಿ ದಾಳಿ ಬಗ್ಗೆ ಪ್ರತಿಭಟನೆ ಮಾಡೋಕೆ ಅವರಿಗೆ ಯಾವ ನೈತಿಕತೆ ಇದೆ ಎಂದು ಕಾಂಗ್ರೆಸ್ ಮೇಲೆ ಸಿಎಂ ಇಬ್ರಾಹಿಂ ವಾಗ್ದಾಳಿ ನಡೆಸಿದರು.

ಬೆಂಗಳೂರಲ್ಲಿ 'ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ತಂತ್ರಜ್ಞಾನ ಕೇಂದ್ರ' ಸ್ಥಾಪನೆ

ಬೆಂಗಳೂರು, ಜೂ. 14 – ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (ಎನ್‌ಎಚ್‌ಎ) ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ತಂತ್ರಜ್ಞಾನ ಕೇಂದ್ರ ಸ್ಥಾಪಿಸುವುದಾಗಿ ತಿಳಿಸಿದೆ.

ನಗರದಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ತಂತ್ರಜ್ಞಾನ ಕೇಂದ್ರ ಸ್ಥಾಪನೆಯಾಗಿದ್ದೇ ಆದರೆ, ಇದು ಇಲ್ಲಿಯವರೆಗೆ ಹಿಂದುಳಿದಿರುವ ಕರ್ನಾಟಕದ ಮಿಷನ್‌ನ ಪ್ರಗತಿಗೆ ಗಮನಾರ್ಹವಾದ ಉತ್ತೇಜನವನ್ನು ನೀಡಲಿದೆ. ನಗರವು ಹೆಚ್ಚಿನ ಸೇವಾ ಪೂರೈಕೆದಾರರನ್ನು ಹೊಂದಿರುವ ಡಿಜಿಟಲ್ ಹಬ್ ಆಗಿದ್ದು, ಈ ಹಿನ್ನೆಲೆಯಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ತಂತ್ರಜ್ಞಾನ ಕೇಂದ್ರ ಸ್ಥಾಪನೆಗೆ ಬೆಂಗಳೂರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿದುಬಂದಿದೆ.

PUBLIC NOTICE

This is to notify the general public that the registered general power of attorney dated: 13-09-2013 executed by:-
1) Smt. Bhagyamma W/o N.Nagaraju, 2) N.Nagaraju S/o Late. Nagaiah, 3) H.N.Manjunath S/o N.Nagaraju, 4) H.N.Sowmya D/o N.Nagaraju, 5) H.N.Roopini D/o N.Nagaraju.

All resident of Saraswathipuram, Santhemala, Hunsur City in favour of P.B.Mahendra S/o Late. P.M.Basavaraju No.744/12B Shivagowri Nilaya, Giridarshini Layout, Halanahalli, Mysore, before sub Registrar Hunsur in Book No.1 Volume HUN-4008217-2013-14 in CD No.HUND 127 is hereby revoked and stands cancelled with effect from dt. 11-6-2022 in respect of schedule property mentioned below:-

SCHEDULE

Agricultural property measuring 2 acre in Sy no. 105/B27 Situated at Beejaganahalli Village, Kasaba Hobli, Hunsur Taluk, Mysore District Bounded on:- East by : Puttabovi and Dasabovi, West by: Road, North by : Property of Devaraj / Rajabovi, South by: Property of K.R.Chandrashekar.

Sd/-
M.R.Harish, B.Com., G.D.C., L.L.B, Advocate
Date: 13.06.2022
Opp. Maruthi Petrol Bunk, B.M.Road, Hunsur.

PUBLIC NOTICE

Notice is hereby issued to the general public that Mr. MOHAMMED SAMI UR RAHAMAN, S/o. Late. Al Mohammed Vaniya, Residing at # 60 Boulderbrook Drive Toronto, Ontario, M1X2C2 has agreed to sell the Schedule Property to my client/s

Further, it has been informed that the said Mr. Mohammed Sami Ur Rahaman has lost original (1) Sale Deed dated 28/12/1945, (2) Sale Deed dated 15/01/1959, (3) Khata endorsement dated 25/02/1959 and (4) Khata endorsement dated 05/02/2007 and has obtained certified copies of the same. Any person/s asserting any right, title, interest or claim, pending litigation or demand of any nature in or upon the schedule property or with respect to the original documents or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru - 570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE PROPERTY BEARING NO. 3151, NEW NO. L-3, KNOWN AS 'ALI MANZIL', MEASURING 95 FEET BY EAST TO WEST TOWARDS SOUTH, 78 FEET BY EAST TO WEST TOWARDS NORTH AND 31 FEET BY NORTH TO SOUTH TOWARDS EAST AND 75 FEET BY NORTH TO SOUTH TOWARDS WEST, SITUATED AT DAWOOD KHAN ROAD, LASHKAR MOHALLA, MYSURU COMPRISING OF BUILDING ON GROUND, FIRST AND SECOND FLOOR AND BOUNDED ON - EAST BY: PROPERTY BELONGING TO SRI SAHUKAR SRINATH, WEST BY: CONSERVANCY, NORTH BY: PROPERTY BELONGING TO SRI SAHUKAR SRINATH, SOUTH BY: ROAD.

Sd/-M. Sanjay Jain, BBM, LL.B., DCL, DMJFS
Advocate, # L-50/2A, 1st Floor, Ashoka Road, Mysuru - 570 001
E-mail: mej186@yahoo.co.in, Cell : 9341484838
Place: Mysuru Date : 13/06/2022

PUBLIC NOTICE

Notice is given to the general public at large that my client is negotiating and intending to purchase the notice schedule property from its owners Babu Abraham S/o Kuriakose Abraham resident of # 405, 5th Cross, 5th Main, Jagadishnagar, new Tippasandra, Bengaluru. Any individuals, banks, financial institutions, agreement holders etc having any objections for my client entering into any transaction with respect to the schedule property is hereby required to communicate their objections in writing to my office with documentary evidence within 07 days from the date of this publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of the residential site property carved out of alienated land measuring 0-20 Guntas bearing No. 09/C[Unique No.152100700600500018] of Hosahalli Grama Panchayat records, situated at Anagahalli Village, Belagola Hobli, Srirangapatna Taluk, Mandya District, site measuring East to West (28.34 + 27.48 meters)/2 North to South (37.49+35.66 meters)/2 totally admeasuring 693.52 square meters and bounded on the East by: Sites formed out of Sy. No.104, West by: 20 Feet private road; North by: Property of Balliamanda Chitra Somaiah; and South by: Compound wall of Infosys.

Sd/- Milash Arrol Noronha, BBM LL.B.
Advocate & Legal Consultant Office: # 494, 7th Cross, North Park Avenue, Roopanagar, Bogadi Post, Mysore-570 026.
Mob: +91 97439 85891
Email: milasharrol.adv@gmail.com

ಉದ್ಯೋಗ ಅವಕಾಶ / ಬೇಕಾಗಿದ್ದಾರೆ

ಸೀಐ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001
ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟು. ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ. ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಶೂರೆನ್ಸ್ ಪ್ರತಿನಿಧಿಗಳು ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು, ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು, ಸಂದರ್ಶನ: ದಿನಾಂಕ 16/06/2022, ಸಮಯ 11.30ಕ್ಕೆ . ಸಂಪರ್ಕಿಸಿ:
7892303484 / 9483247455

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಮಸ್ತ ಸಾರ್ವಜನಿಕರ ಗಮನಕ್ಕೆ / ತಿಳುವಳಿಕೆಗೆ ಪ್ರಚಾರ ಪಡಿಸುತ್ತಿರುವುದೇನೆಂದರೆ, ನನ್ನ ಕಕ್ಷಿದಾರರಾದ, ಮೈಸೂರು ನಗರ, ಕೆ.ಸಿ.ಲೇಔಟ್, 2ನೇ ಮುಖ್ಯ ರಸ್ತೆ ಮನೆ ನಂ.90 ರಲ್ಲಿ ವಾಸವಾಗಿರುವ ಶ್ರೀ ಶಿವರಾಜು.ಎಸ್. ರವರ ಮಗನಾದ ಶ್ರೀ ದೀಪಕ್‌ಗೌಡ.ಎಸ್ ರವರು ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಜಮೀನನ್ನು ಅದರ ಸಹ ಮಾಲೀಕರುಗಳಾದ ಶ್ರೀ ನಿಜಾಂ ಉದ್ದಿನ್ ಖಾನ್, ಶ್ರೀ ಉಮ್ರುದ್ದಿನ್ ಖಾನ್ ಮತ್ತು ಶ್ರೀಮತಿ ಹಜೀರ ಬೀ (ಇನ್ನು ಮುಂದೆ "ಮಾಲೀಕರು" ಎಂದು ಕರೆಯಲಾಗುವುದು)ರವರುಗಳಿಂದ ಸೂಕ್ತ ಮೌಲ್ಯಯುತವಾದ ಪ್ರತಿಫಲಕ್ಕೆ ಖರೀದಿಸುವ ಇರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲೆ ತಿಳಿಸಿರುವ ಮಾಲೀಕರುಗಳು ಮಾತ್ರ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಅವರ ಸ್ವಾಧೀನದಲ್ಲಿದ್ದು, ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ ಇತರೆ ತಂಟೆ ತಕರಾರಿದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಜಮೀನಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು / ಜಮೀನಿನ ಸಂಬಂಧ ಕ್ರಯದ ಕರಾರು / ಕ್ರಯಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಅನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಐಟಂ ನಂ.1:– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮಹದೇವಪುರ ಗ್ರಾಮದ ಸರ್ವೆ ನಂ.140/1, ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಾಜಪರಮೇಶ್ವರಿ ನಾಲೆ, ಪಶ್ಚಿಮಕ್ಕೆ: ನಾಲೆ ಏರಿ, ಉತ್ತರಕ್ಕೆ : ಸರ್ವೆ ನಂ.140/2 ಮತ್ತು ಇತರ ಜಮೀನು, ದಕ್ಷಿಣಕ್ಕೆ: ಮಾದೇಗೌಡರ ಸರ್ವೆ ನಂ.139ರ ಜಮೀನು.

ಐಟಂ ನಂ.2:– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮಹದೇವಪುರ ಗ್ರಾಮದ ಸರ್ವೆ ನಂ.140/2, ವಿಸ್ತೀರ್ಣ 0 ಎಕರೆ 19 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಾಜಪರಮೇಶ್ವರಿ ನಾಲೆ, ಪಶ್ಚಿಮಕ್ಕೆ : ನಾಲೆ ಏರಿ, ಉತ್ತರಕ್ಕೆ : ಜೋಗೇಗೌಡರ ಸರ್ವೆ ನಂ.141ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.140/1 ಮತ್ತು ಇತರೆ ಜಮೀನು.

ಸಹಿ/– ಎ.ಎ.ಮನುಕುಮಾರ್, ವಕೀಲರು, ಬಿ.ಎಸ್‌ಸಿ., ಎಲ್‌ಎಲ್.ಬಿ.,
ವಕೀಲರು, ನಂ.66/1–ಬಿ1, 1ನೇ ಮಹಡಿ, 3ನೇ ಮುಖ್ಯರಸ್ತೆ, 5ನೇ ಕ್ರಾಸ್ ರಸ್ತೆ, ಆರ್.ಕೆ.ಮೆಡಿಕಲ್ಸ್ ಎದುರು, ಸರಸ್ವತಿಪುರಂ, ಮೈಸೂರು – 570009.
ಮೊಬೈಲ್ ನಂ.9448222306
ದಿನಾಂಕ: 13/06/2022 ಸ್ಥಳ: ಮೈಸೂರು

DGTM Educational Institution
D.G.T.M ENGLISH MEDIUM SCHOOL
NURSERY - PRIMARY - HIGH SCHOOL
Chamundivanam, Near Sterling Theatre, Vidyaranyapuram, Mysuru - 08
E-mail: dgtmschool@gmail.com Website: www.dgtmeducations.org

WANTED TEACHERS

POST	QUALIFICATION
English, Mathematics Science & Social Science Teachers	Graduation in the concerned Subject with B.Ed
EVS	D.Ed / B.Ed
Physical Education Teacher	B.P. Ed
Nursery Teachers	NST / Montessori Training or Any equivalent Qualification

Note: 1. English fluency is a must for candidates
2. Experienced and freshers can also apply
Interested Candidates may mail your detailed resume to
dgtmschool@gmail.com within 19th June 2022
Mob: 9449614880, 0821-4850888, 3501643

MYSORE RACE CLUB LIMITED
P.B.No.11, Race Course Road, Mysore - 570 010
Tel.No. 0821 - 2521676; Email: secretary@mysoreraceclub.com

The body which regulates and conducts horse racing in Mysore wishes to recruit the following personnel:

- **CONTROLLER OF ACCOUNTS:** The incumbent would be responsible for the Accounts Department. The job includes statutory accounting, budgeting, financial reporting, investments etc., The ideal candidates should be a Chartered Accountant with relevant experience and have an impeccable past work record.
- **GENERAL MANAGER – TOTALISATORS, IT & GATES:** The incumbent will be fully responsible for all duties connected to the organization of totalisators on racing and intervenue betting days including administrative arrangements to be made, calculation and declaration of dividends on all races etc., The incumbent would also be in-charge of IT and Gates. The ideal candidate should be a graduate/post graduate with strong accounting and IT background.
- **SECURITY-CUM-VIGILANCE OFFICER:** The incumbent will be fully responsible for the watch and ward of the entire race course including monitoring CCTV footage, vigilance etc., The candidate should have adequate experience in the field with an impeccable past work record. Those retired from defence/police services will be given preference.

The emoluments will be commensurate with qualification and experience.
Interested candidates may apply within 10 days to mrchr2018@gmail.com with their detailed resume.